
ಕನ್ನಡ ಸಾಹಿತ್ಯ ದಿಗ್ಗಜರು

ಭಾಗ-1

ಸಂಪಾದನೆ

ಎನ್. ಆನಂದರಾಮರಾವ್



ಸಮೃದ್ಧ ಸಾಹಿತ್ಯ

ಕನ್ನಡ ಸಾಹಿತ್ಯ ದಿಗ್ಗಜರು

ಸಮೃದ್ಧ ಸಾಹಿತ್ಯದ ೬೧ನೇ ಕೃತಿ

ಕನ್ನಡ ಸಾಹಿತ್ಯ ದಿಗ್ಗಜರು

[೬೦ ಸಾಹಿತಿಗಳ ಕಿರು ಪರಿಚಯ ಲೇಖನಗಳು]

ಭಾಗ-೧

ಸಂಗ್ರಹ

ಎಸ್. ಆನಂದ ರಾಮರಾವ್

ಚಿತ್ರಗಳು

ಎಂ. ನರಸಿಂಹಮೂರ್ತಿ

ಸಮೃದ್ಧ ಸಾಹಿತ್ಯ

121, 2ನೇ ಮುಖ್ಯರಸ್ತೆ, 11ನೇ 'ಬಿ' ಅಡ್ಡರಸ್ತೆ, ವಿಠಲನಗರ
ಬೆಂಗಳೂರು - 560 026, ಮೊ. : 9880773027
ಈ-ಮೇಲ್ : samrudhasahitya@gmail.com

KANNADA SAHITYA DIGGAJARU : by **N. Ananda Rama Rao,** published by Samrudha Sahitya, No. 121, 2nd Main Road, 11th 'B' Cross, Vittalanagar, Bangalore - 560 026, Mob. : 9880773027
E-mail : samrudhasahitya@gmail.com

First Edition	:	2018
Price	:	120/-
Copyright	:	Author
Pages	:	132
Size	:	1/8 Demy
Copies	:	1000
Paper Used	:	70 GSM Maplitho
Drawings	:	M. Narasimhamurthy
Designed by	:	S.R.K. Bangalore
Printers	:	Samrudha Offset Printers Bangalore-26

ಮುನ್ನುಡಿ

ಕನ್ನಡ ಸಾಹಿತ್ಯ ದಿಗ್ಗಜರು (ಭಾಗ-೧) ೬೦ ಜನ ಕನ್ನಡದ ಹಿರಿಯ ಸಾಹಿತಿಗಳ ಸಂಕ್ಷಿಪ್ತ ಪರಿಚಯವನ್ನು ನೀಡುವ ಒಂದು ಕಿರು ಸಂಗ್ರಹ.

ಈ ಸಂಗ್ರಹದಲ್ಲಿರುವ ಎಲ್ಲಾ ಮಹನೀಯರು ಕಳೆದ ಶತಮಾನಗಳಲ್ಲಿ ನಾಡು-ನುಡಿಗಳಿಗಾಗಿ ಅಪಾರವಾಗಿ ದುಡಿದವರು. ಅವರ ಸಾಧನೆ ಚಿರಸ್ಮರಣೀಯ. ಅವರಲ್ಲಿನ ಒಬ್ಬೊಬ್ಬರ ಬಗ್ಗೆಯು ಬರೆಯಹೊರಟರೆ ಪುಟಗಟ್ಟಲೆ ಬರೆಯಬಹುದು. ಆದರೆ ಸಮೃದ್ಧ ಸಾಹಿತ್ಯದ ರೂವಾರಿ ಹಾಗೂ ಮಿತ್ರ ಕೆ. ಆರ್. ಹರ್ಷ ಅವರ ಅಪೇಕ್ಷೆಯೆಂದರೆ-ಈ ಎಲ್ಲಾ ಮಹನೀಯರ ಸಿದ್ಧಿ ಸಾಧನೆಗಳನ್ನು ಒಂದೆರಡು ಪುಟಗಳಲ್ಲಿ ಇಂದಿನ ಯುವಜನತೆಗೆ ಪರಿಚಯ ಮಾಡಿಕೊಡಬೇಕೆನ್ನುವುದು. ಹಾಗಾಗಿ ಆ ಕಾರ್ಯಯೋಜನೆಯ ಮೊದಲ ಭಾಗವಾಗಿ ಈ ಕೃತಿಯನ್ನು ಹೊರತರಲಾಗುತ್ತಿದೆ. ಈ ಕೃತಿಯಲ್ಲಿ ಎಲ್ಲ ಸಾಧಕರ ಜೀವನದ ಪ್ರಮುಖ ಸಂಗತಿಗಳನ್ನು ಮಾತ್ರ ನೀಡಲಾಗಿದೆಯೇ ಹೊರತು ಸಂಪೂರ್ಣ ವಿವರಗಳನ್ನು ನೀಡಲಾಗಿಲ್ಲ.

ಈ ಪುಸ್ತಕ ರಚನೆಯಲ್ಲಿ ನನಗೆ ನೆರವಾದವರು, ಉತ್ತಮ ಲೇಖಕ, ಸಂಘಟಕ, ಪರಿಸರವಾದಿಗಳಾದ ನನ್ನ ಮಿತ್ರ ಎಂ. ನರಸಿಂಹಮೂರ್ತಿಯವರು ನನ್ನ ಬರಹಗಳಿಗೆ ಅಂದವಾದ ಚಿತ್ರಗಳನ್ನು ಬರೆದುಕೊಟ್ಟು ಪುಸ್ತಕಕ್ಕೆ ಶೋಭೆ ತಂದಿದ್ದಾರೆ. ಅವರಿಗೆ ನನ್ನ ವಂದನೆಗಳು.

ಗೆಳೆಯ ಮಂ. ಅ. ವೆಂಕಟೇಶ್‌ರವರು, ತಮ್ಮ ಪತ್ರಿಕಾ ಸಂಗ್ರಹದಿಂದ ಸಾಕಷ್ಟು ಮಾಹಿತಿಯನ್ನು ದೊರಕಿಸಿಕೊಟ್ಟಿದ್ದಾರೆ.

ಈ ಪುಸ್ತಕವನ್ನು ಪ್ರಕಟಿಸುತ್ತಿರುವ ಸಮೃದ್ಧ ಸಾಹಿತ್ಯದ ಹರ್ಷರವರಿಗೆ ಅಕ್ಷರ ಜೋಡಣೆ ಮಾಡಿರುವ ಶ್ರೀ ರಾಮಕೃಷ್ಣರವರಿಗೆ ನನ್ನ ವಂದನೆಗಳು.


ನನ್ನ ಬರವಣಿಗೆಯ ಕಾರ್ಯದಲ್ಲಿ ಸದಾ ತನ್ನ ಸಹಕಾರ ನೀಡುತ್ತಿರುವ ನನ್ನ ಪತ್ನಿ ಉಷಾಗೆ ನನ್ನ ವಂದನೆಗಳು.

-ಎನ್. ಆನಂದರಾಮ ರಾವ್

ಪರಿವಿಡಿ

ಗಳಗನಾಥ

ಜನನ : 05.1.1869 ನಿಧನ : 22.04.1942



ವೆಂಕಟೇಶ ತಿಲಕೋ ಕುಲಕರ್ಣಿಯವರು ಗಳಗನಾಥ ಎಂಬ ಹೆಸರಿನಿಂದಲೇ ಕನ್ನಡ ಓದುಗ ಸಮೂಹಕ್ಕೆ ಪರಿಚಿತರಾಗಿದ್ದಾರೆ. ಗಳಗನಾಥ ಎನ್ನುವುದು ಹಾವೇರಿ ಸಮೀಪದ ಊರಿನ ಹೆಸರು. ಅಲ್ಲಿಯ ದೈವಗಳಗೇಶ್ವರ ದೈವದಿಂದ ಆ ದೇವರು ನೆಲೆಸಿದ ಊರಿಗೆ ಗಳಗನಾಥ ಎಂಬ ಹೆಸರು ಬಂದಿರುವುದು. ಈ ಗಳಗೇಶ್ವರ-ಗಳಗನಾಥವನ್ನೇ ತಮ್ಮ ಸಾಹಿತ್ಯ ನಾಮವನ್ನಾಗಿ ಮಾಡಿಕೊಂಡು ಕುಲಕರ್ಣಿಯವರು ತಾವೂ ಪ್ರಸಿದ್ಧರಾದುದೇ ಅಲ್ಲದೆ ಗಳಗನಾಥನನ್ನೂ ಸಾಹಿತ್ಯಪ್ರಿಯರ ಮನಸ್ಸಿನಲ್ಲಿ ಚಿರಸ್ಥಾಯಿಯಾಗಿಸಿದರು.

ಧಾರ್ಮಿಕ ಶ್ರದ್ಧೆಯಿಂದ ತುಂಬಿದ್ದ ಮನೆತನ, ತುಂಗಭದ್ರಾ-ವರದಾ ನದಿಗಳ ಹಿನ್ನೆಲೆಯ ಗಳಗನಾಥದ ಸುಂದರ ಪ್ರಕೃತಿಯ ಪರಿಸರ ಕುಲಕರ್ಣಿಯವರ ಮೇಲೆ ಪ್ರಭಾವವನ್ನು ಬೀರಿತ್ತು.

ಅಂದಿನ ಕಾಲಕ್ಕೆ, ಹೆಚ್ಚಿನ ಶಿಕ್ಷಣವೆಂದೇ ಪರಿಗಣಿತವಾಗಿದ್ದ ಟ್ರೇನಿಂಗ್ ಕಾಲೇಜ್ ಶಿಕ್ಷಣವನ್ನೂ ಪಡೆದರು. ಅಲ್ಲಿ ಅವರಿಗೆ ಕನ್ನಡ ಭಾಷೆ ಸಾಹಿತ್ಯಗಳನ್ನು ಕಲಿಸಿದವರು ಧೊಂಡೋ ನರಸಿಂಹ ಮುಳಬಾಗಲರು. ಮತ್ತೊಬ್ಬರು ಇತಿಹಾಸದ ಅಧ್ಯಾಪಕ ರಾ.ಹ. ದೇಶಪಾಂಡೆಯವರು. ಇವರಿಬ್ಬರ ಪ್ರಭಾವದಿಂದ ಕುಲಕರ್ಣಿಯವರು ಲೇಖನ ಕಲೆಯನ್ನು ಕೈಗೊಳ್ಳಲು ಪ್ರೇರಕವಾಯಿತು. ತರಬೇತಿಯ ನಂತರ ಅವರು ಶಿಕ್ಷಕ ವೃತ್ತಿಯನ್ನು ಕೈಗೊಂಡು ಉಪ್ಪಿನ ಬೆಟಗೇರಿ ಬಂಕಾಪುರ, ಮುಂಡರಗಿ, ಗುತ್ತಲ ಧಾರವಾಡ ಮುಂತಾದ ಕಡೆಗಳಲ್ಲಿ ಉದ್ಯೋಗ ಮಾಡಿದರು.

ಸುರಳಿತ ಬರವಣಿಗೆಗೆ ಅವರು ಹೆಸರಾಗಿದ್ದರು.

ಅವರು ರಚಿಸಿದ್ದ ಸಾಹಿತ್ಯ ಕೃತಿಗಳು ಸರಿ ಸುಮಾರು ಐವತ್ತು. ಅವುಗಳಲ್ಲಿ ಕೆಲವನ್ನು ಹೆಸರಿಸಬಹುದಾದರೆ, ‘ರಾಣಿಮೃಣಾಲಿನಿ’, ‘ಪ್ರಬುದ್ಧ ಪದ್ಮನಯನೆ’, ‘ದುರ್ಗದ ಬಿಚ್ಚುಗತ್ತಿ’, ‘ಕುಮುದಿನಿ’, ಸತ್ಯಸಾರ’, ‘ಮಾಧವ ಕರುಣಾ ವಿಲಾಸ’ವು ಅವರು ಬರೆದಿರುವ ಏಳು ನೂರಕ್ಕೂ ಹೆಚ್ಚು ಪುಟಗಳ ಐತಿಹಾಸಿಕ ಕಾದಂಬರಿ.

ಧಾರವಾಡದ ವಿದ್ಯಾವರ್ಧಕ ಸಂಘ ಗಳಗನಾಥರ ಮೇಲೆ ಅಪಾರ ಪ್ರಭಾವ ಬೀರಿತ್ತು. ಆ ಸಂಘದಿಂದ ಅದರ ವಾರ್ಷಿಕ ಸ್ಪರ್ಧೆಯಲ್ಲಿ ‘ಪದ್ಮನಯನೆ’ ಕಾದಂಬರಿಗೆ ಪುರಸ್ಕಾರ ದೊರಕಿತ್ತು. ‘ಮಾಧವ ಕರುಣಾವಿಲಾಸ’ಕ್ಕೆ ಸಾಹಿತ್ಯ ಪರಿಷತ್ತಿನ ಗೌರವ ಲಭಿಸಿದೆ.

ಕನ್ನಡದ ಮೊಟ್ಟಮೊದಲ ಮಾಸ ಪತ್ರಿಕೆಯೆಂದೇ ಪರಿಗಣಿತವಾಗಿರುವ ಸದ್ಬೋಧ ಚಂದ್ರಿಕೆಯನ್ನು 1907ರಲ್ಲಿ ಸಂಸ್ಥಾಪಿಸಿದ ಗಳಗನಾಥರು ಅಂದಿನ ಸರ್ಕಾರದ ಕಟ್ಟುಪಾಡಿನಂತೆ ಸಂಪಾದಕರಾಗಲಿಲ್ಲ. ಅಂದಿನಿಂದ ಇಂದಿನವರೆಗೂ ನಿರಂತರವಾಗಿ ನಡೆದುಕೊಂಡು ಬರುತ್ತಿರುವ ಈ ಪತ್ರಿಕೆಯ ಸಾರ್ಥಕ ಸೇವೆಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದೆ.

ಗಳಗನಾಥರು ಕೇವಲ ಲೇಖಕರಾಗಿಯೇ ಅಲ್ಲದೆ ಕರ್ನಾಟಕದ ಉದ್ದಗಲಕ್ಕೂ ಸಂಚರಿಸಿ ಪುಸ್ತಕಗಳನ್ನು ಗಂಟು ಕಟ್ಟಿಕೊಂಡು ಮನೆ ಮನೆಗಳಿಗೆ ಹೋಗಿ ಪುಸ್ತಕಗಳನ್ನು ಮಾರಾಟ ಮಾಡುತ್ತಿದ್ದನು.

ವರನಟ ವರದಾಚಾರ್

ಜನನ : 2.2.1869 **ನಿಧನ : 4.4.1926**



ಬಾಲ್ಯದಿಂದಲೇ ಕಲಾಭಿರುಚಿಯನ್ನು ಹೊಂದಿದ್ದ ವರದಾಚಾರ್ಯರು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಿಂದ ಎಫ್.ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಮೈಸೂರಿನಲ್ಲಿ ಸರ್ಕಾರಿ ಉದ್ಯೋಗಕ್ಕೆ ಸೇರ್ಪಡೆಯಾದರು. ಉದ್ಯೋಗದ ಜೊತೆ ಜೊತೆಗೆ ಗೌರಿ ನರಸಿಂಹಯ್ಯನವರ ಶ್ರೀ ಸರಸ್ವತಿ ವಿಲಾಸ ರತ್ನಾವಳಿ ನಾಟಕ ಸಭಾ ಮಂಡಳಿಯಲ್ಲಿ ಪಾತ್ರ ಮಾಡಲಾರಂಭಿಸಿದರು. ಅಭಿನಯ ಚಾತುರ್ಯವನ್ನು ಮೈಗೂಡಿಸಿಕೊಂಡಿದ್ದ ವರದಾಚಾರ್ಯರು ಸಹಜವಾಗಿಯೇ ಪ್ರೇಕ್ಷಕರ ಮನ್ನಣೆಗೆ ಪಾತ್ರವಾದರು.

ನಾಟಕ ಸಭಾ ಹಲವಾರು ಕಾರಣಗಳಿಂದ ಒಡೆದು ಹೋಯಿತು. ಹಾಗಾಗಿ ವರದಾಚಾರ್ಯರು ಬೆಂಗಳೂರಿಗೆ ಬಂದು ಉದ್ಯೋಗಕ್ಕೆ ಸೇರಿಕೊಂಡರು. ಬೆಂಗಳೂರಿನ ಬೆಂಗಳೂರು ಯೂನಿಯನ್ ಎಂಬ ನಾಟಕ ಸಂಸ್ಥೆಯಲ್ಲಿ ಮತ್ತೆ ಅಭಿನಯಕ್ಕೆ ತೊಡಗಿಕೊಂಡರು ದುರಾದೃಷ್ಟವಶಾತ್ ಕೆಲ ಕಾಲದಲ್ಲಿಯೇ ಆ

ಸಂಸ್ಥೆಯೂ ತನ್ನ ಪ್ರದರ್ಶನಕ್ಕೆ ಮುಕ್ತಾಯ ಹಾಡಿತು. ಇದರಿಂದ ವರದಾಚಾರ್‌ರವರು ರಂಗ ಚಟುವಟಿಕೆಗಳಿಂದ ದೂರವಾಗಬೇಕಾಯಿತು. ಈ ಸಮಯದಲ್ಲಿ ಅವರ ಹೆಂಡತಿ ಮಕ್ಕಳು ಇಹಲೋಕ ತ್ಯಜಿಸಿದರು. ಮತ್ತೆ ಮೈಸೂರಿಗೆ ಹಿಂತಿರುಗಿದ ಅವರು 'ರತ್ನಾವಳಿ ನಾಟಕಸಭಾ' ಎಂಬ ನಾಟಕ ಸಂಸ್ಥೆಯನ್ನು ಪ್ರಾರಂಭಿಸಿ ಅದರಲ್ಲಿ ಅಭಿನಯಿಸತೊಡಗಿದರು.


ವರದಾಚಾರ್‌ರದು ಆಕರ್ಷಕ ಮೈಕಟ್ಟು ನಾಯಕನ ಪಾತ್ರಕ್ಕೆ ಸೂಕ್ತವಾದಂತಹುದು. ಅವರು ವಹಿಸುತ್ತಿದ್ದ ದುಷ್ಯಂತನ ಪಾತ್ರದಿಂದ ನಾಟಕ ರಸಿಕರ ಮನವನ್ನು ಸೂರೆಗೊಂಡಿದ್ದರು. ಇತರೇ ಪೌರಾಣಿಕ ಪಾತ್ರಗಳಾದ ರಾವಣ, ಶಿಶುಪಾಲ, ಹಿರಣ್ಯಕಶಿಪು ಮುಂತಾದ ವೀರರಸ ಪ್ರಧಾನಪಾತ್ರಗಳಲ್ಲಿಯೂ ಅವರ ಅಭಿನಯ ಮೈ ನವಿರೇಳಿಸುವಂತಿತ್ತು; ಭಕ್ತಪ್ರಹ್ಲಾದ ಪಾತ್ರದಲ್ಲಿನ ಹಿರಣ್ಯಕಶಿಪುವಿನ ಪಾತ್ರ ಇವರ ಅಚ್ಚುಮೆಚ್ಚಿನ ಪಾತ್ರ. 1919ರಲ್ಲಿ ವಿಶ್ವ ಕವಿ ರವೀಂದ್ರನಾಥ ಠಾಗೋರರು ಮೈಸೂರಿಗೆ ಭೇಟಿ ನೀಡಿದ್ದಾಗ ಇವರ ನಾಟಕವನ್ನು ನೋಡಿದ ಸಂದರ್ಭದಲ್ಲಿ ಇವರ ಅಭಿನಯಕ್ಕೆ ಮನ ಸೋತಿದ್ದರು. 'ಸ್ವತಃ ಹಿರಣ್ಯಕಶಿಪುವೇ ಈ ನಾಟಕದಲ್ಲಿ ಅಭಿನಯಿಸಿದ್ದರೂ, ವರದಾಚಾರ್‌ರಂತೆ ಅಭಿನಯಿಸುವುದು ಸಾಧ್ಯವಾಗುತ್ತಿರಲಿಲ್ಲ' ಎಂದು ಮನಸಾರೆ ಅವರ ಅಭಿನಯವನ್ನು ಹೊಗಳಿದ್ದರು. ಅಭಿನಯದೊಂದಿಗೆ ಹಾಡುಗಾರಿಕೆಯಲ್ಲಿಯೂ ಅವರು ನಿಷ್ಣಾತರಾಗಿದ್ದರು. ಅವರ ಸಂಗೀತ ವೀಣೆ ಶೇಷಣ್ಣನವರಂತಹ ವಿದ್ವಾಂಸರ ಮೆಚ್ಚುಗೆಗೂ ಪಾತ್ರವಾಗಿತ್ತು.

ಅನೇಕ ವಿದ್ವಾಂಸರಿಂದ ಹೊಸ ಹೊಸ ನಾಟಕಗಳನ್ನು ಬರೆಯಿಸಿ ರಂಗದ ಮೇಲೆ ಪ್ರದರ್ಶಿಸುತ್ತಿದ್ದುದು ಅವರ ವಿಶೇಷತೆಯಾಗಿತ್ತು. ಅವರ ಅಭಿನಯ ಚತುರತೆಗಾಗಿ ಮೈಸೂರು ರಂಗ ಪ್ರೇಮಿಗಳು ವರನಟ ಎಂಬ ಬಿರುದನ್ನಿತ್ತು ಸನ್ಮಾನ ಗೌರವವನ್ನು ನೀಡಿದರು. ಕನ್ನಡ ನಾಡಿನಲ್ಲಿಯೇ ಅಲ್ಲದೆ ದೂರದ ಊರುಗಳಾದ ಕುಂಭಕೋಣಂ, ಮಧುರೆ, ತಿರುಚನಾಪಳ್ಳಿ, ಮೊದಲಾದ ಪ್ರದೇಶಗಳಲ್ಲಿಯೂ ತಮ್ಮ ನಾಟಕಗಳನ್ನು ಪ್ರದರ್ಶಿಸಿ ಅಲ್ಲಿಯ ನಾಟಕಾಸಕ್ತರ ಮೆಚ್ಚುಗೆಗೆ ಪಾತ್ರರಾಗಿದ್ದರು. ಅಲ್ಲದೆ ಅಲ್ಲಿಯ ಆ ಪ್ರೇಕ್ಷಕರಿಂದ ನಟಶಿರೋಮಣಿ ಬಿರುದಿಗೆ ಸಹ ಪಾತ್ರವಾಗಿದ್ದರು.

ಕರ್ನಾಟಕಕ್ಕೆ ತಮ್ಮ ಅಭಿನಯ ಕಲೆಯಿಂದ ಕೀರ್ತಿ ತಂದ ಈ ಹಿರಿಯ ನಟರಿಗೆ ಬೆಂಗಳೂರಿನ ಶೇಷಾದ್ರಿಪುರಂನಲ್ಲಿ ಒಂದು ಕಲಾಮಂದಿರವನ್ನು ಅವರ ಹೆಸರಿನಲ್ಲಿ ನಿರ್ಮಿಸಿ ಗೌರವವನ್ನು ನೀಡಲಾಗಿದೆ.

ಪಂಜೆ ಮಂಗೇಶರಾಯರು

ಜನನ : 20.2.1874 **ನಿಧನ : 24.10.1937**



'ನಾಗರ ಹಾವೇ ಹಾವೊಳು ಹೂವೇ ಬಾಗಿಲ ಬಿಲದಲಿ ನಿನ್ನಯತಾವೇ.'

'ಎಲ್ಲಿ ಭೂರಮೆ ದೇವಸನ್ನಿದಿ ಬಯಸಿ ಬಿಮ್ಮನೆ ಬಂದಳೋ' ಎಂಬ ಕವನಗಳಿಂದ ಸದಾ ಕನ್ನಡಿಗರ ಮನದಲ್ಲಿ ಸ್ಥಾಪಿತವಾಗಿರುವ ಪಂಜೆಮಂಗೇಶ ರಾಯರು 1896ರಲ್ಲಿ ಬಿ.ಎ. ಪದವಿ ಪಡೆದ ನಂತರ ಮಂಗಳೂರಿನ ಸರ್ಕಾರಿ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದರು. ನಂತರ ವಿದ್ಯಾ ಇಲಾಖೆಯಲ್ಲಿಯೇ

ಹಲವಾರು ಪದವಿಗಳಲ್ಲಿ ಕೆಲಸಮಾಡಿ 1929ರಲ್ಲಿ ನಿವೃತ್ತಿಗೊಂಡರು. ಇವರು ಹೆಸರಾಂತ ಕವಿ ಮುದ್ದಣನ ಸಹಪಾಠಿಗಳಾಗಿದ್ದರು.

ಶಿಶು ಸಾಹಿತ್ಯ ರಚನೆಯಲ್ಲಿ ಅಪಾರ ಆಸಕ್ತಿ ಹೊಂದಿದ್ದ ಪಂಜೆಯವರು ಮಕ್ಕಳಿಗಾಗಿಯೇ ವಿಶೇಷವಾಗಿ ಆ ಸಾಹಿತ್ಯವನ್ನು ರಚಿಸಿದರು. ಮಕ್ಕಳ ಸಾಹಿತ್ಯದ ಏಳಿಗೆಗಾಗಿ ಬಾಲ ಸಾಹಿತ್ಯ ಮಂಡಲವೆಂಬ ಸಂಸ್ಥೆಯನ್ನು ಸ್ಥಾಪಿಸಿದರು. ಆಚಾರ್ಯ ಬಿ.ಎಂ.ಶ್ರೀ. ಅವರೊಡಗೂಡಿ ಮೈಸೂರು ವಿಶ್ವವಿದ್ಯಾಲಯಕ್ಕಾಗಿ 'ಜೈಮಿನಿ ಭಾರತ'ವನ್ನು ಸಂಪಾದಿಸಿದರು.

ಗದ್ಯ-ಪದ್ಯಗಳ ರಚನೆಯಲ್ಲಿ ಸಿದ್ಧ ಹಸ್ತರಾದ ಅವರು ತಮ್ಮದೇ ಆದ ಶೈಲಿಯಲ್ಲಿ, ನಿರೂಪಿಸುವ ಸಾಮರ್ಥ್ಯವನ್ನು ಹೊಂದಿದ್ದರು.

ಅಜ್ಜಿಯ ಕಥೆಗಳು, ಕೋಟಿ ಚೆನ್ನಯ್ಯ, ಹುತ್ತರಿ ಹಾಡು ನನ್ನ ಚಿಕ್ಕ ತಂದೆ, ನನ್ನ ಚಿಕ್ಕ ತಾಯಿ (ಕಥೆಗಳು) ವೈದ್ಯರ ಒಗ್ಗರಣೆ (ಹಾಸ್ಯದ ಕಥೆ) ಮರಳಿ ಸೀತಮ್ಮನ ಕರೆಯಪ್ಪ, ಉತ್ತಮ ರಾಜ್ಯ (ಅನುವಾದಿತ ಕವಿತೆಗಳು) ಶಬ್ಧಮಣಿ ದರ್ಪಣ (ಸಂಪಾದನಾಕೃತಿ) ಮುಂತಾದವು ರಚನೆಗಳಲ್ಲಿ ಸೇರಿವೆ.

ನಾಗರಹಾವೇ, ಹಾವೊಳು ಹೂವೆ, ತೆಂಕಣ ಗಾಳಿಯಾಟ ಶ್ರೇಷ್ಠ ಮಕ್ಕಳ ಗೀತೆಗಳಾಗಿ ಇಂದಿಗೂ ಉಳಿದಿವೆ.

ಕವಿಶಿಷ್ಯ, ರಾಮಪಲ, ಹರಟೆಮಲ್ಲ ಎಂದೇ ಪ್ರಸಿದ್ಧರಾಗಿರುವ ಪಂಜೆ ಮಂಗೇಶರಾಯರು ಡಿಸೆಂಬರ್ 1934ರಲ್ಲಿ ರಾಯಚೂರಿನಲ್ಲಿ ನಡೆದ 20ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.


"ನನ್ನ ಅವಸಾನ ಕಾಲದಲ್ಲಿ ಬಾಯಿಂದ ಕೃಷ್ಣ ಕೃಷ್ಣ ಎಂಬ ಮಾತು ಹೊರಡುವಂತೆ ಕನ್ನಡ ಕನ್ನಡ ಎಂಬ ಮಾತೂ ಉಚ್ಚಾರಣೆಯಾಗಲಿ"

– ಪಂಜೆ ಮಂಗೇಶರಾವ್

✲

ಆಲೂರು ವೆಂಕಟರಾಯರು

ಜನನ : 12.7.1880 **ನಿಧನ : 25.2.1964**



ಕನ್ನಡ ಕುಲ ಪುರೋಹಿತರೆಂದೇ ಕನ್ನಡಿಗರಿಂದ ಗೌರವಾದರಗಳಿಂದ ಕರೆಯಿಸಿಕೊಂಡ ಆಲೂರು ವೆಂಕಟರಾಯರು ತಮ್ಮ ಪ್ರೌಢ ವಿದ್ಯಾಭ್ಯಾಸವನ್ನು ಧಾರವಾಡದಲ್ಲಿ ಮುಗಿಸಿಕೊಂಡು ಪುಣೆಯ ಫರ್ಗ್ಯೂಸನ್ ಕಾಲೇಜಿನಲ್ಲಿ ಪದವೀಧರರಾದರು. ಅಂದಿನ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಸೇನಾಪತಿ ಬಾಪಟರು, ವೀರಸಾವರ್ಕರರು ಅವರ ಸಹಾಧ್ಯಾಯಿಗಳಾಗಿದ್ದರು.

ವೆಂಕಟರಾಯರು, ಹಂಪೆಗೆ ಒಮ್ಮೆ ಹೋಗಿದ್ದಾಗ ಹಂಪೆಯ ಗತವೈಭವ ಕಂಡು ಅವರ ಹೃದಯ ಝಲ್ಲೆಂದಿತು. ನೊಂದ ಅವರು ಇತಿಹಾಸದ ಆಳವಾದ

ಅಭ್ಯಾಸವನ್ನಾರಂಭಿಸಿದರು. ಶಿಲಾಲೇಖನಗಳು ತಾಮ್ರಪಟಗಳು, ಪ್ರಾಚೀನ ಗ್ರಂಥಗಳು ಕಾಗದ ಪತ್ರಗಳಲ್ಲಿ ಅಡಕವಾಗಿರುವ ಇತಿಹಾಸದ ಅಂಶಗಳನ್ನು ಸಂಗ್ರಹಿಸಿ ತಮ್ಮ ಅಮರ ಗ್ರಂಥವಾದ 'ಕರ್ನಾಟಕ ಗತವೈಭವ' ಕೃತಿಯನ್ನು ಬರೆದರು. "ಕರ್ನಾಟಕದ ವೀರರತ್ನಗಳು' ಕೃತಿಯಲ್ಲಿ ಕನ್ನಡ ನಾಡಿನ ಮಹಾವೀರರ, ಹುತಾತ್ಮರ ಪರಿಚಯ ಮಾಡಿಕೊಟ್ಟರು.

ಲೋಕಮಾನ್ಯ ಬಾಲ ಗಂಗಾಧರ ತಿಲಕರ "ಗೀತ ರಹಸ್ಯ" ಗ್ರಂಥವನ್ನು ಕನ್ನಡಕ್ಕೆ ಅನುವಾದಿಸಿದರು. ಗೀತಾಭ್ಯಾಸವನ್ನು ಸತತವಾಗಿ ಮಾಡಿದ ವೆಂಕಟ ರಾಯರು ಗೀತೆಯ ಬಗ್ಗೆ ಸ್ವತಂತ್ರ ವ್ಯಾಖ್ಯಾನ ಗ್ರಂಥಗಳನ್ನು ಬರೆದರು. ಗೀತಪ್ರಕಾಶ, ಗೀತಪರಿಮಳ ಗೀತಕುಸುಮ ಮಂಜರಿ ಗ್ರಂಥಗಳು ಈ ನಿಟ್ಟಿನಲ್ಲಿ ಅವರು ಬರೆದ ಗ್ರಂಥಗಳು.

ಶಿಕ್ಷಣಮೀಮಾಂಸೆ, ಸಂಸಾರಸುಖ, ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯವಿದ್ಯಾರಣ್ಯರು ಕರ್ನಾಟಕತ್ವದ ವಿಕಾಸ, ನನ್ನ ಜೀವನ, ಮುಂತಾದವು ಅವರು ಬರೆದಿರುವ ಇತರ ಕೃತಿಗಳು.

ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಕರ್ನಾಟಕ ಇತಿಹಾಸ ಸಂಶೋಧಕ ಮಂಡಳಿಗಳ ಸ್ಥಾಪನೆಗೆ ಕಾರಣರಾದವರಲ್ಲಿ ವೆಂಕಟರಾಯರೂ ಒಬ್ಬರು.

ಕರ್ನಾಟಕದ ಉತ್ಕರ್ಷಕ್ಕಾಗಿ ಚಿಂತಿಸಿ ಹಗಲಿರುಳು, ಅದಕ್ಕಾಗಿ ತನು ಮನ ಧನ ಅರ್ಪಿಸಿದವರಲ್ಲಿ ವೆಂಕಟರಾಯರು ಪ್ರಮುಖರು. ಕನ್ನಡ ಸಾಹಿತ್ಯದ ಬೆಳವಣಿಗೆಗೆ ಅವರು ಜಯ ಕರ್ನಾಟಕ ಮತ್ತು ನವ ಜೀವನ ಗ್ರಂಥ ಮಾಲೆಗಳ ಮೂಲಕ ಸ್ಮರಣೀಯ ಕಾರ್ಯವನ್ನು ಮಾಡಿದ್ದಾರೆ.


ಕರ್ನಾಟಕ ಏಕೀಕರಣದ ಕನಸು ಕಂಡ ಅವರು 1956, ನವೆಂಬರ್ ಒಂದರಂದು ವಿಶಾಲ ಮೈಸೂರು ಎಂದು ರೂಪುಗೊಂಡರೂ ವಿಜಯ ನಗರದ ರಾಜಧಾನಿಯಾಗಿದ್ದ ಹಂಪಿಯಲ್ಲಿ, ಪಂಪಾ ವಿರೂಪಾಕ್ಷನ ಸನ್ನಿಧಿಯಲ್ಲಿ ರಾಜ್ಯೋತ್ಸವ ಕಾರ್ಯಕ್ರಮವನ್ನು ಯಶಸ್ವಿಯಾಗಿ ನೆರವೇರಿಸಿದರು.

1930ರ ಅಕ್ಟೋಬರ್ 5ರಿಂದ 7ರವರೆಗೆ ಮೈಸೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು.

1941ರಲ್ಲಿ ಹೈದರಾಬಾದ್‌ನಲ್ಲಿ ಕನ್ನಡಿಗರ ಸಮ್ಮೇಳನ ನಡೆದಾಗ, ಕರ್ನಾಟಕ ಕುಲ ಪುರೋಹಿತ ಎಂಬ ಬಿರುದನ್ನು ನೀಡಿ ಗೌರವಿಸಲಾಯಿತು.

ಎಂ. ಗೋವಿಂದ ಪೈ

ಜನನ : 23.3.1883 **ನಿಧನ : 6.9.1963**



"ನಾನು ಎರಡು ತಾಯಂದಿರ ಕೂಸು, ಕೊಂಕಣಿ ನನ್ನ ಹೆತ್ತ ತಾಯಿ ಕನ್ನಡ ಸಾಕು ತಾಯಿ" ಎಂದು ಹೇಳುತ್ತಿದ್ದ ಗೋವಿಂದ ಪೈರವರ ವಿದ್ಯಾಭ್ಯಾಸ ಮಂಗಳೂರಿನಲ್ಲಿ ನಡೆಯಿತು. ತಂದೆಯವರ ಅಕಾಲಿಕ ನಿಧನದಿಂದ ವಿದ್ಯಾಭ್ಯಾಸ ವನ್ನು ಮುಂದುವರಿಸಲಾಗದೆ ಅರ್ಧಕ್ಕೆ ನಿಲ್ಲಿಸಿದ ಅವರು ಮನೆಯಲ್ಲಿಯೇ ಅಭ್ಯಾಸ ಮುಂದುವರಿಸಿದರು. ಕನ್ನಡವೇ ಅಲ್ಲದೆ ಕೊಂಕಣಿ, ಇಂಗ್ಲೀಷ್, ಗ್ರೀಕ್, ಫ್ರೆಂಚ್, ಜರ್ಮನ್, ಸಂಸ್ಕೃತ ಪ್ರಾಕೃತ-ಮುಂತಾದ ಭಾಷೆಗಳಲ್ಲಿ ಪ್ರಾವೀಣ್ಯತೆ ಪಡೆದರು.

ಅವರ ಮೊದಲ ಕವನ ಸುವಾಸಿನಿ ಪತ್ರಿಕೆಯಲ್ಲಿ 1900ರಲ್ಲಿ ಪ್ರಕಟವಾಯಿತು. ಅವರ ಮೊತ್ತಮೊದಲ ಕವನ ಸಂಕಲನ ಗಿಳಿಪಿಂಡು. ಇದರಲ್ಲಿ 46 ಪದ್ಯಗಳಿವೆ. ಎರಡನೆ ಕವನ ಸಂಕಲನ ನಂದಾದೀಪ ಅದರಲ್ಲಿ 37 ಪದ್ಯಗಳಿವೆ. ಯೇಸುವಿನ ಕೊನೆಯ ದಿನವನ್ನು ಚಿತ್ರಿಸುವ ನೀಳ್ಗವನ ಗೋಲ್ಗೊಥಾ (1937) ಬುದ್ಧನ ಕುರಿತ ವೈಶಾಖಿ, ಏಕಲವ್ಯನ ಕಥಾವಸ್ತು ಹೊಂದಿರುವ ಹೆಬ್ಬೆರಳು ಇವರು ಬರೆದಿರುವ ಇತರ ಕೃತಿಗಳು. "ಕನ್ನಡದ ಮೊರೆ" ಇವರು ಬರೆದಿರುವ ಆತ್ಮಕಥನ.

ಇತಿಹಾಸ ಹಳಗನ್ನಡ ಕವಿಕಾವ್ಯ ಮತ್ತು ಹೊಸಗನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಸಂಶೋಧನೆ ನಡೆಸಿ ನೃಪತುಂಗನ ಮತ ವಿಚಾರ, ಕರ್ನಾಟಕಕ್ಕೆ ಜೈನ ಧರ್ಮದ ಆಗಮನ, ಕರ್ನಾಟಕದ ಪ್ರಾಚೀನ ರಾಜಮನೆತನ ಮುಂತಾದ ಮೌಲಿಕ ಕೃತಿಗಳನ್ನು ರಚಿಸಿದ್ದಾರೆ.

ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿದಂತೆ ಜೈನ, ಬೌದ್ಧ, ವೀರಶೈವ ಮತಗಳ ಐತಿಹಾಸಿಕ ಸ್ಥಳ ಮತ್ತು ವ್ಯಕ್ತಿಗಳ ಬಗ್ಗೆ ಸಂಶೋಧನೆ ಮಾಡಿದ್ದಾರೆ.

ಪಂಪ, ರನ್ನ, ನಾಗಚಂದ್ರ, ಕುಮಾರವ್ಯಾಸ, ಲಕ್ಷ್ಮೀಶ, ರತ್ನಾಕರವರ್ಣಿ ಮುದ್ದಣ, ಕವಿ ವಿಚಾರ ಕಾಲದೇಶಗಳ ಬಗ್ಗೆ ಸಂಶೋಧನೆ ನಡೆಸಿ ತಮ್ಮ ಸಿದ್ಧಾಂತವನ್ನು ಸಂಶೋಧನಾ ಲೇಖನಗಳಲ್ಲಿ ಮಂಡಿಸಿದ್ದಾರೆ.

ಮದರಾಸು ಸರ್ಕಾರ ಇವರಿಗೆ 'ರಾಷ್ಟ್ರಕವಿ' ಪ್ರಶಸ್ತಿ ನೀಡಿ ಇವರ ವಿದ್ವತ್ತನ್ನು ಗೌರವಿಸಿದೆ.

ಗಿಳಿವಿಂಡು ಕವನ ಸಂಕಲನದಲ್ಲಿ ಪ್ರಕಟವಾಗಿರುವ "ತಾಯೆಬಾರ, ಮೊಗವತೋರ, ಕನ್ನಡಿಗರ ಮಾತೆಯೆ", 'ಕುಲವಧು" ಕನ್ನಡ ಚಿತ್ರದಲ್ಲಿ ಚಿತ್ರಗೀತೆಯಾಗಿ ಬಹು ಜನಪ್ರಿಯವಾಯಿತು. ಈ ಕವಿತೆ ಹಲವು ವರ್ಷಗಳ ಕಾಲ ಅನೇಕ ಶಾಲೆಗಳಲ್ಲಿ ಪ್ರಾರ್ಥನಾ ಗೀತೆಯಾಗಿ ಹಾಡಲ್ಪಡುತ್ತಿತ್ತು.

1951ರ ಡಿಸೆಂಬರ್‌ನಲ್ಲಿ ಮುಂಬಯಿಯಲ್ಲಿ ನಡೆದ 34ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿಯನ್ನಲಂಕರಿಸಿದ್ದರು.

ಬಿ. ಎಂ. ಶ್ರೀಕಂಠಯ್ಯ

ಜನನ : 3.1.1884 **ನಿಧನ : 5.1.1946**



"ಕನ್ನಡದ ಕಣ್ವ" ಎಂದೇ ಖ್ಯಾತರಾದವರು ಬಿ.ಎಂ.ಶ್ರೀ –ಬೆಳ್ಳೂರು ಮೈಲಾರಯ್ಯ ಶ್ರೀ ಕಂಠಯ್ಯನವರು. ಹೊಸಗನ್ನಡದ ಆಚಾರ್ಯ ಪುರುಷರಾದ ಇವರು ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ. ಮುಗಿಸಿ ಮದ್ರಾಸ್‌ನಲ್ಲಿ ಎಂ.ಎ. ಬಿ.ಎಲ್ ಪದವಿ ಪಡೆದರು.

1909ರಲ್ಲಿ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಇಂಗ್ಲೀಷ್ ಉಪನ್ಯಾಸಕರಾಗಿ ಸೇವೆಯನ್ನು ಆರಂಭಿಸಿದ ಶ್ರೀಕಂಠಯ್ಯನವರು ವಿವಿಧ ಹುದ್ದೆಗಳಲ್ಲಿದ್ದು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಸೀನಿಯರ್ ಪ್ರೊಫೆಸರ್ ಆಗಿ ಕರ್ತವ್ಯ ನಿರ್ವಹಿಸಿದರು.

1938 ರಿಂದ 1942ರವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದರು. ಪರಿಷತ್ತಿನ ಮಹಿಳಾ ಶಾಖೆಯನ್ನು ಆರಂಭಿಸಿದ್ದು, ಪರಿಷತ್ತಿನ ಲಾಂಛನ ರೂಪಿಸಿದ್ದು, ಕನ್ನಡ ನುಡಿ ಪತ್ರಿಕೆಯನ್ನು ಆರಂಭಿಸಿದ್ದು ಇವರು ಪರಿಷತ್ತಿಗೆ ನೀಡಿದ ಮಹತ್ತರ ಕೊಡುಗೆಗಳು ಪರಿಷತ್ತಿನ ಪ್ರಕಟಣೆಗಳನ್ನು ಮುದ್ರಿಸಲು ಅದರದೇ ಆದ ಮುದ್ರಣಾಲಯದ ಅಗತ್ಯತೆಯನ್ನು ಕಂಡ ಅವರು ತಮ್ಮ ದುಡಿಮೆಯ ಆರು ಸಾವಿರ ರೂ.ಗಳನ್ನು ದೇಣಿಗೆಯಾಗಿ ನೀಡಿದರು. ಅಂದು ಅವರು ಸ್ಥಾಪಿಸಿದ, ಅಚ್ಚುಕೂಟಕ್ಕೆ ಬಿ.ಎಂ.ಶ್ರೀ. ಅಚ್ಚುಕೂಟ ಎಂದೇ ಹೆಸರಿಡಲಾಗಿದೆ.

1928ರಲ್ಲಿ ಗುಲ್ಬರ್ಗಾದಲ್ಲಿ ನಡೆದ 14ನೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಬಿ.ಎಂ.ಶ್ರೀಯವರು ಇಂಗ್ಲೀಷ್ ಸಾಹಿತ್ಯಕ್ಕೆ ಮನಸೋತಿದ್ದರು. ಕನ್ನಡ ಚಳುವಳಿಗೆ ಬೀಜ ಬಿತ್ತಿದ್ದವರೇ ಅವರೆಂದನ್ನಬಹುದು. ಮೈಸೂರಿನ ಅಗ್ರಹಾರ ರಸ್ತೆಯಲ್ಲಿ ಜಾಗಟೆ ಹೊಡೆದುಕೊಂಡು 'ಕನ್ನಡಕ್ಕೆ ಜಯವಾಗಲಿ' ಎಂದು ಕೂಗಿಕೊಂಡು ಹೋಗುತ್ತಿದ್ದುದೇ ಕನ್ನಡ ಚಳುವಳಿಯ ಪ್ರಾರಂಭ ಎಂದು ಪರಿಗಣಿಸಲಾಗಿದೆ.

ಮೈಸೂರಿನಲ್ಲಿ ಅವರು ಕಾಸಿನ ಸಂಘ ಎಂದು ಸ್ಥಾಪಿಸಿದರು. ಈ ಸಂಘದ ವಿಶೇಷತೆ ಎಂದರೆ ಸಂಘದ ಸದಸ್ಯರು ಮಾತನಾಡುವಾಗ ಇಂಗ್ಲೀಷ್ ಬಳಸುವಂತಿರಲಿಲ್ಲ. ಅಕಸ್ಮಾತ್ ಬಳಸಿದರೆ ಒಂದು ಇಂಗ್ಲೀಷ್ ಶಬ್ಧಕ್ಕೆ ಒಂದು ಕಾಸು ದಂಡ ತೆರಬೇಕಾಗುತ್ತಿತ್ತು.

ಶ್ರೀಕಂಠಯ್ಯನವರು ಕನ್ನಡದಲ್ಲಿ ಬರೆದಿದ್ದಕ್ಕಿಂತ ಕನ್ನಡದ ಪ್ರಚಾರಕ್ಕಾಗಿ ದುಡಿದಿದ್ದೇ ಹೆಚ್ಚು. ಆದರೆ ಬರೆದದ್ದೇ ಕಡಿಮೆಯಾದರೂ ಗುಣಮಟ್ಟದಲ್ಲಿ ಶ್ರೇಷ್ಠ.


ಆಂಗ್ಲ ಕವಿತೆಗಳ ಭಾಷಾಂತರವಾದ 'ಇಂಗ್ಲೀಷ್ ಗೀತೆಗಳು', 'ಕನ್ನಡ ಬಾವುಟ', 'ಹೊಂಗನಸುಗಳು', 'ಕನ್ನಡ ಸಾಹಿತ್ಯ ಚರಿತೆ', 'ಗದಾಯುದ್ಧ', 'ಅಶ್ವತ್ಥಾಮನ್' ಇವರ ಪ್ರಮುಖ ಕೃತಿಗಳು.

ಸಿರಿಗನ್ನಡಂ ಗೆಲ್ಗೆ ಬಾಳ್ಗೆ
ಕನ್ನಡ ನಾಡಿಗೆ ಕನ್ನಡವೇ ಗತಿ

ಅನ್ಯಥಾ ಶರಣಂ ನಾಸ್ತಿ, ಸಂಸ್ಕೃತವಲ್ಲ, ಇಂಗ್ಲೀಷ್ ಅಲ್ಲ, ಹಿಂದಿಯಲ್ಲ.

ಹುಯಿಲಗೋಳ ನಾರಾಯಣರಾಯರು

ಜನನ : 4.10.1884 ನಿಧನ : 4.7.1971



'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು' ಎಂಬ ನಾಡಗೀತೆಯಿಂದ ನಾಡಿನ ಉದ್ದಗಲಕ್ಕೂ ಖ್ಯಾತವಾಗಿರುವ ಹುಯಿಲಗೋಳ ನಾರಾಯಣ ರಾಯರು ಕನ್ನಡದಲ್ಲಿ ಅನೇಕ ಕವನಗಳನ್ನು ಭಕ್ತಿಗೀತೆಗಳನ್ನು ನಾಟಕಗಳನ್ನು ಕತೆ ಕಾದಂಬರಿಗಳನ್ನು ಬರೆದಿರುವ ಪ್ರಸಿದ್ಧ ಸಾಹಿತಿ.

ಅವರ ಹುಟ್ಟೂರು ಗದಗದಲ್ಲಿ ಆರಂಭದ ಶಿಕ್ಷಣವನ್ನು ಪಡೆದ ರಾಯರು ಪುಣೆಯ ಫರ್ಗುಸನ್ ಕಾಲೇಜಿನಲ್ಲಿ ಆರ್ಟ್ಸ್ ಪದವಿಯನ್ನು, ಪುಣೆಯ ಲಾ ಕಾಲೇಜಿನಲ್ಲಿ ಲಾ ಪದವಿಯನ್ನು ಪಡೆದುಕೊಂಡರು.

ಗದಗದಲ್ಲಿ ವಕೀಲ ವೃತ್ತಿ ಆರಂಭಿಸಿದ. ಅವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹಾಗೂ ಕರ್ನಾಟಕ ಏಕೀಕರಣ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡರು.

1924ರಲ್ಲಿ, ಬೆಳಗಾವಿಯಲ್ಲಿ ಕಾಂಗ್ರೆಸ್ ಅಧಿವೇಶನ ನಡೆದಾಗ ಇವರು ರಚಿಸಿದ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಗೀತೆಯನ್ನು ಅಂದು ಬಾಲಕಿಯಾಗಿದ್ದ ಗಂಗೂಬಾಯಿ ಹಾನಗಲ್ ಹಾಡಿದ್ದರು. ನಂತರ ಕರ್ನಾಟಕ ಏಕೀಕರಣವಾಗುವವರೆಗೂ ಈ ಗೀತೆ ಕನ್ನಡಿಗರ ನಾಡಗೀತೆಯಾಗಿ ಕನ್ನಡದ ಎಲ್ಲಾ ಸಭೆ ಸಮಾರಂಭಗಳಲ್ಲಿಯೂ ಹಾಡಲಾಗುತ್ತಿತ್ತು. ಗಾಯಕ ಪಿ. ಕಾಳಿಂಗರಾಯರು, ಕನ್ನಡ ನಾಡಿನ ಪ್ರಕೃತಿ ಸಂಪತ್ತು-ಸಾಹಿತ್ಯ ಕಲೆಗಳ ಸಿರಿ ಎಲ್ಲವನ್ನು ನೆನಪಿಸಿ ನಾಡಿನ ಬಗ್ಗೆ ಅಭಿಮಾನ ಉಕ್ಕಿಸುವ ಈ ಗೀತೆಯನ್ನು ನಾಡಿನ ಉದ್ದಗಲಕ್ಕೂ ಜನಪ್ರಿಯಗೊಳಿಸಿದರು. ಹುಯಿಲಗೋಳ ನಾರಾಯಣ ರಾಯರು ನವೋದಯ ಪೂರ್ವದ ಶ್ರೇಷ್ಠ ಕವಿ ಹಾಗೂ ನಾಟಕಕಾರರಾಗಿದ್ದರು. ಹಲವಾರು ದೇವರ ನಾಮಗಳು, ದೀರ್ಘ ಕಥನ ಕವನಗಳು, ನಾಲ್ಕೈದು ನೂರು ರಂಗಗೀತೆಗಳು, ಹಾಗೂ ಸ್ವಾಗತಗೀತೆಗಳನ್ನು ರಚಿಸಿದ್ದಾರೆ.

ಅಂದಿನ ಕಾಲದ ಪ್ರಭಾತ, ವಾಗ್ಭೂಷಣ, ಸಚಿತ್ರ ಭಾರತಿ, ಸಾಹಿತ್ಯ ಪರಿಷತ್ಪತ್ರಿಕೆ, ಕರ್ನಾಟಕ ಬಂಧು ಮೊದಲಾದ ಪತ್ರಿಕೆಗಳಲ್ಲಿ ಇವರ ಕವನಗಳು ಪ್ರಕಟವಾಗಿದ್ದವು.

ನಾಟಕ ರಚನೆಯಲ್ಲಿಯೂ ಆಸಕ್ತಿ ಹೊಂದಿದ್ದ ಅವರು 13 ನಾಟಕಗಳನ್ನು ಬರೆದಿದ್ದರಲ್ಲದೆ ಅವುಗಳನ್ನು ತಾವೇ ನಿರ್ದೇಶಿಸಿ, ಗದಗಿನ ಯಂಗ್‌ಮೆನ್ಸ್ ಫುಟ್‌ಬಾಲ್ ಕ್ಲಬ್ ಅಸೋಸಿಯೇಷನ್ ತಂಡದ ನಟರ ಮೂಲಕ ರಂಗದ ಮೇಲೆ ಪ್ರದರ್ಶಿಸುತ್ತಿದ್ದರು. ಈ ನಾಟಕ ಪ್ರದರ್ಶನಗಳಿಂದ ಸಂಗ್ರಹವಾಗುತ್ತಿದ್ದ ಹಣವನ್ನು ಸಾಮಾಜಿಕ ಕಾರ್ಯಕ್ಕಾಗಿ ಉಪಯೋಗಿಸುತ್ತಿದ್ದರು.

ಕನ್ನಡ ನಾಟಕ ರಂಗಕ್ಕೆ ನಾರಾಯಣರಾಯರ ಕೊಡುಗೆ ವಿಶಿಷ್ಟವಾದುದು. ಅವರು ಸ್ವತಃ ನಾಟಕಕಾರರು ಅಲ್ಲದೆ ನಟರೂ ಆಗಿದ್ದರು. ಉತ್ತರ ಕರ್ನಾಟಕದಲ್ಲಿ ಮರಾಠಿ ನಾಟಕಗಳ ಪ್ರಾಬಲ್ಯವಿದ್ದ ಕಾಲದಲ್ಲಿ ಕನ್ನಡ ನಾಟಕವನ್ನು ಪ್ರದರ್ಶಿಸಿದರು. ಪೌರಾಣಿಕ ನಾಟಕಗಳಿಗೆ ಪ್ರಾಧಾನ್ಯತೆ ಇದ್ದ ಆ ಸಮಯದಲ್ಲಿ ಸಾಮಾಜಿಕ ನಾಟಕಗಳನ್ನು ಪ್ರದರ್ಶಿಸಿದ್ದು ಅವರ ಪ್ರಗತಿಪರತೆಯ ದ್ಯೋತಕವಾಗಿತ್ತು.

ಅವರು ರಚಿಸಿದ್ದ 'ಪತಿತೋದ್ಧಾರ' ನಾಟಕಕ್ಕೆ 1954ರಲ್ಲಿ ಮುಂಬಯಿ ಸರ್ಕಾರದ ಪ್ರಶಸ್ತಿ ದೊರೆತಿತ್ತು. 1956 ನವೆಂಬರ್ ಒಂದರಂದು ಅಂದಿನ ರಾಜ್ಯಪಾಲರಾಗಿದ್ದ ಶ್ರೀ ಜಯಚಾಮರಾಜ ಒಡೆಯರ್‌ರವರು ಸನ್ಮಾನಿಸಿ ಗೌರವಿಸಿದರು.

ಟಿ. ಪಿ. ಕೈಲಾಸಂ

ಜನನ : 29.7.1885 **ನಿಧನ : 23.11.1946**



ಸಾಮಾಜಿಕ ನಾಟಕಗಳ ಪಿತಾಮಹರೆಂಬ ಅಗ್ಗಳಿಕೆಗೆ ಪಾತ್ರರಾಗಿದ್ದ-ಬೆಂಗಳೂರಿನಲ್ಲಿ ಜನಿಸಿದ ತ್ಯಾಗರಾಜ ಪರಮಶಿವ ಕೈಲಾಸಂ-ಟಿ.ಪಿ. ಕೈಲಾಸಂ ರವರ ವಿದ್ಯಾಭ್ಯಾಸ ಬೆಂಗಳೂರು, ಹಾಸನ, ಮೈಸೂರು ಮತ್ತು ಮದರಾಸಿನಲ್ಲಿ ನಡೆಯಿತು. ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಅವರು ಅಧ್ಯಯನಕ್ಕಾಗಿ ಐಚ್ಛಿಕವಾಗಿ ಆರಿಸಿಕೊಂಡಿದ್ದು ಭೂಗರ್ಭಶಾಸ್ತ್ರವನ್ನು. ಆ ವಿಷಯದಲ್ಲಿ ಅವರು ಬಿ.ಎ. ಪದವಿಯನ್ನು ಪಡೆದರು. ಉಚ್ಚ ಶಿಕ್ಷಣಕ್ಕಾಗಿ ಲಂಡನ್‌ಗೆ 1909ರಲ್ಲಿ ತೆರಳಿದರು. ಲಂಡನ್‌ನಲ್ಲಿ ಅವರು ವಾಸವಿದ್ದುದು ಆರು ವರ್ಷಗಳ ಕಾಲ.

ಅಲ್ಲಿಯ ರಾಯಲ್ ಕಾಲೇಜ್ ಆಫ್ ಸೈನ್ಸ್‌ನಲ್ಲಿ ಭೂಗರ್ಭ ಶಾಸ್ತ್ರವನ್ನು ವ್ಯಾಸಂಗ ಮಾಡಿದರು. ಏಳು ಫಸ್ಟ್ ಕ್ಲಾಸ್‌ಗಳನ್ನು ಪಡೆದ ಹೆಗ್ಗಳಿಕೆ ಅವರದು. ಅವರು ಲಂಡನ್‌ನಲ್ಲಿದ್ದಾಗ ಅಧ್ಯಯನದ ಜೊತೆ ಜೊತೆಗೇ ಅಲ್ಲಿಯ ಜನ ಜೀವನ, ಹಾಡುಕುಣಿತಗಳನ್ನು ಕಲಿತರು. ಲಂಡನ್ನಿನ ನಾಟಕರಂಗಕ್ಕೆ ಆಕರ್ಷಿತರಾಗಿದ್ದ ಅವರು ಅವರ ವಾಸ್ತವ್ಯದ ಅವಧಿಯಲ್ಲಿ ಅಲ್ಲಿ ಪ್ರದರ್ಶಿತವಾದ ಸರಿ ಸುಮಾರು ಎಲ್ಲ ನಾಟಕಗಳನ್ನು ವೀಕ್ಷಿಸಿದರು.

ಲಂಡನ್‌ನಿಂದ ಹಿಂತಿರುಗಿದ ನಂತರ ಸರ್ಕಾರದ ಉದ್ಯೋಗಕ್ಕೆ ಅವರು ಸೇರಿದರು. ಬಹು ಕಾಲ ಅದಕ್ಕೆ ಅಂಟಿಕೊಳ್ಳದೆ ನಾಟಕದ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿದರು. ನಾಟಕ ರಂಗಕ್ಕೆ ತಮ್ಮ ಜೀವನವನ್ನು ಮುಡಿಪಾಗಿಟ್ಟ ಅವರು ನಾಟಕ ರಂಗಕ್ಕೆ ಆಧುನಿಕ ರೂಪವನ್ನು ನೀಡುವುದರಲ್ಲಿ ನಾಟಕ ರಂಗದ ಬೆಳವಣಿಗೆಗೆ ಕಾರಣವಾದರು.


1918ರಿಂದ ನಾಟಕ, ರಚನೆಗೆ ತೊಡಗಿದ ಇವರು ರಚಿಸಿದ ಪ್ರಥಮ ನಾಟಕ 'ಟೊಳ್ಳುಗಟ್ಟಿ'. ಅಲ್ಲಿಂದ ಆರಂಭವಾದ ಇವರ ನಾಟಕ ರಚನೆ ಅವ್ಯಾಹತವಾಗಿ ನಡೆದು ಹಲವಾರು ಕೃತಿಗಳನ್ನು ರಚಿಸಿದರು. ಅವುಗಳಲ್ಲಿ ಕೆಲವನ್ನು ಹೆಸರಿಸಬಹುದಾದರೆ ತಾಳ ಕಟ್ಟೋಕೂಲಿನೇ ಸಾತೂತೌರ್ಮನೆ ಪೋಲಿ ಕಿಟ್ಟಿ, ಹೋಂರೂಲು, ಅಮ್ಮಾವ್ರಗಂಡ, ಬಂಡ್ವಾಳವಿಲ್ಲದ ಬಡಾಯಿ, ಮುಂತಾದವು. ಇಂಗ್ಲೀಷಿನಲ್ಲಿ ಕರ್ಣ, ಕೀಚಕ ನಾಟಕಗಳನ್ನು ರಚಿಸಿದ್ದಾರೆ.

ಅವರ ಕಾವ್ಯನಾಮ ಗುಂಡೂ.

1945ರ ಡಿಸೆಂಬರ್‌ನಲ್ಲಿ ಮದರಾಸಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷರಾಗಿದ್ದರು.

ಡಿ. ವಿ. ಗುಂಡಪ್ಪ

ಜನನ : 17.3.1887 **ನಿಧನ : 7.10.1975**



ಡಿ.ವಿ.ಜಿ. ಎಂಬ ಮೂರಕ್ಷರಗಳಿಂದ ಪ್ರಖ್ಯಾತರಾಗಿರುವ ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪನವರು ಕನ್ನಡ ಸಾಹಿತ್ಯದ ದಿಗ್ಗಜಗಳಲ್ಲೊಬ್ಬರು. ಅವರ ಆರಂಭಿಕ ವಿದ್ಯಾಭ್ಯಾಸ ಅವರು ಹುಟ್ಟಿದ ಮುಳಬಾಗಿಲು, ಕೋಲಾರಗಳಲ್ಲಿ ನಡೆಯಿತು. ಮೆಟ್ರಿಕ್ ತನಕ ಓದಿದ ಅವರು ಕಾರಣಾಂತರದಿಂದ ಹೆಚ್ಚಿನ ವಿದ್ಯಾಭ್ಯಾಸವನ್ನು ಮುಂದುವರೆಸಲಾಗಲಿಲ್ಲ. ಆದರೆ ಸಾಹಿತ್ಯದಲ್ಲಿ ಒಲವಿದ್ದ ಅವರು ಬೆಂಗಳೂರಿನಲ್ಲಿ ನೆಲೆಸಿ ಪತ್ರಿಕೋದ್ಯಮದಿಂದ ತಮ್ಮ ಜೀವನವನ್ನು ಆರಂಭಿಸಿದರು. 'ಸೂರ್ಯೋದಯ ಪ್ರಕಾಶಿಕಾ' ಪತ್ರಿಕೆಯಿಂದ ಪತ್ರಿಕಾ ವೃತ್ತಿಗೆ ಪ್ರವೇಶಿಸಿದ ಡಿ.ವಿ.ಜಿಯವರು ನಂತರ ಭಾರತ ದಿನಪತ್ರಿಕೆಯನ್ನು ಒಂದು ವರ್ಷ

ನಡೆಸಿದರು. ನಂತರ 'ಮೈಸೂರು ಟೈಂಸ್', 'ಕರ್ನಾಟಕ' ಪತ್ರಿಕೆಗಳಲ್ಲಿ ಸಂಪಾದಕತ್ವವನ್ನು ನಿರ್ವಹಿಸಿದರು.

ಲೋಕಮಾನ್ಯ ಬಾಲಗಂಗಾಧರ ತಿಲಕರಿಂದ ಪ್ರಭಾವಿತರಾಗಿ ರಾಜಕೀಯ ಕ್ಷೇತ್ರದಲ್ಲಿ ಪರಿಣಾಮಕಾರೀ ಪಾತ್ರವನ್ನು ನಿರ್ವಹಿಸಿದರು.

ಮೈಸೂರು ರಾಜಕೀಯದಲ್ಲಿಯೂ ಪ್ರಭಾವ ಪೂರ್ಣ ಪಾತ್ರವನ್ನು ವಹಿಸಿದ್ದರು.

ಬೆಂಗಳೂರು ಪುರಸಭೆಯ ಸದಸ್ಯರಾಗಿ, ಮೈಸೂರು ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿ, ರಾಜ್ಯದ ಸುಧಾರಣಾ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದರು. 1926-40ರ ಅವಧಿಯಲ್ಲಿ ಮೈಸೂರು ಶಾಸನ ಪರಿಷತ್ತಿನ ಸದಸ್ಯರಾಗಿದ್ದರು.


ಗೋಖಲೆಯವರ ವಿಚಾರಗಳಿಂದ ಪ್ರಭಾವಿತರಾಗಿದ್ದ ಡಿ.ವಿ.ಜಿಯವರು 1945ರಲ್ಲಿ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯನ್ನು ಸ್ಥಾಪಿಸಿದರು ಮತ್ತು ಅದರ ಸ್ಥಾಪಕ ಕಾರ್ಯದರ್ಶಿಯಾಗಿ ತಮ್ಮ ತನು ಮನ ಧನವನ್ನು ಅದರ ಬೆಳವಣಿಗೆಗಾಗಿ ಸಮರ್ಪಿಸಿದರು. ಅವರ 82ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ಸನ್ಮಾನ ಸಮಿತಿ ಅರ್ಪಿಸಿದ ಗೌರವಧನ (90000 ರೂ)ವನ್ನು ಸಂಸ್ಥೆಗೆ ನೀಡಿದ್ದು ಅವರ ಔದಾರ್ಯದ ಕುರುಹಾಗಿತ್ತು.

ಅವರ ಸಾಹಿತ್ಯ ರಚನೆಯಲ್ಲಿ ಮಹಾಪುರುಷರ ಜೀವನ ಚಿತ್ರಗಳು ವಿಮರ್ಶನಾ ಲೇಖನಗಳು, ಕಾವ್ಯಗಳು ಮೂಡಿ ಬಂದಿದ್ದು, ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿವೆ. "ಉಮರನ ಒಸಗೆ', "ಅಂತಃಪುರಗೀತೆಗಳು" "ವಸಂತ ಕುಸುಮಾಂಜಲಿ" "ಗೀತ ಶಾಕುಂತಲ" ಅವರ ಕೆಲವು ಪ್ರಸಿದ್ಧ ಕೃತಿಗಳು. ಕನ್ನಡದ ಭಗವದ್ಗೀತೆಯೆಂದೇ ಪ್ರಸಿದ್ಧವಾದ 'ಮಂಕುತಿಮ್ಮನ ಕಗ್ಗ' ಅವರ ಮೇರು ಕೃತಿ. 'ಶ್ರೀಮದ್ಭಗವದ್ಗೀತಾ ತಾತ್ಪರ್ಯ ಅಥವಾ ಜೀವನ ಧರ್ಮ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ಲಭಿಸಿದೆ.

1962ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಗೌರವ ಡಿ.ಲಿಟ್ ಪದವಿ ಲಭಿಸಿದೆ. 1932ರ ಡಿಸೆಂಬರ್ 28ರಿಂದ 30ರ ವರೆಗೆ ಮಡಿಕೇರಿಯಲ್ಲಿ ನಡೆದ 18ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು.

ನಂಜನಗೂಡು ತಿರುಮಲಾಂಬ

ಜನನ : **25.3.1887** ನಿಧನ : **31.8.1982**



ಆಧುನಿಕ ಕನ್ನಡದ ಮೊದಲ ಲೇಖಕಿ ಎಂದೇ ಪರಿಗಣಿತರಾಗಿರುವ ನಂಜನಗೂಡು ತಿರುಮಲಾಂಬರವರಿಗೆ ಹತ್ತು ವರ್ಷಗಳಾಗಿದ್ದಾಗಲೇ ವಿವಾಹ ವಾಯಿತಾದರೂ, ವೈವಾಹಿಕ ಬಾಳುವೆ ಆರಂಭವಾಗುವ ಮುಂಚೆಯೇ ಗಂಡನ ಅಕಾಲಿಕ ನಿಧನದಿಂದ ವಿಧವೆಯಾಗಬೇಕಾದ ನತದೃಷ್ಟರಾದರು. ತಂದೆಯ ಪ್ರೋತ್ಸಾಹ ಹಾಗೂ ಅವರ ದೂರದೃಷ್ಟಿಯಿಂದ ಮನೆಯಲ್ಲಿಯೇ ವಿದ್ಯೆ ಕಲಿತರು. ಓದುವುದು ಬರೆಯುವುದನ್ನು ಜೀವನದ ಉಸಿರನ್ನಾಗಿ ಮಾಡಿಕೊಂಡ ತಿರಮಲಾಂಬರವರು ಒಂದರ ನಂತರ ಒಂದರಂತೆ ಅನೇಕ ಕೃತಿಗಳನ್ನು ಬರೆದರು. "ಸರಸ್ವತಿ (ಭಾರತಿ) ಪೊರೆಯೆನ್ನನು" ಎನ್ನುವುದು ಅವರು ರಚಿಸಿದ ಮೊದಲ ಗೀತೆ. ಅನಂತರ, ಹಲವಾರು ಭಕ್ತಿಗೀತೆಗಳನ್ನು ಬರೆದು ಅವೆಲ್ಲವು "ಭಕ್ತಿಗೀತಾಂಜಲಿ' ಎನ್ನುವ ಹೆಸರಲ್ಲಿ ಪುಸ್ತಕವಾಗಿ ಪ್ರಕಟವಾಯಿತು.

ತಿರುಮಲಾಂಬರವರು ಹಲವಾರು ಪುಸ್ತಕಗಳನ್ನು ಬರೆದಿದ್ದರೂ ಅವುಗಳನ್ನು ಪ್ರಕಟಿಸುವ ಪ್ರಕಾಶಕರ ಪರಿಚಯ ಅವರಿಗಿಲ್ಲದುದರಿಂದ 1913ರಲ್ಲಿ ಅವರೇ 'ಸತೀ ಹಿತೈಷಿಣಿ" ಗ್ರಂಥಮಾಲೆ ಎಂಬ ಪ್ರಕಾಶನ ಸಂಸ್ಥೆಯನ್ನು ಆರಂಭಿಸಿ ತಮ್ಮ ಪುಸ್ತಕಗಳನ್ನು ತಾವೇ ಪ್ರಕಟಿಸುವ ಸಾಹಸಕ್ಕೆ ಕೈ ಹಾಕಿದರು.

ಅವರು ರಚಿಸಿದ ಪುಸ್ತಕಗಳ ಸಂಖ್ಯೆ 28. ಅವುಗಳಲ್ಲಿ ಸಾವಿತ್ರಿ ಚರಿತ್ರೆ (ಯಕ್ಷಗಾನ), ಜಾನಕಿ ಕಲ್ಯಾಣ (ನಾಟಕ), ಸುಭಾ, ವಿರಾಗಿಣಿ ವಿದ್ಯುಲ್ಲತಾ, ಸುಮುಖೀ ವಿಜಯ (ಕಾದಂಬರಿಗಳು), ಅಜಮಿಳೋಪಾಖ್ಯಾನ (ಕಾವ್ಯಗ್ರಂಥ), ಮಣಿಮಾಲಾ (ಅವರ ಕೊನೆಯ ಕೃತಿ)ಗಳನ್ನು ಹೆಸರಿಸಬಹುದಾಗಿದೆ. ಇವರು ರಚಿಸಿದ ಕೃತಿಗಳು ಅಂದಿನ ಕಾಲದಲ್ಲಿ ಓದುಗರ ಮೆಚ್ಚುಗೆಯನ್ನು ಪಡೆದಿದ್ದು ಕೆಲವು ಕೃತಿಗಳು ಮರುಮುದ್ರಣಭಾಗ್ಯವನ್ನು ಕಂಡಿವೆ. ಅನೇಕ ಕೃತಿಗಳಿಗೆ ಮೈಸೂರು, ಮದರಾಸು ಸರ್ಕಾರಗಳಿಂದ ಬಹುಮಾನ ಬಂದಿತ್ತಲ್ಲದೆ ಒಂದೆರಡು ಪುಸ್ತಕಗಳು ಶಾಲಾ ಕಾಲೇಜುಗಳಿಗೆ ಪಠ್ಯ ಪುಸ್ತಕಗಳಾಗಿದ್ದವು.


'ಕರ್ನಾಟಕ ನಂದಿನಿ', 'ಸನ್ಮಾರ್ಗದರ್ಶಿ' ಎಂಬ ಮಾಸಪತ್ರಿಕೆಗಳ ಸಂಪಾದಕರಾಗಿ ಮೊದಲ ಪತ್ರಿಕಾ ಸಂಪಾದಕಿ ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ.

1979-80ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು 1980-81ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡಮಿಗಳಿಂದ ಪ್ರಶಸ್ತಿ ಪುರಸ್ಕೃತರಾಗಿದ್ದಾರೆ.

ತಿರುಮಲಾಂಬ ಅವರ ಹೆಸರಿನಲ್ಲಿ ಬೆಂಗಳೂರಿನ NMKRV ಕಾಲೇಜಿನಲ್ಲಿ ಸ್ಥಾಪಿತವಾಗಿರುವ ಶಾಶ್ವತಿ ಸಂಸ್ಥೆಯ ಮೂಲಕ ಪ್ರತಿವರ್ಷ ಭಾರತದ ಒಂದು ಭಾಷೆಯ ಉತ್ತಮ ಲೇಖಕಿಗೆ ಹತ್ತು ಸಾವಿರ ರೂಗಳನ್ನು ಮತ್ತು ಒಂದು ಕಂಚಿನ ಕಾಮಧೇನುವಿನ ಪ್ರತಿಮೆಯನ್ನು ಅವರ ಹೆಸರಿನಲ್ಲಿ ನೀಡಲಾಗುತ್ತಿದೆ.

ಮಲ್ಲಾಡಿಹಳ್ಳಿ ರಾಘವೇಂದ್ರ ಸ್ವಾಮಿ

ಜನನ : 27.7.1890 **ನಿಧನ : 31.1.1996**



ಅಭಿನವ ಧನ್ವಂತರಿ ಎಂದೇ ಗೌರವಿಸಲ್ಪಟ್ಟಿರುವ ಶ್ರೀ ಮಲ್ಲಾಡಿಹಳ್ಳಿ ರಾಘವೇಂದ್ರ ಸ್ವಾಮಿಗಳು ಕೇರಳದಲ್ಲಿ ಜನಿಸಿ, ಕರ್ನಾಟಕದ ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕಿನ ಮಲ್ಲಾಡಿಹಳ್ಳಿಯನ್ನೇ ತಮ್ಮ ಸೇವಾ ಕೇಂದ್ರವಾಗಿರಿಸಿ ಕೊಂಡು ಅಲ್ಲಿಯ ಜನಗಳಿಗೆ ತಮ್ಮ ನಿಃಸ್ಪೃಹ ಸೇವೆ ಸಲ್ಲಿಸಿದ್ದು ಅಲ್ಲಿಯ ಜನರ ಸುಯೋಗವೇ ಸರಿ.

ಹುಟ್ಟಿದಾಗಲೇ, ಬಾಲ ರೋಗಕ್ಕೆ ತುತ್ತಾಗಿದ್ದ, ಮಾಂಸದ ಮುದ್ದೆಯಂತಿದ್ದ ಮಗು–ಕುಮಾರಸ್ವಾಮಿ–ವನ್ನು ಮಂತ್ರಾಲಯದ ಯತಿಗಳು ಆಶೀರ್ವದಿಸಿ ಅನುಗ್ರಹಿಸಿ 'ರಾಘವೇಂದ್ರ' ಎಂದು ಕರೆದರು.

ಸಾಕುತಾಯಿ ಪುಥಲಿಬಾಯಿಯವರ ಪಾಲನೆ ಪೋಷಣೆಯಿಂದ

ರಾಘವೇಂದ್ರರು ಚೇತರಿಸಿಕೊಂಡು ಎಲ್ಲ ಮಕ್ಕಳಂತೆ ಆರೋಗ್ಯವಂತರಾದರು ದೈವ ಸಾಕ್ಷಾತ್ಕಾರಕ್ಕೆ ಹಂಬಲಿಸುತ್ತಿದ್ದ ರಾಘವೇಂದ್ರರು ಅನೇಕ ಮಹಾತ್ಮರನ್ನು, ಸ್ವಾಮಿಗಳನ್ನು ಭೇಟಿ ಮಾಡಿದರು. ದೇಹದಾರ್ಢ್ಯವನ್ನು ಉತ್ತಮಗೊಳಿಸಿಕೊಂಡು ರಾಷ್ಟ್ರಸೇವೆಯ ಕನಸನ್ನು ಈಡೇರಿಸಿಕೊಳ್ಳುವಂತೆ ಎಲ್ಲಾ ಯೋಗಿ ವರ್ಯರು ಅವರಿಗೆ ಬೋಧಿಸಿದರು.

ಬರೋಡದ 'ಜುಮ್ಮಾದಾದ ವ್ಯಾಯಾಮ ಶಾಲೆ'ಯು ನಡೆಸಿದ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿ B.P.C. (Bachelor of Physical Culture) ಎಂಬ ಪದವಿಯನ್ನು ಪಡೆದರು. ಲಾಹೋರಿನ ಕೈವಲ್ಯಧಾಮ ಆಶ್ರಮದಲ್ಲಿ ಆಯುರ್ವೇದ, ಸಿದ್ಧವಿದ್ಯೆ, ಅಸ್ತಿ ಸಂಧಾನ ಕಲೆ, ಯುನಾನಿ ವೈದ್ಯ ಪದ್ಧತಿಗಳನ್ನು ಕಲಿತರು. ಯೋಗ ವಿದ್ಯೆಯಲ್ಲಿ ನಿಷ್ಣಾತರಾಗಿ ತಮ್ಮ ಗುರುಗಳಾದ ಶಿವಾನಂದರ ಆದರ ವಿಶ್ವಾಸಗಳಿಗೆ ಪಾತ್ರರಾದರು. ಗುರುಗಳ ಸಲಹೆಯಂತೆ ರಾಘವೇಂದ್ರರು ಹಳ್ಳಿ ಹಳ್ಳಿಗಳಲ್ಲಿ ಸಂಚಾರ ಮಾಡಿ, ಯೋಗಶಿಬಿರಗಳನ್ನು ಆರಂಭಿಸಿ ಅಲ್ಲಿಯ ಜನಗಳನ್ನು ಉದ್ಧಾರ ಮಾಡುತ್ತಾ ಕೊನೆಗೆ ಮಲ್ಲಾಡಿ ಹಳ್ಳಿಗೆ ಬಂದು ನೆಲೆಸಿದರು.

ಮಲ್ಲಾಡಿ ಹಳ್ಳಿಯನ್ನೇ ತಮ್ಮ ಸೇವಾ ಕೇಂದ್ರವಾಗಿ ಮಾಡಿಕೊಂಡ ಅವರು ಅನಾಥ ಸೇವಾಶ್ರಮವನ್ನು ಸ್ಥಾಪಿಸಿ ತನ್ಮೂಲಕ ಅನಾಥರಿಗೆ, ಬಡಮಕ್ಕಳಿಗೆ ತಮ್ಮ ವಾತ್ಸಲ್ಯಪೂರಿತ ಸೇವೆಯನ್ನು ನೀಡಿದರು. ಯೋಗಶಿಬಿರದ ಮೂಲಕ ಅಷ್ಟಾಂಗ ಯೋಗ ಆಯುರ್ವೇದ ವಿಭಾಗಗಳಿಂದ ಆಯ್ದ ಕೆಲವು ಶಾಸ್ತ್ರ, ತಂತ್ರಗಳನ್ನು ಬೋಧಿಸುತ್ತಿದ್ದರು.

ಪ್ರತಿ ವರ್ಷವೂ ಶ್ರಾವಣ ಮಾಸದಲ್ಲಿ ರಾಘವೇಂದ್ರರು ಮೌನವ್ರತಧಾರಣೆ ಮಾಡುತ್ತಿದ್ದರು. ಆ ಸಮಯದಲ್ಲಿ ಸಾಹಿತ್ಯ, ರಚನೆಯನ್ನು ಕೈಗೊಳ್ಳುತ್ತಿದ್ದರು. 'ತಿರುಕ'ನೆಂಬ ಹೆಸರಿನಲ್ಲಿ ಸಾವಿರಾರು ಪುಟಗಳ ಸಾಹಿತ್ಯ ರಚನೆ ಮಾಡಿದ್ದಾರೆ. ಕಾವ್ಯ (4), ಕಾದಂಬರಿ (9), ನಾಟಕಗಳು (12) ಗೀತನಾಟಕ (2), ಏಕ ಪಾತ್ರಾಭಿನಯ (7) ವಚನ ಸಾಹಿತ್ಯ (1) ಕಥಾಸಂಕಲನ (3) ಆಯುರ್ವೇದ (4) ಯೋಗ (4)–ಹೀಗೆ ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಸಾಹಿತ್ಯ ರಚನೆ ಮಾಡಿದ್ದಾರೆ.

ಜೋಳಿಗೆಯ ಪವಾಡ, ಆತ್ಮನಿವೇದನೆ, ಭಾವಬಿಂದು, ಬೃಹತ್ ಯೋಗದರ್ಶನ, ದೇವರು ಯಾರು? ಇವರಿಂದ ರಚಿತವಾಗಿರುವ ಇತರ ಕೃತಿಗಳು.

ಪದವಿ, ಪ್ರಶಸ್ತಿ, ಪುರಸ್ಕಾರಗಳಿಗೆ ಎಂದೂ ಹಂಬಲಿಸದ ಅವರು ಕರ್ನಾಟಕ ಸರ್ಕಾರ ಅವರನ್ನು ಸನ್ಮಾನಿಸಲು ಪದ್ಮಭೂಷಣ, ಪದ್ಮವಿಭೂಷಣ ಪ್ರಶಸ್ತಿಗಳ ಬಗ್ಗೆ ಹಲವಾರು ಬಾರಿ ಪ್ರಸ್ತಾಪಿಸಿದಾಗ, ಅದನ್ನು ನಯವಾಗಿ ತಿರಸ್ಕರಿಸುತ್ತಾ "ಪ್ರಶಸ್ತಿಗಳೆಲ್ಲಾ ನನಗೆ ಬೇಡ, ಆಶ್ರಮದ ಚಟುವಟಿಕೆಗೆ ಹಣದ ಕೊರತೆ ಇದೆ. ಅದನ್ನು ಕೊಡಿ" ಎಂದು ಕೇಳುತ್ತಿದ್ದರು. ಕುವೆಂಪು ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ ಪ್ರಶಸ್ತಿ ನೀಡುವುದಾಗಿ ತಿಳಿಸಿದಾಗಲೂ ಅವರ ನಿಲುವು ಬದಲಾಗಲಿಲ್ಲ.

'ತಿರುಕ' ಎಂಬ ಕಾವ್ಯನಾಮದಲ್ಲಿ ಬರೆದ ಪುಸ್ತಕಗಳಿಂದ ಮಾರಾಟವಾಗಿ ಬಂದ ಹಣದಿಂದ, ಜೋಳಿಗೆ ಹಿಡಿದು ಬೇಡಿ ಸಂಗ್ರಹವಾದ ಹಣದಿಂದ, ದಾನಿಗಳು ಸ್ವಯಂಪ್ರೇರಿತವಾಗಿ ನೀಡುತ್ತಿದ್ದ ಹಣ ಸಹಾಯದಿಂದ ಆಶ್ರಮದ ಖರ್ಚನ್ನು ಸರಿದೂಗಿಸುತ್ತಿದ್ದರು.

1991ರಲ್ಲಿ ಅವರ ನೂರನೇ ಹುಟ್ಟುಹಬ್ಬದ ಸಂದರ್ಭದಲ್ಲಿ ಅವರು ಬರೆದ ಪುಟ್ಟ ಪುಸ್ತಕ 'ಆತ್ಮನಿವೇದನೆ' ಪ್ರಕಟವಾಯಿತು. ಅವರ ಶಿಷ್ಯರು, ಅಭಿಮಾನಿಗಳ ಕೋರಿಕೆಯಂತೆ ತಮ್ಮ ಆತ್ಮಚರಿತ್ರೆ 'ಜೋಳಿಗೆ ಪವಾಡ'ವನ್ನು ಬರೆದರು.

ಮಾಸ್ತಿ ವೆಂಕಟೇಶ ಅಯ್ಯಂಗಾರ್

ಜನನ : 6.6.1891 ನಿಧನ : 6.6.1986



ಮಾಸ್ತಿ ಕನ್ನಡದ ಆಸ್ತಿ, ಸಣ್ಣ ಕತೆಗಳ ಜನಕ ಎಂದೆಲ್ಲ ಹೆಸರಾದ ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರು 'ಶ್ರೀನಿವಾಸ' ಕಾವ್ಯನಾಮದಿಂದ ಸಾಹಿತ್ಯ ರಚನೆ ಮಾಡಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದವರು. ಎಂಟು ದಶಕಗಳ ಕಾಲದ ಅವರ ಸಾಹಿತ್ಯ ರಚನೆಯಲ್ಲಿ ಮಹಾನ್ ಕವಿಗಳಾಗಿ, ಕಥೆಗಾರರಾಗಿ ಕಾದಂಬರಿಕಾರರಾಗಿ ನಾಟಕಕಾರರಾಗಿ ವಿಮರ್ಶಕರಾಗಿ ಸಾಹಿತ್ಯ ಸೃಷ್ಟಿ ಮಾಡಿದವರು.

ಮಾಲೂರು ತಾಲೂಕಿನ ಮಾಸ್ತಿಯಲ್ಲಿ ಜನಿಸಿದ ಅವರು ಎಂ.ಎ. ಪದವಿಗಳಿಸಿದ ನಂತರ ಅಧ್ಯಾಪಕರಾಗಿ ಸೇವೆ ಸಲ್ಲಿಸಿ ನಂತರ ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಅಸಿಸ್ಟೆಂಟ್ ಕಮಿಷನರ್ ಆಗಿ ಜಿಲ್ಲಾಧಿಕಾರಿ

ಯಾಗಿ, ಎಕ್ಸೈಸ್ ಕಮಿಷನರ್ ಆಗಿ ಸೇವೆ ಸಲ್ಲಿಸಿ 1944ರಲ್ಲಿ ಸ್ವ ಇಚ್ಛೆಯಿಂದ ಸರ್ಕಾರಿ ಸೇವೆಯಿಂದ ಸ್ವಯಂ ನಿವೃತ್ತಿ ಹೊಂದಿದರು.

ಮಾಸ್ತಿಯವರು ತಮ್ಮ ಸಾಹಿತ್ಯ ರಚನೆಯಲ್ಲಿ ಕಥೆ, ಕಾದಂಬರಿ, ಕವನ, ನಾಟಕ, ಪ್ರಬಂಧ, ವಿಮರ್ಶೆ ಕ್ಷೇತ್ರದಲ್ಲಿ ವಿಶಿಷ್ಟವಾದ ಕೊಡುಗೆಯನ್ನು ನೀಡಿರುವುದಲ್ಲದೆ 'ಜೀವನ' ಮಾಸ ಪತ್ರಿಕೆಯನ್ನು 21 ವರ್ಷಗಳ ಕಾಲ ನಡೆಸಿದರು.

ಇವರು ನೂರಕ್ಕೂ ಹೆಚ್ಚು ಮೌಲ್ಯಾಧಾರಿತ ಕೃತಿಗಳನ್ನು ಕನ್ನಡ ಸಾಹಿತ್ಯಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಕೆಲವನ್ನು ಹೆಸರಿಸಬಹುದಾದರೆ ಚೆನ್ನಬಸವ ನಾಯಕ, ಸುಬ್ಬಣ್ಣ (ಕಾದಂಬರಿಗಳು) ಕಾಕನ ಕೋಟೆ, ಯಶೋದರಾ (ನಾಟಕ) ಬಿನ್ನಹ, ತಾವರೆ (ಕವನ ಸಂಕಲನ), ಶ್ರೀರಾಮಪಟ್ಟಾಭಿಷೇಕ (ಖಂಡಕಾವ್ಯ), ಭಾವ (ಆತ್ಮ ಕಥನ) ಮುಂತಾದುವು.

ಇವರು ರಚಿಸಿರುವ ಸಣ್ಣ ಕಥೆಗಳು 11 ಸಂಪುಟಗಳಲ್ಲಿ ಪ್ರಕಟವಾಗಿವೆ. ಇವರು ಇಂಗ್ಲಿಷ್‌ನಲ್ಲಿಯೂ ಹಲವು ಕೃತಿಗಳನ್ನು ರಚಿಸಿದ್ದಾರೆ.

ಸರ್ಕಾರದಲ್ಲಿ ಇವರು ಸಲ್ಲಿಸಿರುವ ಅನನ್ಯ ಸಾಧನೆಗಾಗಿ ಮೈಸೂರು ಮಹಾರಾಜರಿಂದ "ರಾಜ ಸೇವಾಸಕ್ತ" ಬಿರುದು ಪ್ರಾಪ್ತವಾಗಿದೆ. ಕರ್ನಾಟಕ ಹಾಗೂ ಮೈಸೂರು ವಿಶ್ವವಿದ್ಯಾಲಯಗಳು ಡಿ.ಲಿಟ್ ಪ್ರಶಸ್ತಿ ನೀಡಿ ಗೌರವಿಸಿವೆ.

"ಸಣ್ಣ ಕತೆಗಳು" ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಬಹುಮಾನ. 'ಚಿಕ್ಕವೀರ ರಾಜೇಂದ್ರ' ಕಾದಂಬರಿಗೆ ಜ್ಞಾನಪೀಠ ಪ್ರಶಸ್ತಿ ದೊರಕಿವೆ. ಕೇಂದ್ರ ಸಾಹಿತ್ಯ ಅಕಾಡಮಿಯ ಫೆಲೋಷಿಪ್ ಲಭಿಸಿದೆ.

ಇವರ 'ಕಾಕನ ಕೋಟೆ' ನಾಟಕದ ಆಧಾರಿತ ಅದೇ ಹೆಸರಿನ ಚಿತ್ರವಾಗಿ ತಯಾರಾದ ಅತ್ಯುತ್ತಮ ಕತೆಗಾಗಿ ಮಾಸ್ತಿಯವರಿಗೆ ರಾಜ್ಯ ಪ್ರಶಸ್ತಿ ದೊರೆತಿದ್ದು ಒಂದು ವಿಶೇಷ. ಅಷ್ಟೇ ಅಲ್ಲದೆ ಅವರೇ ರಚಿಸಿದ ನಾಲ್ಕು ಗೀತೆಗಳನ್ನು ಆ ಚಿತ್ರದಲ್ಲಿ ಬಳಸಿಕೊಳ್ಳಲಾಗಿತ್ತು.

1929ರಲ್ಲಿ ಬೆಳಗಾವಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದರು. ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರೂ, ಅಧ್ಯಕ್ಷರೂ ಆಗಿ ಸೇವೆ ಸಲ್ಲಿಸಿದ್ದಾರೆ.

ಎಂ. ಆರ್. ಶ್ರೀನಿವಾಸಮೂರ್ತಿ

ಜನನ : 28.8.1892 ನಿಧನ : 16.9.1953



ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಮುಖ ಸಂಸ್ಥಾಪಕರಲ್ಲಿ ಒಬ್ಬರಾದ ಎಂ.ಆರ್.ಶ್ರೀ ಎಂದೇ ಪರಿಚಿತವಾದ ಶ್ರೀನಿವಾಸ ಮೂರ್ತಿಯವರು ಬೆಂಗಳೂರು ಸೆಂಟ್ರಲ್ ಕಾಲೇಜಿನಿಂದ 1915ರಲ್ಲಿ ಬಿ.ಎ. ಪದವಿ ಗಳಿಸಿದ ನಂತರ ಬಿ.ಟಿ ಪದವಿಯನ್ನು ಪಡೆದು ವಿದ್ಯಾ ಇಲಾಖೆಯಲ್ಲಿ ಉದ್ಯೋಗಕ್ಕೆ ಸೇರಿಕೊಂಡು, ಉಪಾಧ್ಯಾಯರಾಗಿ ಇನ್ಸ್‌ಪೆಕ್ಟರ್ ಆಗಿ, ಜಿಲ್ಲಾಧಿಕಾರಿಯಾಗಿ ನಿವೃತ್ತಿಗೊಂಡರು.

ಹೊಸಗನ್ನಡ ನವೋದಯ ಕಾಲದಲ್ಲಿ ಬದುಕಿ ಬಾಳಿದವರು. ಕಾದಂಬರಿ, ಕಾವ್ಯ, ಸಂಶೋಧನಾ ಕ್ಷೇತ್ರಗಳಲ್ಲಿ ಮಾತ್ರವೇ ಅಲ್ಲದೆ ನಾಟಕ ಕ್ಷೇತ್ರ ಹಾಗೂ ನಿಘಂಟು ರಚನೆಯಲ್ಲಿ ಇವರು ನೀಡಿರುವ ಕಾಣಿಕೆ ಅನನ್ಯವಾದುದು.

ಸಾವಿತ್ರಿ, ಮಹಾತ್ಯಾಗ ಇವರು ಬರೆದಿರುವ ಎರಡು ಕಾದಂಬರಿಗಳಾದರೆ, ನಾಗರಿಕ ಮತ್ತು ಧರ್ಮ ದುರಂತ ಇವರಿಂದ ರಚಿತವಾಗಿರುವ ಎರಡು ಪ್ರಮುಖ ನಾಟಕಗಳು. ಶಾಲಾ ಇನ್ಸ್‌ಪೆಕ್ಟರ್ ಆಗಿದ್ದಾಗಿನ ತಮ್ಮ ಅನುಭವದ ಆಧಾರದ ಮೇಲೆ ಬರೆದಿರುವ "ರಂಗಣ್ಣನ ಕನಸಿನ ದಿನಗಳು' ಕನ್ನಡ ಸಾಹಿತ್ಯಕ್ಕೆ ಇವರು ನೀಡಿರುವ ಮಹತ್ತರ ಕೃತಿ. 'ಮಹಾತ್ಯಾಗ' ಕಾದಂಬರಿ ಚಲನ ಚಿತ್ರವಾಗಿಯೂ ತಯಾರಾಗಿದೆ.

ಕವಿಯ ಸೋಲು (ಕವನ ಸಂಗ್ರಹ) ಭಕ್ತಿ ಭಂಡಾರಿ ಬಸವಣ್ಣನವರು (ವಿಮರ್ಶಾತ್ಮಕ ಜೀವನ ಚರಿತ್ರೆ), ವಚನ ಧರ್ಮ ಸಾರ (ವಿಮರ್ಶೆ) ಪ್ರಭುಲಿಂಗಲೀಲೆ ಮತ್ತು 'ಚನ್ನಬಸವ ಪುರಾಣ (ಸಂಪಾದಿತ ಕೃತಿಗಳು).

ಅಯಸ್ಕಾಂತತೆ, ವಿದ್ಯುಚ್ಛಕ್ತಿ, ಉಪಾಧ್ಯಾಯರ ಆರೋಗ್ಯಶಾಸ್ತ್ರ, ಇವರು ಬರೆದಿರುವ ಇತರೆ ಕೃತಿಗಳು.


ಮೈಸೂರು ವಿಶ್ವವಿದ್ಯಾಲಯದ ಇಂಗ್ಲಿಷ್-ಕನ್ನಡ ನಿಘಂಟಿನ ರಚನೆಯ ಸಂದರ್ಭದಲ್ಲಿ ಇವರು ವಿದ್ಯಾ ಇಲಾಖೆಯಿಂದ ಕೆಲಸಕ್ಕಾಗಿ ನಿಯೋಜಿತರಾಗಿದ್ದರು.

ಕನ್ನಡ ಸಾಹಿತ್ಯ ಪರಿಷತ್ತಿನ 'ಕನ್ನಡ ನುಡಿ' ಹಾಗೂ ಪರಿಷತ್ಪತ್ರಿಕೆಗಳ ಸಂಪಾದಕರೂ ಆಗಿದ್ದರಲ್ಲದೆ 3 ವರ್ಷಗಳ ಅವಧಿಗೆ ಪರಿಷತ್ತಿನ ಅಧ್ಯಕ್ಷರೂ ಆಗಿದ್ದರು.

ಸೊಲ್ಲಾಪುರದಲ್ಲಿ 1950ರ ಮೇ ನಲ್ಲಿ ನಡೆದ 33ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ವೀರಕೇಸರಿ ಸೀತಾರಾಮ ಶಾಸ್ತ್ರಿ

ಜನನ : 7.1.1893 ನಿಧನ : 7.1.1971



ತಾವು ಪ್ರಕಟಿಸುತ್ತಿದ್ದ "ವೀರಕೇಸರಿ" ಪತ್ರಿಕೆಯಿಂದಲೇ ವೀರ ಕೇಸರಿ ಸೀತಾರಾಮಶಾಸ್ತ್ರಿ ಎಂದು ಪ್ರಖ್ಯಾತರಾದ ಅವರ ಪ್ರಾರಂಭಿಕ ವಿದ್ಯಾಭ್ಯಾಸ ಶೃಂಗೇರಿಯ ವಿದ್ಯಾಪೀಠದಲ್ಲಿ ನಡೆಯಿತು. ಅತ್ಯಂತ ಚುರುಕು ವಿದ್ಯಾರ್ಥಿ ಎಂದೆನಿಸಿಕೊಂಡಿದ್ದ ಅವರು ಶೃಂಗೇರಿ ಶಾರದಾ ಪೀಠದ ಜಗದ್ಗುರು ಶ್ರೀ ಶ್ರೀ ಚಂದ್ರ ಶೇಖರ ಭಾರತೀ ಮಹಾಸ್ವಾಮಿಗಳ ಪೂರ್ವಾಶ್ರಮದಲ್ಲಿ ಅವರ ಸಹ ಪಾಠಿಗಳಾಗಿದ್ದರು. ಸೀತಾರಾಮ ಶಾಸ್ತ್ರಿಗಳು ತಮ್ಮ 19ನೆಯ ವಯಸ್ಸಿಗೇ ನಾಟಕಾಂತ ಸಾಹಿತ್ಯ ಮತ್ತು ತರ್ಕಶಾಸ್ತ್ರದಲ್ಲಿ ವಿದ್ವತ್ ಶ್ರೇಣಿಯನ್ನು ಗಳಿಸಿದ್ದರು.

ಬೆಂಗಳೂರು ಶಂಕರ ಮಠದಲ್ಲಿ, ಮಠದ ಆಡಳಿತ ವ್ಯವಸ್ಥೆಯನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಹೊತ್ತು ಶಂಕರ ಮಠಕ್ಕೆ ಬಂದರು. ಕಾಲಾ ನಂತರದಲ್ಲಿ ರಾಜಕೀಯ ಹಾಗೂ ಪತ್ರಿಕಾ ರಂಗದ ಕಡೆ ಆಕರ್ಷಿತರಾದರು. 2.05–1920ರಲ್ಲಿ 'ವೀರ ಕೇಸರಿ' ಪತ್ರಿಕೆಯನ್ನು ಪ್ರಾರಂಭಿಸಿದರು.

ಮೈಸೂರು ಜವಾಬ್ದಾರಿ ಸರ್ಕಾರದ ಕಡೆಯ ಹೋರಾಟ ಕಾಲದಲ್ಲಿ ಬೆಂಗಳೂರಿನಿಂದ ಅಚ್ಚಿನ ಮೊಳೆಗಳನ್ನು ಕನ್ನಡ ಟೈಪುಗಳನ್ನು ಜೊತೆಗೆ ಮೊಳೆ, ಜೋಡಿಸುವವರನ್ನೂ, ಕರೆದುಕೊಂಡು ಮದ್ರಾಸಿಗೆ ಹೋಗಿ ಅಲ್ಲಿಂದ 'ವೀರಕೇಸರಿ' ಪತ್ರಿಕೆಯನ್ನು ಮುದ್ರಿಸುವ ಸಾಹಸ ಕೈಗೊಂಡಿದ್ದರು. ಕಲ್ಕಿ, ಧೂಮ ಕೇತು ಎಂಬ ಗುಪ್ತನಾಮದಲ್ಲಿ ಶಾಸ್ತ್ರಿಗಳು ಅಂಜದೆ ಅಳುಕದೆ ಬರೆಯುತ್ತಿದ್ದರು.


ಸಾಹಿತ್ಯ ರಚನೆಯಲ್ಲಿಯೂ ಅಪ್ರತಿಮ ಪ್ರತಿಭೆಯನ್ನು ಹೊಂದಿದ್ದ ಶಾಸ್ತ್ರಿಗಳು ಹಲವಾರು ಕೃತಿಗಳನ್ನು ರಚಿಸಿದ್ದರು. ಬಿದನೂರು ರಾಣಿ, ಛತ್ರಪತಿ ಶಿವಾಜಿ, ಅದಿಲ್ ಷಾಯಿಯ ಕಡೆಯ ದಿನಗಳು ಇವರು ರಚಿಸಿದ ಹಲವು ಕಾದಂಬರಿಗಳು. ವಾಲ್ಮೀಕಿ ರಾಮಾಯಣವನ್ನು ಸರಳ ಗದ್ಯದ ರೂಪದಲ್ಲಿ ಬರೆದಿದ್ದಾರೆ.

ಅವರು ರಚಿಸಿದ ಪ್ರಸಿದ್ಧ ಐತಿಹಾಸಿಕ ಕಾದಂಬರಿ 'ದೌಲತ್' ಅವರಿಗೆ ಅಪಾರವಾದ ಹೆಸರನ್ನು ತಂದುಕೊಟ್ಟಿತು. ಅಲ್ಲದೆ ಆ ಕಾಲದಲ್ಲಿಯೇ ಅದು ಆರೇಳು ಮುದ್ರಣಗಳನ್ನೂ ಕಂಡಿತ್ತೆಂದರೆ ಅದು ಎಷ್ಟು ಜನಪ್ರಿಯವಾಗಿತ್ತೆಂದು ತಿಳಿಯಬಹುದು.

ಮೇಧಾವಿ ಸಾಹಿತಿಗಳು, ಧೀಮಂತ ಪತ್ರಕರ್ತರೂ, ಸ್ವಾತಂತ್ರ್ಯ ಹೋರಾಟಗಾರರೂ ಅಪ್ರತಿಮ ಕನ್ನಡ ಪ್ರೇಮಿಯೂ ಆಗಿದ್ದ ಶಾಸ್ತ್ರಿಗಳು ಅರವತ್ತರ ದಶಕದಲ್ಲಿ ನಡೆದ ಸಂಯುಕ್ತ ರಂಗದ ಕನ್ನಡ ಪರ ಹೋರಾಟದಲ್ಲಿಯೂ ಸಹ ಸಕ್ರಿಯವಾಗಿ ಭಾಗವಹಿಸುತ್ತಿದ್ದರು.

ಆರ್. ಕಲ್ಯಾಣಮ್ಮ

ಜನನ : 1894 **ನಿಧನ : 1965**



ಮಹಿಳೆಯರ ಕಲ್ಯಾಣಕ್ಕೆ ಅಹರ್ನಿಶಿ ದುಡಿದ ಆರ್. ಕಲ್ಯಾಣಮ್ಮನವರು ಅಪ್ರತಿಮ ಪ್ರತಿಭೆಯ ಸೃಜನಾತ್ಮಕ ಸಾಹಿತಿ, ಪತ್ರಿಕೋದ್ಯಮಿ, ಸಮಾಜ ಸೇವಕಿ.

ಬಾಲ್ಯದಲ್ಲಿಯೇ ವಿವಾಹವಾದ ಅವರು ಕೆಲವೇ ತಿಂಗಳುಗಳಲ್ಲಿ ವಿಧವಾ ಪಟ್ಟಕ್ಕೆ ಬಲಿಯಾದ ದುರಾದೃಷ್ಟರಾದರು. ಆದರೆ ಅವರು ಎದೆಗುಂದದೆ ತಮ್ಮ ಜೀವನವನ್ನು ಸವಾಲಾಗಿ ಸ್ವೀಕರಿಸಿ ತಮ್ಮಂತೆಯೇ ವಿಧಿಯ ಸಂಕಷ್ಟಕ್ಕೆ ಸಿಲುಕಿ ಕಷ್ಟ ಕಾರ್ಪಣ್ಯಗಳನ್ನು ಅನುಭವಿಸುತ್ತಿದ್ದ ಮಹಿಳೆಯರಿಗೆ ನೆರವು ನೀಡಲು ತಮ್ಮ ಇಡಿ ಜೀವನವನ್ನೇ ಮುಡಿಪಾಗಿಟ್ಟರು.

ಮಹಿಳಾ ಸಂಘಟನೆ, ಮಹಿಳಾ ಪುರೋಭಿವೃದ್ಧಿಗಳ ಬಗ್ಗೆ ಸಾಕಷ್ಟು ಗಮನ ಹರಿಸಿದ್ದ ಅವರು ಸಾಹಿತ್ಯದ ಬಗ್ಗೆಯೂ ಸಹ ಗಂಭೀರವಾಗಿ ತಮ್ಮನ್ನು

ತೊಡಗಿಸಿಕೊಂಡರು. ಶಾರದಾ ಗ್ರಂಥಮಾಲೆ ಎಂಬ ಪ್ರಕಾಶನವನ್ನು ಸ್ಥಾಪಿಸಿದರು. ಅದರ ಮುಖಾಂತರ ಹಲವಾರು ಗ್ರಂಥಗಳನ್ನು ಪ್ರಕಟಿಸಿದರು. ಕಾದಂಬರಿ, ನಾಟಕ, ಕಥೆ, ವ್ಯಕ್ತಿ ಚಿತ್ರ ಮುಂತಾದ ಹಲವು ಪ್ರಾಕಾರಗಳಲ್ಲಿ ಅವರ ಸಾಹಿತ್ಯ ರಚನೆಯಾಯಿತು.

"ಪ್ರಿಯಂವದಾ" ಅವರು ಬರೆದ ಅತ್ಯಂತ ಜನಪ್ರಿಯ ಕಾದಂಬರಿ. ಅದು ಅಂದಿನ ಕಾಲದ ಲೋಯರ್ ಸೆಕಂಡರಿ ತರಗತಿಗೆ ಪಠ್ಯಪುಸ್ತಕವಾಗಿತ್ತು. ನಿರ್ಭಾಗ್ಯ ವನಿತೆ, ಸುಖಲತೆ, ಭಕ್ತಮೀರ, ಮಾಧವಿ ಅವರು ರಚಿಸಿದ ಇತರೇ ಕೃತಿಗಳು.

ಮೇನಕಾ, ಪರೀಕ್ಷೆಯ ಕೊನೆ, ಅತಿಶಯಅಜ್ಜಿ, ನಿರ್ಮಲಾ, ಮಾಧುವಿನ ಪ್ರತಿಜ್ಞೆ, ಮುಂತಾದವು ಅವರು ರಚಿಸಿದ ಹಲವು ನಾಟಕಗಳು.

ಮಕ್ಕಳಿಗಾಗಿ ತಿಂಗಳ ರಾಣಿ, ಮಂತ್ರದ ಮಾತ್ರೆ, ಆಟದ ಹುಲಿ, ಅರಮನೆ ಗುಬ್ಬಚ್ಚಿ ಮುಂತಾದ ಹಲವಾರು ಕಥೆಗಳನ್ನು ಬರೆದರು. ಸರಸ್ವತಿ ಪತ್ರಿಕೆಯ ಮುಖಾಂತರ ಪತ್ರಿಕಾ ಕ್ಷೇತ್ರಕ್ಕೂ ಕಾಲಿಟ್ಟ ಅವರು ಪತ್ರಿಕೆಗಾಗಿ ಅಹರ್ನಿಶಿ ದುಡಿದರು. ಪತ್ರಿಕೆಯ ಸಂಪಾದಕಿ, ಪ್ರೂಫ್‌ರೀಡರ್, ಅಡ್ವರ್ಟೈಸಿಂಗ್ ಏಜೆಂಟ್ ಹೀಗೆ ಎಲ್ಲ ಅವರೇ ಆಗಿದ್ದರು.


ಮುದವೀಡು ಕೃಷ್ಣರಾಯರು, ಆಲೂರು ವೆಂಕಟರಾಯರು, ಬಿ.ಎಂ.ಶ್ರೀ., ಡಿ.ವಿ.ಜಿ., ವೆಂಕಟನಾರಾಯಣಪ್ಪ ಮುಂತಾದವರ ಬಗ್ಗೆ ವ್ಯಕ್ತಿ ಚಿತ್ರಗಳನ್ನು ಬರೆದಿದ್ದಾರೆ. ಇವರಿಂದ ಪ್ರಭಾವಿತರಾಗಿ ಹಲವಾರು ಮಂದಿ ಸಾಹಿತ್ಯ ರಚನೆಗೆ ಪ್ರವೇಶಿಸಲು ಕಾರಣವಾಯಿತು.

ಬಂಗಾಳದ ಆರ್ಯ ಸಾಹಿತ್ಯ ಪರಿಷತ್ತಿನ ವಿದ್ಯಾವಿನೋದಿನಿ, ಮೈಸೂರು ಅರಮನೆಯ ಸಾರ್ವಜನಿಕ ಸೇವಾ ಪದಕದ ಪುರಸ್ಕಾರಗಳಿಗೆ ಪಾತ್ರರಾಗಿದ್ದರು. ಅಲ್ಲದೆ, ಬೆಂಗಳೂರು ನಗರ ಸಭೆ, ಕನ್ನಡ ಸಾಹಿತ್ಯ ಪರಿಷತ್ತು ಮುಂತಾದ ಹಲವಾರು ಪ್ರತಿಷ್ಠಿತ ಸಂಸ್ಥೆಗಳಿಂದ ಗೌರವ ಪುರಸ್ಕಾರಗಳು ಲಭಿಸಿವೆ.

ಬೆಂಗಳೂರು ನಗರ ಸಭೆಯ ಸದಸ್ಯರಾಗಿ, ಬೆಂಗಳೂರು ವಿಶ್ವ ವಿದ್ಯಾಲಯದ ಸೆನೆಟ್ ಸದಸ್ಯರಾಗಿ ಅಲ್ಲದೆ ಹಲವಾರು ಪ್ರತಿಷ್ಠಿತ ಸಂಸ್ಥೆಗಳ ಸದಸ್ಯರಾಗಿಯೂ ಸೇವೆಯನ್ನು ಸಲ್ಲಿಸಿದ್ದಾರೆ.

ತಿರುಮಲೆ ತಾತಾಚಾರ್ಯ ಶರ್ಮ

ಜನನ : 27.4.1895 ನಿಧನ : 20.10.1973



ತಿ.ತಾ.ಶರ್ಮ ಎಂದೇ ಕನ್ನಡಿಗರಿಗೆ ಪರಿಚಯವಾಗಿರುವ ಶರ್ಮರವರು ಎಸ್.ಎಸ್.ಎಲ್.ಸಿ.ಯವರೆಗೆ ವ್ಯಾಸಂಗ ಮಾಡಿ, ಉದಕ ಮಂಡಲದಲ್ಲಿ 1919ರಲ್ಲಿ ಶಾಸನ ಇಲಾಖೆಯಲ್ಲಿ ಕೆಲಸಕ್ಕೆ ಸೇರಿದರು. ಸ್ವಾತಂತ್ರ್ಯ ಸಂಗ್ರಾಮದತ್ತ ಆಕರ್ಷಿತರಾದ ಅವರು 1927ರಲ್ಲಿ ಕೆಲಸಕ್ಕೆ ರಾಜೀನಾಮೆ ನೀಡಿ ಅಸಹಕಾರ ಚಳುವಳಿಗೆ ಧುಮುಕಿದರು.

ಪತ್ರಕರ್ತರಾಗಿ ಪತ್ರಿಕೋದ್ಯಮಕ್ಕೆ ಕಾಲಿಟ್ಟ ಅವರು ಕೆಲಕಾಲ ತುಮಕೂರಿನಲ್ಲಿ 'ಮೈಸೂರಿನ ಕ್ರಾನಿಕಲ್' ಇಂಗ್ಲೀಷ್ ಪತ್ರಿಕೆಯ ಸಂಪಾದಕ ರಾಗಿದ್ದರು. ಆ ಅನುಭವದ ಆಧಾರದ ಮೇಲೆ ವಿಶ್ವಕರ್ನಾಟಕ ವಾರಪತ್ರಿಕೆಯನ್ನು

ಪ್ರಾರಂಭಿಸಿದರು. ಕೆಲವು ದಿನಗಳ ನಂತರ ಅದನ್ನು ದಿನ ಪತ್ರಿಕೆಯನ್ನಾಗಿ ಮಾರ್ಪಡಿಸಿ ಸ್ವಾತಂತ್ರ್ಯ ಚಳುವಳಿಗೆ ಪ್ರೋತ್ಸಾಹ ನೀಡಿದರು. ವಿಶ್ವಕರ್ನಾಟಕ ಪತ್ರಿಕೆ ಕನ್ನಡ ಪತ್ರಿಕಾ ಯುಗದಲ್ಲಿ ಒಂದು ಅದ್ವಿತೀಯ ಶಕ್ತಿಯಾಗಿ ರೂಪು ಗೊಂಡಿತು. ಈ ಪತ್ರಿಕೆ ಕನ್ನಡ ಜನತೆಯ ಆಶೋತ್ತರಗಳನ್ನು ನಿರ್ಭೀತಿಯಿಂದ ಪ್ರತಿಪಾದಿಸಿ ಪತ್ರಿಕಾ ಇತಿಹಾಸದಲ್ಲಿ ದಾಖಲೆಯನ್ನು ನಿರ್ಮಿಸಿತು. ಓದುಗರಿಗೆ ಸ್ವದೇಶ, ಸ್ವಧರ್ಮ, ಸ್ವರಾಜ್ಯದ ಬಗ್ಗೆ ಮಾತ್ರವಲ್ಲದೆ ಇತಿಹಾಸ, ಸಾಹಿತ್ಯ, ಕಲೆ, ರಾಜಕಾರಣ ಮತ್ತು ಸಮಾಜಶಾಸ್ತ್ರಗಳ ಬಗ್ಗೆ ಲೋಕ ಜ್ಞಾನವನ್ನು ನೀಡುತ್ತಿದ್ದ ಪತ್ರಿಕೆಯಾಗಿತ್ತು.

ಭಾರತ ಸ್ವಾತಂತ್ರ್ಯದ ಹೋರಾಟದ ಕ್ರಾಂತಿಕಾರಿಗಳ ಬಗ್ಗೆ ಬರೆದ ಕೃತಿ "ವಿಕ್ರಾಂತ ಭಾರತ" ಅವರ ಮೇರುಕೃತಿ.

"ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ" ಅವರ ಮತ್ತೊಂದು ಅಮೂಲ್ಯ ಕೃತಿ.

ಸುಭಾಷ್ ಚಂದ್ರ ಬೋಸ್, ಮೋಕ್ಷಗುಂಡಂ ವಿಶ್ವೇಶ್ವರಯ್ಯ, ವಿಚಾರ ಕರ್ನಾಟಕ, ಗಲಿವರನ ದೇಶಸಂಚಾರ ಮುಂತಾದವು ಇವರ ಇತರ ಹಲವು ಕೃತಿಗಳು.

1948ರ ಡಿಸೆಂಬರ್‌ನಲ್ಲಿ ಕಾಸರಗೋಡಿನಲ್ಲಿ ನಡೆದ 31ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಮಿಥಿಕ್ ಸೊಸೈಟಿಯ ಅಧ್ಯಕ್ಷರಾಗಿ ಹಲವು ವರ್ಷಗಳ ಕಾಲ ಕಾರ್ಯ ನಿರ್ವಹಿಸಿದ್ದರು.

"ಕನ್ನಡ ಪತ್ರಿಕೋದ್ಯಮದ ಭೀಷ್ಮ" "ನಿರ್ಭಯ ರಾಷ್ಟ್ರೀಯ ಪತ್ರಕರ್ತ" ರೆಂದು ಪ್ರಖ್ಯಾತರಾಗಿದ್ದರು.

ದ. ರಾ. ಬೇಂದ್ರೆ

ಜನನ : 31.1.1896 ನಿಧನ : 26.10.1981



ದತ್ತಾತ್ರೆಯ ರಾಮಚಂದ್ರ ಬೇಂದ್ರೆ-ದ.ರಾ. ಬೇಂದ್ರೆ-ಯವರ ವ್ಯಾಸಂಗ ಧಾರವಾಡ ಮತ್ತು ಪುಣೆಯಲ್ಲಿ ನಡೆಯಿತು. ಅವರು ಬಿ.ಎ. ಪದವಿ ಗಳಿಸಿದ್ದು, ಪುಣೆಯ ಫರ್ಗುಸನ್ ಕಾಲೇಜಿನಿಂದ. ಪದವಿ ಪಡೆದ ನಂತರ ಧಾರವಾಡ ವಿಕ್ಟೋರಿಯ ಪ್ರೌಢಶಾಲೆಯಲ್ಲಿ ಶಿಕ್ಷಕ ವೃತ್ತಿಯನ್ನು ಆರಂಭಿಸಿದರು. 1935ರಲ್ಲಿ ಮುಂಬಯಿ ವಿಶ್ವವಿದ್ಯಾಲಯದಿಂದ ಎಂ.ಎ. ಪದವಿಯನ್ನು ಗಳಿಸಿದ ನಂತರ ಜೀವನ ಪತ್ರಿಕೆಯ ಸಂಪಾದಕರಾಗಿ ಕೆಲಕಾಲ ಕಾರ್ಯ ನಿರ್ವಹಿಸಿದರು. ಅನಂತರ ಕನ್ನಡ ಪ್ರಾಧ್ಯಾಪಕರಾಗಿ ಹುಬ್ಬಳ್ಳಿ, ಪುಣೆ ಹಾಗೂ ಸೊಲ್ಲಾಪುರದ ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಸೇವೆಯನ್ನು ಸಲ್ಲಿಸಿದರು.

1956ರಲ್ಲಿ ಶಿಕ್ಷಕ ವೃತ್ತಿಯಿಂದ ನಿವೃತ್ತಿಯಾದ ನಂತರ ಧಾರವಾಡ ಆಕಾಶವಾಣಿ ಕೇಂದ್ರದ ಸಲಹೆಗಾರರಾಗಿ ಕಾರ್ಯ ನಿರ್ವಹಿಸಿದರು.

1922ರ ಸುಮಾರಿನಲ್ಲಿಯೇ ಪ್ರಕಟವಾದ ಇವರ ಪ್ರಥಮ ಕವನ ಸಂಕಲನ 'ಗರಿ' ಯಿಂದ ಆರಂಭವಾಗಿ ಅವರು ಒಟ್ಟು 27 ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಅವುಗಳಲ್ಲಿ ಕೆಲವನ್ನು ಹೆಸರಿಸಬಹುದಾದರೆ ಸಖೀಗೀತ, ಉಯ್ಯಾಲೆ, ನಾಗಲೀಲೆ, ಮೇಘದೂತ, ಗಂಗಾವತರಣ, ಅರಳು ಮರಳು, ನಾಕುತಂತಿ, ಶ್ರಾವಣ ಬಂತು ಮುಂತಾದುವು.

1957ರಲ್ಲಿ ಬೇಂದ್ರೆಯವರು ಭಕ್ತಮಾರ್ಕಂಡೇಯ ಚಿತ್ರಕ್ಕಾಗಿ ಎರಡು ಗೀತೆಗಳನ್ನು ರಚಿಸಿ ಕೊಟ್ಟರು. ಅನಂತರ 1963ರಲ್ಲಿ ಕನ್ನಡ ಚಿತ್ರರಂಗ ಕನ್ನಡ ಕವಿಗಳ ಕವನಗಳನ್ನು ಬೆಳ್ಳಿ ತೆರೆಗೆ ಅಳವಡಿಸುವ ಹೊಸ ಪ್ರಯತ್ನಕ್ಕೆ ಕೈ ಹಾಕಿತ್ತು. ಆಗ ಬೇಂದ್ರೆಯವರ "ಯುಗ ಯುಗಾದಿ ಕಳೆದರೂ" ಗೀತೆ "ಕುಲವಧು" ಚಿತ್ರಕ್ಕಾಗಿ ಎಸ್.ಜಾನಕಿಯವರ ಕಂಠಸಿರಿಯಲ್ಲಿ ಮೂಡಿ ಬಂದಿತು. ಮುಂದೆ ಬೇಂದ್ರೆ ಯವರ ಹಲವಾರು ಗೀತೆಗಳನ್ನು ಚಿತ್ರಗಳಲ್ಲಿ ರಸಿಕರು ಕೇಳುವ ಯೋಗ ದೊರಕಿತು. ಅವುಗಳಲ್ಲಿ ಕೆಲವನ್ನು ಹೆಸರಿಸಬಹುದಾದರೆ ಮೂಡಣ ಮನೆಯ...... (ಬೆಳ್ಳಿಮೋಡ) ಕುಣಿಯೋಣು ಬಾರಾ.....(ಚಕ್ರತೀರ್ಥ) ಇಳಿದು ಬಾ ತಾಯೆ.... (ಅರಿಶಿನ ಕುಂಕುಮ), ಉತ್ತರ ಧ್ರುವದಿಂ........(ಶರಪಂಜರ) ಮುಂತಾದವು.

ಇವರ "ಅರಳು ಮರಳು" ಕೃತಿಗೆ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ "ನಾಕುತಂತಿ" ಕವನ ಸಂಕಲನಕ್ಕೆ ಜ್ಞಾನಪೀಠ ಪ್ರಶಸ್ತಿ (1974) ಲಭಿಸಿದೆ.

ಕರ್ನಾಟಕ ವಿಶ್ವವಿದ್ಯಾಲಯ 1968ರಲ್ಲಿ ಗೌರವ ಡಾಕ್ಟರೇಟ್ ಪ್ರಶಸ್ತಿ ನೀಡಿ ಸನ್ಮಾನಿಸಿದೆ. ಕೇಂದ್ರ ಸರ್ಕಾರದ ಪದ್ಮಶ್ರೀ ಪ್ರಶಸ್ತಿ ಹಾಗೂ ಕೇಂದ್ರ ಸಾಹಿತ್ಯ ಅಕಾಡಮಿಯ ಉನ್ನತ ಗೌರವ ಪ್ರಶಸ್ತಿಯಾದ ಫೆಲೋಷಿಪ್‌ನ್ನು ನೀಡಿದೆ.

1943 ಡಿಸೆಂಬರ್‌ನಲ್ಲಿ ಶಿವಮೊಗ್ಗದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವವು ಇವರಿಗೆ ದೊರಕಿತ್ತು.

ನಾ. ಕಸ್ತೂರಿ

ಜನನ : 15.12.1897 ನಿಧನ : 17.8.1987



ನಾ. ಕಸ್ತೂರಿ ಎಂದು ಕನ್ನಡ ಸಾಹಿತ್ಯಪ್ರಿಯರಿಗೆ ಪರಿಚಿತವಾಗಿರುವ ನಾರಾಯಣ ಕಸ್ತೂರಿಯವರ ಮಾತೃಭಾಷೆ ತಮಿಳು. ಹುಟ್ಟಿದ್ದು ತಿರುವನಂತಪುರದಲ್ಲಿ.

ಪ್ರೌಢಶಾಲೆಯಲ್ಲಿ ಐದನೆಯ ರ್‍ಯಾಂಕ್ ಪಡೆದು, ಇಂಟರ್ ಮೀಡಿಯಟ್‌ನಲ್ಲಿ ಎರಡನೆ ರ್‍ಯಾಂಕ್, ಬಿ.ಎ. ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕ್ ಪಡೆದ ಕಸ್ತೂರಿಯವರು ಎಂ.ಎ. ಬಿ.ಎಲ್. ಪದವಿ ಪಡೆದು 1921ರಲ್ಲಿ ಮೈಸೂರಿಗೆ ಉದ್ಯೋಗಕ್ಕಾಗಿ ಬಂದರು. ಆರಂಭದಲ್ಲಿ ಬನುಮಯ್ಯ, ವಿದ್ಯಾಸಂಸ್ಥೆಗಳ ಪ್ರೌಢಶಾಲೆಯಲ್ಲಿ ಇತಿಹಾಸ ಅಧ್ಯಾಪಕರಾಗಿ, ನಂತರ ಮೈಸೂರು

ವಿಶ್ವವಿದ್ಯಾನಿಲಯದ ಇಂಟರ್ ಮೀಡಿಯೆಟ್ ಕಾಲೇಜಿನಲ್ಲಿ ಅಧ್ಯಾಪಕರಾದರು. ಕನ್ನಡದ ಒಲವನ್ನು ಬೆಳೆಸಿಕೊಂಡ ಕಸ್ತೂರಿಯವರು ಟಿ. ಎಸ್. ವೆಂಕಣ್ಣಯ್ಯನವರು ತಮ್ಮ ಕನ್ನಡದ ಗುರುವೆಂದು ಹೇಳಿಕೊಂಡಿದ್ದಾರೆ. ಕನ್ನಡದ ಖ್ಯಾತ ಸಾಹಿತಿಗಳಾದ ಡಿ. ಎಲ್. ನರಸಿಂಹಾಚಾರ್, ತೀ.ನಂ.ಶ್ರೀಕಂಠಯ್ಯ, ಕುವೆಂಪು ಮುಂತಾದ ಗಣ್ಯರು ಕಸ್ತೂರಿಯರ ಸಹೋದ್ಯೋಗಿಗಳಾಗಿದ್ದರು. ಜಿ. ಪಿ. ರಾಜರತ್ನಂ, ತ. ಸು. ಶಾಮರಾವ್, ಎಂ. ವಿ. ಸೀತಾರಾಮಯ್ಯ ಮೊದಲಾದ ಪ್ರತಿಭಾವಂತರು ಇವರ ಶಿಷ್ಯರ ಸಾಲಿನಲ್ಲಿದ್ದರು.

ಕಸ್ತೂರಿಯವರ ವಿಶೇಷತೆ ಎಂದರೆ, ತಮ್ಮ 24ನೇ ವರ್ಷದವರೆಗೂ ಅಂದರೆ ಮೈಸೂರಿಗೆ ಬರುವವರೆಗೂ, ಕನ್ನಡದ ಅರಿವೇ ಇಲ್ಲದವರು ನಂತರದಲ್ಲಿ ಕನ್ನಡ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿ ಕನ್ನಡದ ಶಬ್ದಗಳನ್ನು ಹಿಡಿದು ಅದರ ವಿಶಿಷ್ಟತೆಯನ್ನು ಪರಿಚಯಿಸಿದರು. ಕನ್ನಡದಲ್ಲಿ ಬರೆದರು, ಅದರಲ್ಲಿಯೂ ಕನ್ನಡ ಸಾಹಿತ್ಯಕ್ಕೆ ಅವರು ನೀಡಿದ ಕೊಡುಗೆ ಅಪಾರ.

1930–40ರ ಅವಧಿಯಲ್ಲಿ ಕನ್ನಡಕ್ಕೆ ಹಲವಾರು ಕೃತಿಗಳನ್ನು ನೀಡಿದರು. ಯದ್ವಾತದ್ವಾ, ಎರಡು ದೇಶಗಳ ಅಲ್ಲೋಲಕಲ್ಲೋಲ, ಉಪಾಯ ವೇದಾಂತ, ಕೆಂಪ ಮೈಸೂರಿಗೆ ಹೋಗಿದ್ದು, ದಿಲ್ಲೀಶ್ವರನ ದಿನಚರಿ, ಕುಮಾರ ದೇವ, ಅಶೋಕನ ಇತಿಹಾಸ, ರಂಗನಾಯಕಿ ಮುಂತಾದುವು ಅವರ ಪ್ರಮುಖ ಕೃತಿಗಳಲ್ಲಿ ಕೆಲವೆಂದು ಹೆಸರಿಸಬಹುದು.

ಅನುವಾದದಲ್ಲಿಯೂ ಸಿದ್ಧಹಸ್ತರಾದ ಅವರು ತಕಳಿ ಶಿವಶಂಕರ ಪಿಳ್ಳೆಯವರ ಚೆಮ್ಮಿನ್ (ಕೆಂಪುಮೀನು) ದಂಡ ಎಡಂಗಾಯಿ (ಎರಡು ಬಳೆ), ಫ್ರಾನ್ಸ್‌ನ ಖ್ಯಾತ ಲೇಖಕ ವಿಕ್ಟರ್ ಹ್ಯೂಗೋನ ಲೇ ಮಿಸರಬಲ್ಸ್ (ನೊಂದ ಜೀವಿ) ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಲೂಯಿ ಕೆರೋಲ್‌ನ ಆಲಿಸ್ ಇನ್ ವಂಡರ್ ಲ್ಯಾಂಡ್ ಕೃತಿಯನ್ನು ಪಾತಾಳದಲ್ಲಿ ಪಾಪಚ್ಚಿ ಎಂಬ ಹೆಸರಿನಲ್ಲಿ ಕನ್ನಡದಲ್ಲಿ ಶಿಶುಸಾಹಿತ್ಯಕ್ಕೆ ಕೊಡುಗೆ ನೀಡಿದರು.

ಗಗ್ಗಯ್ಯನ ಗಡಿಬಿಡಿ, ವರಪರೀಕ್ಷೆ ಕಾಡಾನೆ ಮುಂತಾದ ನಾಟಕಗಳನ್ನು ಬರೆದು ಕನ್ನಡ ನಾಟಕ ಲೋಕಕ್ಕೆ ನೀಡಿದರು. ನಾ. ಕಸ್ತೂರಿ ಎಂದರೆ ನಾಟಕದ ಕಸ್ತೂರಿ ಎಂದೇ ಎಂ. ಆರ್. ಶ್ರೀನಿವಾಸಮೂರ್ತಿಯವರು ನುಡಿಯುತ್ತಿದ್ದರು.

ರಾಶಿಯವರು ಸಂಪಾದಿಸುತ್ತಿದ್ದ ಕೊರವಂಜಿ ಪತ್ರಿಕೆಗೆ ತನ್ನ ಬರಹಗಳನ್ನು ಅನೇಕ ಗುಪ್ತನಾಮಗಳಲ್ಲಿ ಬರೆಯುತ್ತಿದ್ದರು.

1955ರಲ್ಲಿ ದಾವಣಗೆರೆಯ ಕಾಲೇಜಿನಿಂದ ನಿವೃತ್ತರಾದ ನಂತರ ಅವರ ಒಲವು ಆಧ್ಯಾತ್ಮದ ಕಡೆಗೆ ಹೊರಳಿತು. ಪ್ರಾಧ್ಯಾಪಕರಾಗಿದ್ದಾಗಲೇ ರಾಮಕೃಷ್ಣ ಆಶ್ರಮದ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಅವರು 1958ರಿಂದ ಸಾಯಿಬಾಬಾರವರ ಭಕ್ತರಾಗಿ ಪುಟ್ಟಪರ್ತಿ ಸೇರಿ ತಮ್ಮ ಜೀವಿತದ ಕೊನೆಯ ದಿನದವರೆಗೂ ಆಧ್ಯಾತ್ಮ ಸಾಹಿತ್ಯವನ್ನು ರಚಿಸಿತೊಡಗಿದರು. ಆಶ್ರಮದ 'ಸನಾತನ ಸಾರಥಿ'ಯ ಸಂಪಾದಕರಾಗಿದ್ದರು. ಸತ್ಯ ಸಾಯಿಬಾಬಾರವರನ್ನು ಕುರಿತ ಸತ್ಯಂ ಶಿವಂ ಸುಂದರಂ ಎಂಬ ಗ್ರಂಥ ರಚಿಸಿದ್ದಾರೆ.

1981ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಭಾಜನರಾಗಿದ್ದರು.

ದೇವುಡು ನರಸಿಂಹಶಾಸ್ತ್ರಿ

ಜನನ : 27.12.1897 **ನಿಧನ : 25.10.1962**



ದೇವುಡು ಎಂಬ ಹೆಸರಿನಿಂದಲೇ ಪ್ರಖ್ಯಾತವಾಗಿದ್ದ ದೇವುಡು ನರಸಿಂಹ ಶಾಸ್ತ್ರಿಗಳು ಕನ್ನಡದ ಪ್ರಮುಖ ಕಾದಂಬರಿಕಾರರಲ್ಲಿ ಒಬ್ಬರು. ಕನ್ನಡ ನವೋದಯದ ಅಗ್ರಮಾನ್ಯ ಕಾದಂಬರಿಕಾರರೆಂದು ಹೇಳಬಹುದು.

ಮನೆಯಲ್ಲಿದ್ದ ಸಾಂಪ್ರದಾಯಿಕ ವಾತಾವರಣಕ್ಕೆ ಹೊಂದಿಕೊಂಡಿದ್ದ ಶಾಸ್ತ್ರಿಗಳು ಬಾಲ್ಯದಲ್ಲಿಯೇ ಪುರಾಣ, ಭಾಗವತ, ಉಪನಿಷತ್ತುಗಳನ್ನು ಶಾಸ್ತ್ರೋಕ್ತವಾಗಿ ಅಭ್ಯಾಸ ಮಾಡಿ ಕರಗತ ಮಾಡಿಕೊಂಡರು.

ಕನ್ನಡ ಸಂಸ್ಕೃತಗಳೆರಡೂ ಭಾಷೆಗಳಲ್ಲಿ ಪರಿಣಿತರಾದ ಅವರು ಎಂ.ಎ. ಪದವಿಯನ್ನು ಪಡೆದರು.

ಕೆಲವು ಕಾಲ ಉಪಾಧ್ಯಾಯ ವೃತ್ತಿಯನ್ನು ಕೈಗೊಂಡು ನಂತರ ಸಾಹಿತ್ಯ ಸೇವೆಗೆ ತಮ್ಮನ್ನು ತೊಡಗಿಸಿಕೊಂಡರು.

ವೇದ, ಉಪನಿಷತ್ತು, ಸಂಗೀತ ಸಾಹಿತ್ಯ, ರಂಗಭೂಮಿ ಪತ್ರಿಕೋದ್ಯಮ ವಯಸ್ಕರ ಶಿಕ್ಷಣ ಹೀಗೆ ನಾನಾ ಬಗೆಯ ಕ್ಷೇತ್ರಗಳಲ್ಲಿ ಇವರ ಪ್ರತಿಭೆ ಹಬ್ಬಿತ್ತು. 'ಆಡು ಮುಟ್ಟದ ಸೊಪ್ಪಿಲ್ಲ' ಎಂಬ ನಾಣ್ಣುಡಿ ಇವರಿಗೆ ಸಂಪೂರ್ಣವಾಗಿ ಅನ್ವಯಿಸುತ್ತಿತ್ತು.

24 ಸಂಪುಟಗಳ 'ಯೋಗವಾಸಿಷ್ಟ' ಮತ್ತು "ಮೀಮಾಂಸ ದರ್ಪಣ" ಗ್ರಂಥವು ಕನ್ನಡ ಸಾಹಿತ್ಯಕ್ಕೆ ಇವರು ನೀಡಿದ ಮಹತ್ವದ ಕೊಡುಗೆ. ಯೋಗ ವಾಸಿಷ್ಟವನ್ನು ಕನ್ನಡಕ್ಕೆ ತಂದ ಇವರಿಗೆ ಮಹಾರಾಜರಿಂದ ಪಾರಿತೋಷಕ ದೊರೆಯಿತು.

ಅವರು ರಚಿಸಿರುವ ಒಟ್ಟು ಕಾದಂಬರಿಗಳು 15. ಮಹಾಬ್ರಾಹ್ಮಣ, ಮಹಾಕ್ಷತ್ರಿಯ, ಮಹಾದರ್ಶನ ಅವರು ರಚಿಸಿರುವ ಮೂರು ಪ್ರಮುಖ ಕಾದಂಬರಿಗಳು.

ಅವರ ಮತ್ತೊಂದು ಮಹತ್ವ ಕೃತಿ ಮಯೂರ. ಈ ಕಾದಂಬರಿ ಚಲನ ಚಿತ್ರವಾಗಿ ಚಲನ ಚಿತ್ರ ಪ್ರೇಮಿಗಳ ಮೆಚ್ಚುಗೆಯನ್ನು ಪಡೆದಿದೆ.

ಅಂತರಂಗ, ಗೆದ್ದವರು ಯಾರು, ಕಳ್ಳರ ಕೂಟ ಅವರು ರಚಿಸಿದ ಇತರ ಪ್ರಸಿದ್ಧ ಕಾದಂಬರಿಗಳು. ಇಷ್ಟೇ ಅಲ್ಲದೆ ಆರು ಕಥಾಸಂಕಲನಗಳು ಕೆಲವು ನಾಟಕಗಳನ್ನೂ ಬರೆದಿದ್ದಾರೆ. ಸಣ್ಣ ಕತೆ ನಾಟಕ ಅನುವಾದ, ಮಕ್ಕಳ ಸಾಹಿತ್ಯ ಹೀಗೆ ನಾನಾ ಪ್ರಕಾರಗಳಲ್ಲಿ ಒಟ್ಟು 62 ಕೃತಿಗಳನ್ನು ಅವರು ಕನ್ನಡಿಗರಿಗೆ ನೀಡಿದ್ದಾರೆ.

ಮಹಾಕ್ಷತ್ರಿಯ ಕಾದಂಬರಿಗೆ ಕೇಂದ್ರಸಾಹಿತ್ಯ ಅಕಾಡಮಿಯ ಬಹುಮಾನ ಸಂದಿದೆ.

ವಿ. ಸೀತಾರಾಮಯ್ಯ

ಜನನ : 2.10.1899 **ನಿಧನ : 4.9.1983**



"ಎಮ್ಮ ಮನೆಯಂಗಳದಿ ಬೆಳೆದೊಂದು ಹೂವನ್ನು ನಿಮ್ಮ ಮಡಿಲ ಳೊಗಿಡಲು ತಂದಿರುವೆವು" ಎಂಬ ಗೀತೆಯಿಂದ ಹೆಣ್ಣು ಹೆತ್ತ ತಾಯ್ತಂದೆಗಳ ಹೃದಯವನ್ನು ಕರಗಿಸಿ ನೀರಾಗಿಸಿದ, ವಿ.ಸೀ. ಎಂದು ಪ್ರಸಿದ್ಧರಾಗಿರುವ ವಿ.ಸೀತಾರಾಮಯ್ಯನವರು ಆಧುನಿಕ ಕನ್ನಡವನ್ನು ಕಟ್ಟಿದ ಕನ್ನಡನಾಡಿನ ಸಾರಸ್ವತ-ಸಾಂಸ್ಕೃತಿಕ ಸಾಮಾಜಿಕ ಜೀವನವನ್ನು ಶ್ರೀಯುತಗೊಳಿಸಿದ ಹಿರಿಯರು.

ಬೆಂಗಳೂರು ಮತ್ತು ಮೈಸೂರಿನಲ್ಲಿ ವಿದ್ಯಾಭ್ಯಾಸವನ್ನು ಮಾಡಿದ ಅವರು 1920ರಲ್ಲಿ ಬಿ.ಎ. 1922ರಲ್ಲಿ ಎಂ.ಎ. ಪದವಿ ಗಳಿಸಿದರು. ಅರ್ಥಶಾಸ್ತ್ರದಲ್ಲಿ ಸರ್ ಶೇಷಾದ್ರಿ ಬಂಗಾರದ ಪದಕವನ್ನು ಪಡೆದರು. 1922ರಲ್ಲಿ ಮುಂಬಯಿಯಲ್ಲಿ

ಎಲ್.ಎಲ್.ಬಿ ಪದವಿ ಪಡೆದರು. ಮೈಸೂರಿಗೆ ಹಿಂತಿರುಗಿ ಶಾರದಾವಿಲಾಸ ಪ್ರೌಢಶಾಲೆಯಲ್ಲಿ ಉಪಾಧ್ಯಾಯರಾದರು. ನಂತರ ಬೆಂಗಳೂರಿನ ಇಂಟರ್ ಮೀಡಿಯೆಟ್ ಹಾಗೂ ಸೆಂಟ್ರಲ್ ಕಾಲೇಜುಗಳಲ್ಲಿ ಸೇವೆಯನ್ನು ಮುಂದು ವರೆಸಿದರು. ನಿವೃತ್ತಿಯ ನಂತರ ಬೆಂಗಳೂರು ಆಕಾಶವಾಣಿ ಕೇಂದ್ರದ ಭಾಷಣ ವಿಭಾಗದ ಮುಖ್ಯಸ್ಥರಾಗಿ ಮತ್ತು ಹೊನ್ನಾವರದ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದರು.

ಕನ್ನಡ ಸಾಹಿತ್ಯ ಪರಿಷತ್‌ನೊಡನೆ ನಿಕಟ ಸಂಪರ್ಕವಿರಿಸಿಕೊಂಡಿದ್ದ ಅವರು "ಕನ್ನಡ ನುಡಿ"ಯ ಸಂಪಾದಕರಾಗಿದ್ದರು.

ಕನ್ನಡ ಸಾಹಿತ್ಯಕ್ಕೆ ಇವರ ಕೊಡುಗೆ ಅಪಾರ. 'ಗೀತೆಗಳು', 'ನೆಳಲು ಬೆಳಕು', 'ದೀಪಗಳು', ದ್ರಾಕ್ಷಿದಾಳಿಂಬೆ', 'ಹೆಜ್ಜೆಪಾಡು', 'ಕದಂಬ', 'ಅರಲು ಬರಲು', 'ಹಗಲು ಇರುಳು' – ಇವರು ರಚಿಸಿರುವ ಕವನ ಸಂಕಲನಗಳು. 'ಅರಲು ಬರಲು' ಕವನ ಸಂಕಲನಕ್ಕೆ 1973ರಲ್ಲಿ ಕೇಂದ್ರಸಾಹಿತ್ಯ ಅಕಾಡಮಿ ಪ್ರಶಸ್ತಿ ಲಭಿಸಿದೆ.

'ಪಂಪಾಯಾತ್ರೆ', 'ಸೋಹ್ರಾಬ್ ರುಸ್ತುಂ', 'ಆಗ್ರಹ', 'ಭಾರತದ ರಾಜ್ಯಾಂಗ ರಚನೆ', 'ಮಹನೀಯರು', 'ಮುಂಬಯಿ ವಾಸ ನೆನಪುಗಳು' ಇವರು ರಚಿಸಿರುವ ಕೆಲವು ಕೃತಿಗಳು. 'ಮಹನೀಯರು' ಕೃತಿಗೆ 1978ರಲ್ಲಿ ರಾಜ್ಯ ಸಾಹಿತ್ಯ ಅಕಾಡಮಿ ಪ್ರಶಸ್ತಿ ಲಭ್ಯವಾಗಿದೆ.

ಇವರ ಸಮಗ್ರ ಸಾಹಿತ್ಯ ಕೊಡುಗೆಗಾಗಿ 1976ರಲ್ಲಿ ಮೈಸೂರು ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪ್ರಶಸ್ತಿ ನೀಡಿ ಗೌರವಿಸಿದೆ.


1973ರಲ್ಲಿ ಇವರಿಂದ ರಚಿತವಾದ 'ಹಣಪ್ರಪಂಚ' ಅರ್ಥಶಾಸ್ತ್ರದ ಬಗ್ಗೆ ಒಂದು ಮಹಾನ್ ಕೃತಿ ಎಂದು ಪರಿಗಣಿತವಾಗಿದೆ.

1954–70ರ ಅವಧಿಯಲ್ಲಿ ಕೇಂದ್ರ ಸಾಹಿತ್ಯ ಅಕಾಡಮಿಯ ಸದಸ್ಯ ರಾಗಿಯೂ 1965–68ರ ಅವಧಿಯಲ್ಲಿ ಭಾರತೀಯ ಜ್ಞಾನಪೀಠ ಪ್ರಶಸ್ತಿಯ ಸಲಹಾಮಂಡಲಿ (ಕನ್ನಡ) ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು. 1954ರ ಡಿಸೆಂಬರ್‌ನಲ್ಲಿ ಕುಮಟದಲ್ಲಿ ನಡೆದ 36ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

*

ಕೋಟ ಶಿವರಾಮ ಕಾರಂತ

ಜನನ : 10.10.1902 **ನಿಧನ : 9.12.1997**



"ಆಡುಮುಟ್ಟದ ಸೊಪ್ಪಿಲ್ಲ. ಕಾರಂತರು ಕೈ ಹಾಕದ ಕ್ಷೇತ್ರವಿಲ್ಲ" ಎಂದು ಪ್ರಸಿದ್ಧವಾಗಿರುವ ಕೆ.ಶಿವರಾಮ ಕಾರಂತರದು ಕ್ರಿಯಾಪೂರ್ಣ ಶ್ರದ್ಧಾಪೂರ್ಣ ಬಹುಮುಖ ಸೇವೆಯನ್ನು ಸಲ್ಲಿಸಿರುವ ವಿಶಿಷ್ಟ ವ್ಯಕ್ತಿತ್ವ.

ಬಾಲಸಾಹಿತ್ಯದಿಂದ ಗಂಭೀರ ಸಾಹಿತ್ಯದವರೆಗೆ. ವ್ಯಕ್ತಿ ಚಿತ್ರ, ಜೀವನ ಚರಿತ್ರೆ, ಪ್ರವಾಸ ಕಥನ, ಕತೆ, ಕಾದಂಬರಿ, ಗೀತರೂಪಕ, ನಾಟಕ, ಕವಿತೆ, ಹರಟೆ, ಪ್ರಬಂಧ, ವಿಮರ್ಶೆ ಗ್ರಂಥಸಂಪಾದನೆ ನಿಘಂಟು ರಚನೆ – ಹೀಗೆ ಒಂದೇ, ಎರಡೇ – ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ತಮ್ಮ ಛಾಪನ್ನು ಮೂಡಿಸಿರುವ ಅದ್ವಿತೀಯ ವ್ಯಕ್ತಿ ಶಿವರಾಮ ಕಾರಂತರು.

‘ವಸಂತ’, ‘ವಿಚಾರವಾಣಿ’ ಎಂಬ ಪತ್ರಿಕೆಗಳನ್ನು ನಡೆಸಿ ಪತ್ರಕರ್ತರಾದರು. ನಾಟಕ ರಂಗ, ಯಕ್ಷಗಾನ, ಕೋಲಾಟ ಮುಂತಾದ ದಕ್ಷಿಣ ಕನ್ನಡದ ವಿಶಿಷ್ಟ ಕಲೆಗಳನ್ನು ದೇಶದಾದ್ಯಂತ ಪರಿಚಯಿಸಿದ ಕೀರ್ತಿ ಅವರದು.

ಎರಡು ಕವನ ಸಂಕಲನಗಳು, 45 ಕಾದಂಬರಿಗಳು, ಸೇರಿದಂತೆ ನಾಟಕಗಳು, ಸಣ್ಣ ಕಥಾ ಸಂಕಲನಗಳು ಬಾಲ ಸಾಹಿತ್ಯ ಕೃತಿಗಳು, ಮುಂತಾಗಿ ವೈಚಾರಿಕ ಹಾಗೂ ವೈಜ್ಞಾನಿಕ ಲೇಖನಗಳು ಪ್ರವಾಸ ಕಥನ ಹೀಗೆ ಹತ್ತು ಹಲವಾರು ಪ್ರಕಾರದ ಸಾಹಿತ್ಯವನ್ನು ಕನ್ನಡಿಗರಿಗೆ ಉಣಬಡಿಸಿದ್ದಾರೆ.

‘ಚೋಮನ ದುಡಿ’ ಕಾದಂಬರಿ ಚಲನ ಚಿತ್ರವಾಗಿ ಜನಮನ್ನಣೆ ಗೊಂಡಿದೆ.

ಕುಡಿಯರ ಕೂಸು, ಬೆಟ್ಟದ ಜೀವ ಮರಳಿ ಮಣ್ಣಿಗೆ, ಔದಾರ್ಯದ ಉರುಳಲ್ಲಿ, ಅಳಿದ ಮೇಲೆ ಇವರ ಪ್ರಸಿದ್ಧ ಕಾದಂಬರಿಗಳಲ್ಲಿ ಕೆಲವು.

ಇವರ ವಿಶಿಷ್ಟ ಸಾಧನೆಗಾಗಿ ಕರ್ನಾಟಕ ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾಲಯವೂ ಸೇರಿದಂತೆ ಹಲವಾರು ವಿಶ್ವವಿದ್ಯಾಲಯಗಳಿಂದ ಗೌರವ ಡಾಕ್ಟರೇಟ್ ಪ್ರದಾನವಾಗಿವೆ. ಹಂಪಿ ವಿಶ್ವವಿದ್ಯಾಲಯದಿಂದ ನಾಡೋಜ ಪ್ರಶಸ್ತಿಯೂ ಇವರಿಗೆ ದೊರಕಿದೆ.

ರಾಜ್ಯಸಾಹಿತ್ಯ ಅಕಾಡಮಿ ಪ್ರಶಸ್ತಿ, ಕರ್ನಾಟಕ ಸರ್ಕಾರದ ‘ಪಂಪ’ ಪ್ರಶಸ್ತಿ, ಮಧ್ಯಪ್ರದೇಶ ಸರ್ಕಾರದ ‘ತುಳಸಿ ಸನ್ಮಾನ್’ ಪ್ರಶಸ್ತಿಗಳೂ ಇವರಿಗೆ ಸಂದಿವೆ.


‘ಮೂಕಜ್ಜಿಯ ಕನಸುಗಳು’ ಕಾದಂಬರಿಗೆ ಜ್ಞಾನಪೀಠ ಪ್ರಶಸ್ತಿ ದೊರೆತಿದೆ.

ಇವರ ಹಲವಾರು ಕಾದಂಬರಿಗಳು ಇಂಗ್ಲೀಷ್ ಭಾಷೆಯೂ ಸೇರಿದಂತೆ ಹಲವಾರು ಭಾರತೀಯ ಭಾಷೆಗಳಿಗೆ ಭಾಷಾಂತರಗೊಂಡಿವೆ.

1955ರ ಜೂನ್‌ನಲ್ಲಿ ನಡೆದ ಮೈಸೂರು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು.

ಗೊರೂರು ರಾಮಸ್ವಾಮಿ ಅಯ್ಯಂಗಾರ್

ಜನನ : 4.7.1904 ನಿಧನ : 23.8.2003



"ನಮ್ಮ ಊರಿನ ರಸಿಕರು", "ನಮ್ಮ ಹಳ್ಳಿಯ ಚಿತ್ರಗಳು" ಎಂಬ ಹಾಸ್ಯ ಕೃತಿಗಳಿಂದ ಕನ್ನಡದ ಓದುಗರಿಗೆ ಚಿರಪರಿಚಿತರಾಗಿರುವ ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರು ಹೇಮಾವತಿ ನದಿಯ ಪಾತ್ರದಲ್ಲಿದ್ದ ಗೊರೂರಿನವರು. ತಮ್ಮ ಹೆಸರಿನೊಂದಿಗೆ ತಮ್ಮ ಹುಟ್ಟಿದೂರನ್ನೂ ಸೇರಿಸಿಕೊಂಡು ಪ್ರಸಿದ್ಧರಾದರು. ಅವರ ವಿದ್ಯಾಭ್ಯಾಸ ಗೊರೂರು, ಹಾಸನದಲ್ಲಿ ನಡೆಯಿತು. ಪ್ರೌಢಶಾಲೆಯಲ್ಲಿ ಓದುತ್ತಿದ್ದಾಗ ಸ್ವಾತಂತ್ರ್ಯದ ಹೋರಾಟದತ್ತ ಆಕರ್ಷಿತರಾದ ಅವರು ಚಳುವಳಿಯಲ್ಲಿ ಪಾಲ್ಗೊಳ್ಳಲು ಹುಟ್ಟೂರನ್ನು ಬಿಟ್ಟು ಗುಜರಾತ್

ವಿದ್ಯಾಪೀಠದಲ್ಲಿ ಓದು ಮುಂದುವರೆಸಿದರು. ಇವರ ಮೇಲೆ ಗಾಂಧೀಜಿಯವರ ಪ್ರಭಾವ ತೀವ್ರವಾಗಿ ಮೂಡಿತ್ತು. ಆ ಪ್ರಭಾವದಿಂದ ಇವರು ಅಖಿಲ ಭಾರತ ಚರಕ ಸಂಘದ ಖಾದಿ ವಸ್ತ್ರಾಲಯ ಮಳಿಗೆಯ ಜವಾಬ್ದಾರಿ ವಹಿಸಿಕೊಂಡರು. ಜಿಲ್ಲಾ ಮಂಡಳಿ ಹಾಗೂ ಸ್ಥಳೀಯ ವಿದ್ಯಾ ಸಮಿತಿಗಳಲ್ಲಿ ಸೇವೆ ಸಲ್ಲಿಸಿದರು. 1952ರಲ್ಲಿ ರಾಜ್ಯ ವಿಧಾನ ಪರಿಷತ್ತಿಗೆ ನಾಮಕರಣಗೊಂಡರು.

ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ಇವರು 1942ರಲ್ಲಿ ಜೈಲು ಶಿಕ್ಷೆಗೂ ಒಳಗಾಗಿದ್ದರು. ಹೋರಾಟದ ಸಂದರ್ಭದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಒಂದೆಡೆಯಿಂದ ಮತ್ತೊಂದೆಡೆಗೆ ಸುತ್ತಿದ್ದು ಇವರು ಲೋಕಾನುಭವಗಳಿಸಲು ನೆರವಾಯಿತು. ಆ ಲೋಕಾನುಭವವೇ ಅವರ ಸಾಹಿತ್ಯ ರಚನೆಗೆ ಸಹಾಯಕವಾಯಿತೆನ್ನಬಹುದು. ಪ್ರಬಂಧಗಳು, ಕಥೆ, ಕಾದಂಬರಿಗಳನ್ನೂ ಬರೆಯಲು ಪ್ರೇರಕ ಶಕ್ತಿಯಾಯಿತು.

'ಹಳ್ಳಿಯ ಚಿತ್ರಗಳು', 'ನಮ್ಮ ಊರಿನ ರಸಿಕರು', 'ಹಳ್ಳಿಯಬಾಳು', 'ಹೇಮಾವತಿ', 'ಗರುಡಗಂಬದ ದಾಸಯ್ಯ', 'ಹೇಮಾವತಿಯ ಪೀಠದಲ್ಲಿ' ಮತ್ತು ಇತರ ಪ್ರಬಂಧಗಳು ಇವರ ಪ್ರಮುಖ ಕೃತಿಗಳು. ಮಹಾತ್ಮ ಗಾಂಧಿಯವರ ಆತ್ಮ ಕಥೆಯನ್ನು ಕನ್ನಡಕ್ಕೆ ಭಾಷಾಂತರ ಮಾಡಿದ್ದಾರೆ.

ಅವರು ಬರೆದಿರುವ ಸಣ್ಣ ಕಥೆ 'ಭೂತಯ್ಯನ ಮಗ ಅಯ್ಯು!' ಕನ್ನಡದಲ್ಲಿ ಚಲನಚಿತ್ರವಾಗಿ ಚಿತ್ರರಸಿಕರ ಮನಗೆದ್ದಿದೆ. ಇವರ ಮತ್ತೊಂದು ಕೃತಿ ಹೇಮಾವತಿಯೂ ಸಹ ಅದೇ ಹೆಸರಿನಲ್ಲಿ ಚಲನಚಿತ್ರವಾಗಿದೆ.

ಅಮೆರಿಕದಲ್ಲಿ ಗೊರೂರು ಕನ್ನಡದ ಪ್ರವಾಸಿ ಗ್ರಂಥಗಳಲ್ಲಿ ಪ್ರಮುಖ ವಾಗಿದ್ದು ಕೇಂದ್ರ ಸಾಹಿತ್ಯ ಅಕಾಡಮಿಯ ಪ್ರಶಸ್ತಿಯನ್ನು ಗಳಿಸಿದೆ.

1969ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡಮಿಯ ಪ್ರಶಸ್ತಿಯ ಗೌರವ ದೊರೆತಿದೆ. 1979ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪ್ರಶಸ್ತಿ ದೊರೆತಿದೆ.

1982ರ ಡಿಸೆಂಬರ್‌ನಲ್ಲಿ ಶಿರಸಿಯಲ್ಲಿ ನಡೆದ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಆದ್ಯ ರಂಗಾಚಾರ್ಯ (ಶ್ರೀರಂಗ)

ಜನನ : 26.9.1904 **ನಿಧನ : 17.10.1984**



ದಿಟ್ಟತನದ ಸ್ವಭಾವದ ಆದ್ಯ ರಂಗಾಚಾರ್ಯರು (ಶ್ರೀರಂಗ) ಪ್ರಾರಂಭದ ಶಿಕ್ಷಣವನ್ನು ಬಿಜಾಪುರದಲ್ಲಿ ಪಡೆದು, ನಂತರ ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ವಿಶೇಷ ವ್ಯಾಸಂಗವನ್ನಾಗಿ ಸಂಸ್ಕೃತವನ್ನು ಆರಿಸಿಕೊಂಡು ಪದವಿಧರರಾದರು.

ಐ.ಸಿ.ಎಸ್. ಪದವಿಯನ್ನು ಪಡೆಯಲು ಲಂಡನ್‌ಗೆ ಹೋದ ಅವರು ಪರೀಕ್ಷೆಯಲ್ಲಿ ತೇರ್ಗಡೆಯಾಗಿ. 1928ರಲ್ಲಿ ಸ್ವದೇಶಕ್ಕೆ ಹಿಂದಿರುಗಿದರು. ಲಂಡನ್‌ನಲ್ಲಿರುವಾಗ ಅವರ ಮೇಲೆ ಅಲ್ಲಿಯ ನಾಟಕ ಕಲೆ ಅಧಿಕ ಪ್ರಭಾವ ಬೀರಿತು.

ಇಂಗ್ಲೆಂಡ್‌ನಿಂದ ಓಂದಿರುಗಿದ ಮೇಲೆ ಧಾರವಾಡದ ಕಾಲೇಜಿನಲ್ಲಿ ಇಪ್ಪತ್ತು ವರ್ಷಗಳ ಕಾಲ ಸಂಸ್ಕೃತದ ಅಧ್ಯಾಪಕರಾಗಿದ್ದು ನಂತರ ದೆಹಲಿ ಮತ್ತು ಬೆಂಗಳೂರು ಆಕಾಶವಾಣಿ ಕೇಂದ್ರಗಳಲ್ಲಿ ನಾಟಕ ಮತ್ತು ಸಂಗೀತ ವಿಭಾಗದಲ್ಲಿ ಕೆಲಸಮಾಡಿ 1959ರಲ್ಲಿ ನಿವೃತ್ತರಾದರು.

ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಂಡಿದ್ದ ಇವರಿಂದ ನಾಟಕ ಕ್ಷೇತ್ರಕ್ಕೆ ದೊರೆತ ಕಾಣಿಕೆ ಅಪಾರ. 'ಉದರ ವೈರಾಗ್ಯ', 'ದರಿದ್ರನಾರಾಯಣ'. 'ಹರಿಜನ್ವಾರ', 'ಸಂಧ್ಯಾಕಾಲ', 'ಶತಾಯಗತಾಯ', 'ಕರ್ತಾರನ ಕಮ್ಮಟ', 'ಕೇಳು ಜನಮೇಜಯ'– ಇವರ ಪ್ರಸಿದ್ಧ ನಾಟಕಗಳು.

'ವಿಶ್ವಾಮಿತ್ರ ಸೃಷ್ಟಿ', 'ಭರಮಪ್ಪನ ಭೂತ', 'ಪ್ರಕೃತಿ ಪುರುಷ' ಇವರು ರಚಿಸಿದ ಕಾದಂಬರಿಗಳಾದರೆ 'ಆತ್ಮ ಜಿಜ್ಞಾಸೆ', ಆತ್ಮಕಥನ.

1955ರಲ್ಲಿ ರಾಯಚೂರಿನಲ್ಲಿ ನಡೆದ 38ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿ ಇವರಿಗೆ ಲಭಿಸಿತ್ತು.

1971ರಲ್ಲಿ ರಾಷ್ಟ್ರೀಯ ನಾಟಕ ಅಕಾಡಮಿ ಪ್ರಶಸ್ತಿ 1972ರಲ್ಲಿ ಪದ್ಮಭೂಷಣ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.


'ಕವಿ ಕುಲಗುರು ಕಾಳಿದಾಸ' ವಿಮರ್ಶಾಗ್ರಂಥಕ್ಕೆ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ದೊರಕಿದೆ.

ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಅವರನ್ನು ಮುಂಬಯಿಗೆ ವರ್ಗ ಮಾಡಿದಾಗ ಪ್ರತಿಭಟಿಸಿ ಅಧ್ಯಾಪಕ ವೃತ್ತಿಗೇ ರಾಜೀನಾಮೆ ನೀಡಿದ್ದರು. ರಾಷ್ಟ್ರದ ತುರ್ತುಪರಿಸ್ಥಿಯ ಅವಧಿಯಲ್ಲಿ ಅದನ್ನು ಎದುರಿಸಿದ ಧೀಮಂತ ಬರಹಗಾರರಲ್ಲಿ ಅವರೂ ಒಬ್ಬರು.

ಗೋಕಾಕ್ ವರದಿ ಜಾರಿಗಾಗಿ ನಡೆದ ಸತ್ಯಾಗ್ರಹದಲ್ಲಿಯೂ ಅವರು ಭಾಗವಹಿಸಿದ್ದರು.

ಕು.ವೆಂ.ಪು

ಜನನ : 29.12.1904 **ನಿಧನ : 10.11.1994**



ಪ್ರಥಮ ಜ್ಞಾನಪೀಠ ಪ್ರಶಸ್ತಿ, ಪ್ರಥಮ ಪಂಪ ಪ್ರಶಸ್ತಿ, ಪ್ರಥಮ ಕರ್ನಾಟಕ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ಫೆಲೋಷಿಪ್ ಹೀಗೆ ಪ್ರಥಮ ಪ್ರಶಸ್ತಿ / ಪುರಸ್ಕಾರಗಳ ಸರಮಾಲೆಯನ್ನೇ ಧರಿಸಿದ ಪ್ರಥಮ ಕನ್ನಡ ಕವಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿರುವವರು ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪನವರು.

ತೀರ್ಥಹಳ್ಳಿ, ಮೈಸೂರಿನಲ್ಲಿ ವಿದ್ಯಾಭ್ಯಾಸ ಮಾಡಿ 1929ರಲ್ಲಿ ಎಂ.ಎ.

ಪದವಿ ಪಡೆದು ಮಹಾರಾಜ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇವೆ ಆರಂಭಿಸಿದ ಅವರು ಮೈಸೂರು ವಿಶ್ವವಿದ್ಯಾಲಯದ ಅತ್ಯುನ್ನತ ಹುದ್ದೆಯಾದ ಉಪ ಕುಲಪತಿಯ ಹುದ್ದೆಗೂ ಏರಿದರು.

ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ಸಿದ್ಧಿಪಡೆದಿದ್ದ ಅವರು ಕಾವ್ಯ ಕ್ಷೇತ್ರದಲ್ಲಿ ಮಹಾಕಾವ್ಯ, ಖಂಡಕಾವ್ಯ, ಕಥನ ಕಾವ್ಯ, ಭಾವಗೀತೆಗಳನ್ನೂ ಬರೆದಿದ್ದಾರೆ. ಅವರು ರಚಿಸಿರುವ "ಮಹಾಕಾವ್ಯ' "ರಾಮಾಯಣ ದರ್ಶನಂ", "ಚಿತ್ರಾಂಗದ" ಮತ್ತು "ಸಮುದ್ರ ಲಂಘನ" ಅವರ ಖಂಡ ಕಾವ್ಯಗಳು. ಅವರು ರಚಿಸಿರುವ ಸುಮಾರು ಒಂದು ಸಾವಿರ ಭಾವಗೀತೆಗಳು ಇಪ್ಪತ್ತೆರಡು ಸಂಕಲನಗಳಲ್ಲಿ ಪ್ರಕಟಗೊಂಡಿವೆ.

ಇವರು ರಚಿಸಿರುವ ಕೃತಿಗಳು ಒಂದು ನೂರಕ್ಕೂ ಹೆಚ್ಚಿವೆ. 'ಕಾನೂರು ಸುಬ್ಬಮ್ಮ ಹೆಗ್ಗಡಿತಿ', 'ಮಲೆಗಳಲ್ಲಿ ಮದುಮಗಳು', ಎರಡು ಬೃಹತ್ ಕಾದಂಬರಿಗಳು. "ಶ್ರೀ ರಾಮ ಕೃಷ್ಣಪರಮಹಂಸ", "ಸ್ವಾಮಿ ವಿವೇಕಾನಂದ" ಜೀವನ ಚರಿತ್ರೆಗಳು. 'ರಕ್ತಾಕ್ಷಿ', 'ಜಲಗಾರ', 'ಯಮನ ಸೋಲು', 'ಬೆರಳ್‌ಗೆ ಕೊರಳ್', 'ಸ್ಮಶಾನ ಕುರುಕ್ಷೇತ್ರ' ನಾಟಕಗಳು.


ಪದ್ಮಭೂಷಣ, ಪದ್ಮವಿಭೂಷಣ ಕೇಂದ್ರಸರ್ಕಾರದ ಪ್ರಶಸ್ತಿಗಳಾದರೆ ಕರ್ನಾಟಕ ಸರ್ಕಾರದ ರಾಷ್ಟ್ರಕವಿ ಬಿರುದು ಇವರಿಗೆ ಲಭಿಸಿದೆ. ಕರ್ನಾಟಕದ ಮೂರು ವಿಶ್ವವಿದ್ಯಾಲಯಗಳಿಂದ – ಮೈಸೂರು, ಕರ್ನಾಟಕ ಬೆಂಗಳೂರು – ಗೌರವ ಡಿ ಲಿಟ್ ಪದವಿಗಳು ಲಭಿಸಿವೆ.

ಕರ್ನಾಟಕ ಏಕೀಕರಣದ ಪರವಾಗಿದ್ದ ಕುವೆಂಪುರವರು ಪ್ರತಿಪಾದಿಸಿ ಮಾಡುತ್ತಿದ್ದ ಭಾಷಣದ ಬಗ್ಗೆ ಆಗಿನ ಅಧಿಕಾರಸ್ಥರಿಗೆ ಹಿಡಿಸದೆ ನೋಟೀಸ್ ನೀಡಿದಾಗ ಅಖಂಡ ಕರ್ನಾಟಕ ಎಂಬ ಪದ್ಯವನ್ನೇ ಬರೆದು ಕಳಿಸಿದರು.

"ಕನ್ನಡಕ್ಕಾಗಿ ಕೈ ಎತ್ತು ನಿನ್ನ ಕೈ ಕಲ್ಪವೃಕ್ಷವಾಗುತ್ತದೆ. ಕನ್ನಡಕ್ಕಾಗಿ ಕೊರಳೆತ್ತು ಅಲ್ಲಿ ಪಾಂಚಜನ್ಯ ಮೊಳಗುತ್ತದೆ" ಎಂದು ಸಾರಿದ್ದರು.

ಪು. ತಿ. ನರಸಿಂಹಾಚಾರ್

ಜನನ : 17.3.1905 **ನಿಧನ : 13.10.1998**



ಪುರೋಹಿತ ತಿರುನಾರಾಯಣ ಅಯ್ಯಂಗಾರ್ ನರಸಿಂಹಾಚಾರ್ – ಪು.ತಿ.ನ.–ಶ್ರೀ ವೈಷ್ಣವ ಕ್ಷೇತ್ರಗಳಲ್ಲಿ ಒಂದಾದ ಮೇಲುಕೋಟೆಯಲ್ಲಿ ಜನಿಸಿದರು. ಸಂಪ್ರದಾಯದ ಸಂಸ್ಕೃತ ಶಿಕ್ಷಣದ ಜೊತೆಗೆ ಪಾಶ್ಚಿಮಾತ್ಯ ವಿದ್ಯಾಭ್ಯಾಸವನ್ನು ಪಡೆದ ಇವರು 1926ರಲ್ಲಿ B.A ಪದವಿಯನ್ನು ಪಡೆದರು. ಮೈಸೂರು ಸೈನ್ಯದ ಮುಖ್ಯಾಧಿಕಾರಿಗಳ ಕಛೇರಿಯಲ್ಲಿ ಶೀಘ್ರಲಿಪಿಗಾರರಾಗಿ ಸೇವೆಯನ್ನು ಆರಂಭಿಸಿದ ಅವರು ನಾನಾ ಹುದ್ದೆಗಳಲ್ಲಿ ಮುಂದುವರೆದು ಶಾಸನ ಸಭಾ ಕಛೇರಿಯಲ್ಲಿ ಸಂಪಾದಕರಾಗಿ ಹುದ್ದೆ ನಿರ್ವಹಿಸಿ ನಿವೃತ್ತರಾದರು.

ವೃತ್ತಿ ಜೀವನದೊಂದಿಗೇ ಸಾಹಿತ್ಯ ಜೀವನವನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದ ಇವರಿಂದ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕೃತಿರಚನೆಗಳಾದವು. ಹಣತೆ, ಮಾಂದಳಿರು, ಮಲೆದೇಗುಲ, ರಸಸರಸ್ವತಿ, ಮನೆದೇವರು, ಮುಂತಾದುವು ಕವನ ಸಂಗ್ರಹಗಳಾದರೆ, ಈಚಲ ಮರದ ಕೆಳಗೆ ಧೇರುಕ ಪುರಾಣ ಪ್ರಬಂಧ ಸಂಕಲನಗಳು.

ಸಂಗೀತ, ನಾಟಕ ಹಾಗೂ ಗೀತ ನಾಟಕಗಳ ರಚನೆಯಲ್ಲಿ ವಿಶಿಷ್ಟವಾದ ಕೊಡುಗೆಯನ್ನು ಪು.ತಿ.ನ.ರವರು ನೀಡಿದ್ದಾರೆ. ವಸಂತ ಚಂದನ, ಸೀತಾ ಕಲ್ಯಾಣ, ಹೆಸರಾಂತ ಸಂಗೀತ ನಾಟಕಗಳಾದರೆ ಅಹಲ್ಯೆ, ಗೋಕುಲ ನಿರ್ಗಮನ, ಶಬರಿ, ವಿಕಟಕವಿ ಭಾವಪೂರ್ಣವಾದ ಸುಂದರ ಗೀತ ನಾಟಕಗಳು.


ಇವರು ರಚಿಸಿರುವ "ಹಂಸ ದಮಯಂತಿ ಮತ್ತು ಇತರ ರೂಪಕ"ಗಳು. ಕೃತಿಗೆ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ದೊರಕಿದೆ (1966). 1971ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ದೊರೆತಿದೆ. 1990ರಲ್ಲಿ ಕೇಂದ್ರ ಸರ್ಕಾರದ "ಪದ್ಮಶ್ರೀ" ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಶ್ರೀ ಹರಿ ಚರಿತೆ ಕಾವ್ಯಕ್ಕೆ ಪಂಪ ಪ್ರಶಸ್ತಿ 1991ರಲ್ಲಿ ಲಭಿಸಿದೆ. ಅಲ್ಲದೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಫೆಲೋಷಿಪ್ ಸಹ ಇವರಿಗೆ ನೀಡಲಾಗಿದೆ.

ಪುತಿನರವರು ಕನ್ನಡವಲ್ಲದೆ ಸಂಸ್ಕೃತ, ತಮಿಳು, ಇಂಗ್ಲೀಷ್, ಫ್ರೆಂಚ್ ಭಾಷೆಗಳಲ್ಲಿ ಪ್ರಾವೀಣ್ಯತೆಯನ್ನು ಪಡೆದಿದ್ದರು.

1981ರ ಮಾರ್ಚ್‌ನಲ್ಲಿ ಚಿಕ್ಕಮಗಳೂರಿನಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿಯನ್ನು ಅಲಂಕರಿಸಿದ್ದರು.

ರಂ. ಶ್ರೀ. ಮುಗಳಿ

ಜನನ : 15.7.1906 **ನಿಧನ : 20.2.1993**



'ರಸಿಕ ರಂಗ' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ರಂಗನಾಥ ಶ್ರೀನಿವಾಸ ಮುಗಳಿ – ರಂ.ಶ್ರೀ. ಮುಗಳಿಯವರು – ಕರ್ನಾಟಕ ಕಾಲೇಜಿನಿಂದ ಬಿ.ಎ., ಎಂ.ಎ. ಪದವಿ ಪಡೆದು ಮುಂಬಯಿಯ ಬಿ.ಟಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ, ಅಧ್ಯಾಪಕರಾಗಿ ಸೇವೆಯನ್ನು ಆರಂಭಿಸಿ ವಿಲಿಂಗ್ಡನ್ ಕಾಲೇಜಿನಲ್ಲಿ ಅಧ್ಯಾಪಕರಾಗಿ, ಪ್ರಿನ್ಸಿಪಾಲರಾಗಿ ಉದ್ಯೋಗ ನಿರ್ವಹಿಸಿ 1966ರಲ್ಲಿ ನಿವೃತ್ತರಾದರು. ನಿವೃತ್ತರಾದ ನಂತರವೂ ಕೆಲವು ಕಾಲ ಸರ್ಕಾರದ ಸಾಹಿತ್ಯ ಸಂಸ್ಕೃತಿಯ ಇಲಾಖೆಯಲ್ಲಿ ನಿರ್ದೇಶಕ ಪದವಿಯಲ್ಲಿ ಸೇವೆ ಸಲ್ಲಿಸಿದರು.

ಸಾಹಿತ್ಯದ ಹಲವು ಪ್ರಕಾರಗಳಲ್ಲಿ ರಚನೆ ಮಾಡಿರುವ ಮುಗಳಿಯವರು ಕಥೆಗಾರರಾಗಿ ಕಾದಂಬರಿಕಾರರಾಗಿ, ನಾಟಕಕಾರರಾಗಿ ವಿಮರ್ಶಕರಾಗಿ, ಕವಿಯಾಗಿ ಸಂಶೋಧಕರಾಗಿ ತಮ್ಮ ಕೊಡುಗೆಯನ್ನು ನೀಡಿದ್ದಾರೆ.

ಜೀವನ ಪತ್ರಿಕೆಯ ಸಂಪಾದಕರಾಗಿ ಪತ್ರಿಕಾರಂಗದಲ್ಲಿಯೂ ಸಹ ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ.

ಬಾಸಿಂಗ, ಓ ಅಶಾಂತಿ, ಅಪಾರ, ಕರುಣೆ, ನಿತ್ಯನಿರಂತರ, ನವಮಾನವ, ಮಣಿಮಾಲೆ ಕವನ ಸಂಕಲನಗಳನ್ನು, ರಾವ ಸಾಹೇಬ ಸಾಮಾಜಿಕ ನಾಟಕವನ್ನು ಅಲ್ಲದೆ ಜೀವನ ರಸಿಕ, ಅರವಿಂದ ಮಕರಂದ ಜೀವನ ಚರಿತ್ರೆಗಳನ್ನು ಬರೆದಿದ್ದಾರೆ.

'ಕನ್ನಡ ಸಾಹಿತ್ಯ ಚರಿತ್ರೆ'ಗೆ ಪುಣೆ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪ್ರಶಸ್ತಿ ದೊರೆತಿದೆಯಲ್ಲದೆ, 1956ರ ಸಾಲಿನ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿಯೂ ಲಭಿಸಿದೆ.

'ಕಲ್ಚರಲ್ ಹೆರಿಟೇಜ್ ಆಫ್ ಕರ್ನಾಟಕ', 'ರನ್ನನ ಕೃತಿರತ್ನ' ಇವರು ರಚಿಸಿರುವ ಮತ್ತೆರಡು ಮಹೋನ್ನತ ಕೃತಿಗಳು.

1963ರ ಡಿಸೆಂಬರ್‌ನಲ್ಲಿ ಸಿದ್ದಗಂಗೆಯಲ್ಲಿ ನಡೆದ 44ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿಯ ಗೌರವ ಇವರಿಗೆ ಲಭಿಸಿತ್ತು.

> **"ನಮ್ಮ ನಮ್ಮ ಭಾಷೆಯ ವಿಷಯದಲ್ಲಿ ನಿರಭಿಮಾನವೂ ಸಲ್ಲದು, ದುರಭಿಮಾನವೂ ಸಲ್ಲದು. ಸದಭಿಮಾನವಿರಬೇಕು. ಈ ಸದಭಿಮಾನವು ನಮ್ಮ ಭಾಷೆಯ, ಸಾಹಿತ್ಯ, ಸಂಸ್ಕೃತಿಗಳ ಜ್ಞಾನದಿಂದ ಪ್ರೇರಿತವಾದದ್ದಿರಬೇಕು. ಕೇವಲ ಭಾವನೆಯ ಗುರುಳಮೆಯ ಮೇಲೆ ಕಟ್ಟಿದ ಗಾಳಿಗೋಪುರವಾಗಿರಬಾರದು.**
>
> **–ರಂ.ಶ್ರೀ. ಮುಗಳಿ**

ತೀ.ನಂ. ಶ್ರೀಕಂಠಯ್ಯ

ಜನನ : 26.11.1906 ನಿಧನ : 6.9.1966



ತೀ.ನಂ.ಶ್ರೀ ಎಂಬ ಕಾವ್ಯ ನಾಮದಿಂದ ಪರಿಚಿತರಾಗಿರುವ ತೀ.ನಂ.ಶ್ರೀ ಕಂಠಯ್ಯನವರು 1926ರಲ್ಲಿ ಬಿ.ಎ. ಪದವಿಯನ್ನು ಪಡೆದು 1928ರಲ್ಲಿ ಅಂದಿನ ಕಾಲದ ಉನ್ನತ ಪರೀಕ್ಷೆಯಾಗಿದ್ದ ಎಂ.ಸಿ.ಎಸ್. (ಮೈಸೂರು ಸಿವಿಲ್ ಸರ್ವಿಸ್) ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದರು. ಎಂ.ಎ. ಪರೀಕ್ಷೆಯಲ್ಲಿ ಕನ್ನಡ ಮತ್ತು ಇಂಗ್ಲೀಷ್ ಎರಡರಲ್ಲೂ ಪ್ರಥಮ ಸ್ಥಾನ ಪಡೆದು ಸುವರ್ಣ ಪದಕಗಳನ್ನು ಪಡೆದರು.

ಅಮಲ್ದಾರ್ ಪದವಿ ದೊರಕಿದರೂ ಇವರ ಗುರುಗಳಾಗಿದ್ದ ಬಿ.ಎಂ.ಶ್ರೀಯವರ ಒತ್ತಾಯಕ್ಕೆ ಗೌರವ ಕೊಟ್ಟು ಅಧ್ಯಾಪಕ ವೃತ್ತಿಯನ್ನು ಕೈಗೊಂಡರು. 1928ರಿಂದ 1952ರ ವರೆಗೆ ಮೈಸೂರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆಯನ್ನು ಸಲ್ಲಿಸಿದರು. 1955ರಲ್ಲಿ ಅಮೆರಿಕದ ರಾಕ್ ಫೆಲರ್ ಪ್ರತಿಷ್ಠಾನದ ಆಹ್ವಾನದ ಮೇಲೆ ಅಮೆರಿಕಕ್ಕೆ ಹೋಗಿ ಭಾಷಾ ಶಾಸ್ತ್ರ ಸಂಬಂಧದ ಸಂಶೋಧನಾ ಮತ್ತು ಬೋಧನಾ ವಿಧಾನಗಳನ್ನು ಅಭ್ಯಸಿಸಿದರು.

ವಿದ್ಯಾರ್ಥಿ ದೆಸೆಯಿಂದಲೆ ಸಾಹಿತ್ಯದ ಒಲವನ್ನು ಹೊಂದಿದ್ದ ಇವರು ಕೆಲವು ಕವಿತೆಗಳನ್ನು ಬರೆದಿದ್ದರು.

"ಒಲುಮೆ" ಇವರ ಮೊದಲ ಕೃತಿ. ಗದಾಯುದ್ಧ ಇವರ ವಿದ್ವತ್ಪೂರ್ಣ ಸಂಪಾದಿತ ಕೃತಿ. ಹೆಣ್ಣು ಮಕ್ಕಳ ಪದಗಳು (ಜನಪದ ಗೀತೆಗಳ ಸಂಗ್ರಹ) ಪಂಪ (ವಿಮರ್ಶಾ ಕೃತಿ)ಕಾವ್ಯ ಸಮೀಕ್ಷೆ (ಸಮೀಕ್ಷಾ ಲೇಖನಗಳ ಸಂಗ್ರಹ) ಸಮಾಲೋಕನ (ಲೇಖನಗಳ ಸಂಕಲನ) ಕಾವ್ಯಾನುಭವ ಮುಂತಾದವು ಅವರು ರಚಿಸಿರುವ ಹಲವು ಕೃತಿಗಳು.

ಭಾರತದ ಅತ್ಯುನ್ನತ ಪದವಿ ರಾಷ್ಟ್ರಾಧ್ಯಕ್ಷರಿಗೆ 'ರಾಷ್ಟ್ರಪತಿ' ಎಂಬ ಹೆಸರನ್ನು ಇವರು ಸೂಚಿಸಿದ್ದು ಅದು ಭಾರತ ಸಂವಿಧಾನ ಪರಿಷತ್ತಿನ ಅಧ್ಯಕ್ಷರು ಕರೆದಿದ್ದ ಸಭೆಯಲ್ಲಿ ಅಂಗೀಕೃತವಾಗಿದ್ದು ಕನ್ನಡಿಗರ ಹೆಮ್ಮೆ.

ಭಾರತೀಯ ಕಾವ್ಯಮಿಮಾಂಸೆ ಅವರ ಮೇರುಕೃತಿ. 1988ರಲ್ಲಿ ಈ ಕೃತಿಗೆ ಪಂಪ ಪ್ರಶಸ್ತಿಯ ಗೌರವ ಪುರಸ್ಕಾರ ದೊರೆತಿದೆ.

ಅ. ನ. ಕೃಷ್ಣರಾವ್

ಜನನ : 9.5.1908 ನಿಧನ : 8.7.1971



"ಕನ್ನಡ ಕಾದಂಬರಿ ಸಾರ್ವಭೌಮ"ರೆಂದೇ ಕನ್ನಡ ಜನತೆಯಿಂದ ಅಭಿಮಾನ ಪೂರ್ವಕವಾಗಿ ಕರೆಯಿಸಲ್ಪಟ್ಟುಗೊಂಡ ಅರಕಲಗೂಡು ನರಸಿಂಗ ರಾಯ ಕೃಷ್ಣರಾಯರು ತಮ್ಮ ಹದಿನಾರರ ಹರಯದಲ್ಲಿಯೇ ಸಾಹಿತ್ಯ ರಚನೆಯನ್ನು ಕೈಗೊಂಡು ಕನ್ನಡ ಸಾಹಿತ್ಯ ಪ್ರಿಯರ ಅಚ್ಚುಮೆಚ್ಚಿನ ಕಾದಂಬರಿಕಾರರೆನಿಸಿಕೊಂಡರು. ಕನ್ನಡದ ಉದ್ದಾಮ ಸಾಹಿತಿಯಾಗಿ ಅವರು ಮುಟ್ಟದ ಸೊಪ್ಪಿಲ್ಲ ಎಂಬಂತೆ ಕನ್ನಡ ಸಾಹಿತ್ಯದ ಎಲ್ಲಾ ಪ್ರಾಕಾರಗಳಲ್ಲಿಯೂ ಕೈಯಾಡಿಸಿದ

ಸಾಹಿತ್ಯ ಶ್ರೇಷ್ಠರು. ನಾಟಕ, ಕಾದಂಬರಿ, ಕಥಾಸಂಕಲನ, ಜೀವನಚರಿತ್ರೆ, ವಿಚಾರ ಸಾಹಿತ್ಯ – ಹೀಗೆ ಹಲವು ಪ್ರಾಕಾರಗಳಲ್ಲಿ ಅವರು ಕೊಡುಗೆ ನೀಡಿದರು. ಕಾದಂಬರಿ ರಚನೆಯಲ್ಲಿ ಸಿದ್ಧ ಹಸ್ತರು. ತಮ್ಮ ಸಾಮಾಜಿಕ ಕಾದಂಬರಿಗಳಿಂದ ಸಾಮಾನ್ಯ ಓದುಗರಲ್ಲಿ ಓದುವ ಪ್ರಜ್ಞೆಯನ್ನು ಬೆಳೆಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಮುಖವಾಣಿ ಪತ್ರಿಕೆ ಕನ್ನಡ ನುಡಿಯ ಪ್ರಥಮ ಸಂಪಾದಕರಾಗಿದ್ದರು.

ಇನ್ನೂರಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದ ಇವರ ಪ್ರಮುಖ ಕೃತಿಗಳಲ್ಲಿ ಸಂಧ್ಯಾರಾಗ, ಉದಯರಾಗ, ಸಾಹಿತ್ಯರತ್ನ, ನಟಸಾರ್ವಭೌಮ, ಕಣ್ಣೀರು, ಗೃಹಲಕ್ಷ್ಮಿ, ರುಕ್ಮಿಣಿ, ಮೊದಲಾದವು ಪ್ರಮುಖ ಕಾದಂಬರಿಗಳಾದರೆ, ಕನ್ನಡದಾರಿ, ಅಖಂಡ ಕರ್ನಾಟಕ, ಕರ್ನಾಟಕದ ಹಿತಚಿಂತನೆ, ಮುಂತಾದವು ನಾಡು ನುಡಿಗೆ ಸಂಬಂಧಿಸಿದ ಕೃತಿಗಳು. ಇವರು ರಚಿಸಿದ ಸಂಧ್ಯಾರಾಗ ಕೃತಿಯನ್ನಾಧರಿಸಿ ತಯಾರಿಸಲಾದ ಚಿತ್ರ ಅತ್ಯಂತ ಜನಪ್ರಿಯವಾಯಿತು.

1970ರಲ್ಲಿ ರಾಜ್ಯಸಾಹಿತ್ಯ ಅಕಾಡಮಿಯ ಅಧ್ಯಕ್ಷರಾಗಿದ್ದರು. ಮೈಸೂರು ವಿಶ್ವವಿದ್ಯಾಲಯದಿಂದ ಇವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಗಿದೆ.


1960ರಲ್ಲಿ ಮಣಿಪಾಲದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದರು. ಆ ಸಮ್ಮೇಳನದಲ್ಲಿ ಅವರು ಮಾಡಿದ ಅಧ್ಯಕ್ಷ ಭಾಷಣ ಅತ್ಯಂತ ಪ್ರಭಾವಕಾರಿಯಾಗಿದ್ದು ಕನ್ನಡಿಗರನ್ನು ಬಡಿದೆಬ್ಬಿಸುವಂತಿತ್ತು.

ಅರವತ್ತರ ದಶಕದವರೆಗೂ ಸಾಹಿತ್ಯ ರಚನೆಯಲ್ಲಿಯೇ ತಲ್ಲೀನರಾಗಿದ್ದ ಅನಕೃರವರು ಮುಂದೆ ತಮ್ಮನ್ನು ತಾವೇ ಕನ್ನಡಿಗರ ಹಾಗೂ ಕನ್ನಡದ ಸಮಸ್ಯೆಗಳ ನಿವಾರಣೆಗಾಗಿ ಅರ್ಪಿಸಿಕೊಂಡರು.

ಅ.ನ.ಕೃರವರು "ನನ್ನಂತಹವರು ಕನ್ನಡಕ್ಕೆ ಅನೇಕರಿದ್ದಾರೆ. ಆದರೆ ನನಗಿರುವುದು ಒಂದೇ ಕನ್ನಡ" ಎಂದು ಯಾವಾಗಲೂ ಹೇಳುತ್ತಿದ್ದರು.

ಜಿ. ಪಿ. ರಾಜರತ್ನಂ

ಜನನ : **8.12.1908** ನಿಧನ : **13.3.1979**



ಕವಿ ನಾಟಕಕಾರ, ವಿಮರ್ಶಕ ಮಕ್ಕಳ ಸಾಹಿತ್ಯ ರಚನೆಗಾರರಾದ ಜಿ.ಪಿ.ರಾಜರತ್ನಂ ಮೈಸೂರಿನಲ್ಲಿ ಪ್ರೌಢಶಿಕ್ಷಣ ಮುಗಿಸಿ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ. ಮೈಸೂರಿನ ಮಹಾರಾಜಾ ಕಾಲೇಜಿನಿಂದ ಎಂ.ಎ. ಪದವಿಯನ್ನು ಪಡೆದು ಅಲ್ಲೇ ಉಪನ್ಯಾಸಕರಾಗಿ ಸೇರಿ ಮೈಸೂರು, ತುಮಕೂರು, ಶಿವಮೊಗ್ಗ, ಬೆಂಗಳೂರಿನಲ್ಲಿ ಸೇವೆ ಸಲ್ಲಿಸಿದರು.

ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಪ್ರಾಧ್ಯಾಪಕರಾಗಿದ್ದ ರಾಜರತ್ನಂರವರು ತಮ್ಮ ಪ್ರೀತಿಯ ಶಿಷ್ಯರಿಗೆ ಪಾಠ ಹೇಳುವುದರ ಜೊತೆಗೆ, ವಿದ್ಯಾರ್ಥಿಗಳಲ್ಲಿ ಸುಪ್ತವಾಗಿ ಅಡುಗಿದ್ದ ಸಾಹಿತ್ಯಾಭಿರುಚಿಯು, ಹೊರಹೊಮ್ಮಿ ಪ್ರಕಾಶಿಸಲು ಕಾರಣರಾಗಿದ್ದರು. ಮೈಸೂರಿನ "ಯೂನಿಯನ್" ಪತ್ರಿಕೆ ಮತ್ತು ಸೆಂಟ್ರಲ್ ಕಾಲೇಜ್ ಕನ್ನಡ

ಸಂಘದ ಮೂಲಕ ವಿದ್ಯಾರ್ಥಿಗಳೇ ಬರೆದ ಕವನ, ಲೇಖನ ವಿಮರ್ಶೆಗಳ ಹಲವಾರು ಸಂಕಲನಗಳನ್ನು ಹೊರತರಲು ನೆರವಾಗಿದ್ದರು.

ರಾಜರತ್ನಂರವರ ಸಾಹಿತ್ಯ ಸೇವೆ ಅಪಾರ. ಐದು ದಶಕಗಳ ಕಾಲದ ಅವರ ಸಾಹಿತ್ಯ ಸೇವೆಯಲ್ಲಿ ಅವರೂ ಬರೆದರು. ಬರೆಯುವ ಕಿರಿಯರಿಗೂ ಪ್ರೋತ್ಸಾಹ ನೀಡಿದರು. ಸಂಘ ಸಂಸ್ಥೆಗಳನ್ನು ಕಟ್ಟುವುದರ ಮೂಲಕ ಪುಸ್ತಕಗಳನ್ನು ಮಾರಾಟ ಮಾಡುವುದರ ಮೂಲಕ ಅವರು ಸಲ್ಲಿಸಿದ ಸಾಹಿತ್ಯ ಸೇವೆ ವಿಶಿಷ್ಟವಾದುದು.

ಶಿಶು ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿರುವ ರಾಜರತ್ನಂರವರು ಜೈನ ಸಾಹಿತ್ಯ, ಬೌದ್ಧ ಸಾಹಿತ್ಯದಲ್ಲಿಯೂ ರಚನೆ ಮಾಡಿದ್ದಾರೆ.

ರತ್ನನ ಪದಗಳು ಇವರ ಬಹು ಜನಪ್ರಿಯ ಕೃತಿ. ಶಾಂತಿ, ನಾಗನ ಪದಗಳು, ಪುರುಷ ಸರಸ್ವತಿ (ಕವನ ಸಂಕಲನಗಳು) ಗಂಡುಗೊಡಲಿ (ಪೌರಾಣಿಕ ನಾಟಕ), ನರಕದ ನ್ಯಾಯ, ಕಂಬ್ಳಿಸೇವೆ, ಶ್ರೀ ಬಾಹುಬಲಿ ವಿಜಯ, ಶ್ರೀ ಗೊಮ್ಮಟ ಶಿಲ್ಪಿ (ನಾಟಕಗಳು) ಶ್ರೀ ಕವಿರತ್ನ ಹೊಸಗನ್ನಡ ಯಶೋಧರ ಚರಿತ್ರೆ, ಶ್ರೀ ಕವಿ ಪಂಪ (ಕವಿ ಕಾವ್ಯ ವಿಮರ್ಶೆ) ಮುಂತಾದವು ಇವರು ರಚಿಸಿರುವ ಕೃತಿಗಳು. ತುತ್ತೂರಿ, ಚುಟುಕ, ಕಡಲೆಪುರಿ, ಕಲ್ಲುಸಕ್ಕರೆ, ತಾರೆ, ರಸಗವಳ, ಗುಲಗಂಜಿ ಮುಂತಾದವು ಮಕ್ಕಳ ಸಾಹಿತ್ಯಕ್ಕೆ ಇವರು ನೀಡಿರುವ ಕೊಡುಗೆಗಳು.


ವಿಶ್ವಸಾಹಿತ್ಯದಲ್ಲಿ ಒಳ್ಳೆಯದು ಯಾವುದಿದ್ದರೂ ಅದನ್ನು ಕನ್ನಡಕ್ಕೆ ತರಬೇಕು ಕನ್ನಡಿಗರಿಗೆ ಆ ಸಾಹಿತ್ಯವನ್ನು ನೀಡಬೇಕೆನ್ನುವುದು ಅವರಿಗಿದ್ದ ಹಂಬಲ. ಉತ್ತಮ ಭಾಷಣಕಾರರೂ ಆಗಿದ್ದ ಅವರು ತಮ್ಮ ವಿಶಿಷ್ಟವಾದ ಕಂಚಿನ ಕಂಠದಿಂದ ಶ್ರೋತೃಗಳನ್ನು ಆಕರ್ಷಿಸುತ್ತಿದ್ದರು.

1978ರ ಏಪ್ರಿಲ್‌ನಲ್ಲಿ ದೆಹಲಿಯಲ್ಲಿ ನಡೆದ 50ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಕರ್ನಾಟಕದಲ್ಲಿ ಇರುವವರೆಲ್ಲರಿಗೂ ಕನ್ನಡದಲ್ಲಿ ಓದುವುದೂ ಬರೆಯುವುದು ಮಾತನಾಡುವುದು ಚೆನ್ನಾಗಿ ಬರಬೇಕು. ಇದು ಅತ್ಯಂತ ಅಗತ್ಯ ಎಂದು ಪ್ರತಿಪಾದಿಸುತ್ತಿದ್ದರು.

ವಿ. ಕೃ. ಗೋಕಾಕ್

ಜನನ : 9.8.1909 ನಿಧನ : 28.4.1992



ವಿ.ಕೃ. ಗೋಕಾಕ್ ಎಂದೇ ಪರಿಚಿತರಾಗಿರುವ ವಿನಾಯಕ ಕೃಷ್ಣ ಗೋಕಾಕ್‌ರ ಹೆಸರು ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಸದಾ ಹಸಿರಾಗಿ ಉಳಿಯುವಂತಹುದು. ಇವರು ಬಹುಮುಖ ಪ್ರತಿಭಾವಂತರು ಕವಿ, ಕಾದಂಬರಿಕಾರರು, ವಿಮರ್ಶಕ, ಲೇಖಕ ಹಾಗೂ ನಾಟಕಕಾರರು.

ಅವರ ವಿದ್ಯಾಭ್ಯಾಸ ಸವಣೂರು, ಧಾರವಾಡದಲ್ಲಿ ನಡೆದು, 1931ರಲ್ಲಿ ಎಂ.ಎ. ಪದವಿ ಪಡೆದು ಫರ್ಗ್ಯುಸನ್ ಕಾಲೇಜಿನಲ್ಲಿ ಅಧ್ಯಾಪಕರಾದರು. 1933ರಲ್ಲಿ ಆಕ್ಸ್‌ಫರ್ಡ್‌ನಲ್ಲಿ ಉನ್ನತ ಶಿಕ್ಷಣ ಪಡೆದ ನಂತರ ಸಾಂಗಲಿಯ ವಿಲಿಂಗ್ಡನ್

ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದರು. ನಂತರದ ದಿನಗಳಲ್ಲಿ ಕೊಲ್ಹಾಪುರದ ರಾಜಾರಾಂ ಕಾಲೇಜ್, ಧಾರವಾಡ ಕಾಲೇಜುಗಳಲ್ಲಿ ಪ್ರಾಂಶು ಪಾಲರಾಗಿ ಸೇವೆ ಸಲ್ಲಿಸಿದರು. 1966ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿಯೂ 1970ರಲ್ಲಿ ಪುಟ್ಟಪರ್ತಿಯ ಶ್ರೀ ಸತ್ಯ ಸಾಯಿ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿಯೂ ಸೇವೆ ಸಲ್ಲಿಸಿದರು.

ಅಧ್ಯಯನ ಮತ್ತು ಅಧ್ಯಾಪನ ಇವರ ಪ್ರತಿಭೆಯ ಮುಖವಾದರೆ ಸಾಹಿತ್ಯ ಕ್ಷೇತ್ರದಲ್ಲಿ ಇವರು ಸೇವೆ ಸಲ್ಲಿಸಿದ್ದು ಇನ್ನೊಂದು ಮುಖ ನಿಷ್ಠೆ, ಶ್ರದ್ಧೆ, ಪ್ರಾಮಾಣಿಕತೆಗಳಿಂದ ವಿದ್ಯಾದಾನ ಮಾಡಿದ ಇವರದು ಗಂಭೀರ ವ್ಯಕ್ತಿತ್ವ.

'ವಿನಾಯಕ' ಎಂಬ ಕಾವ್ಯನಾಮದಿಂದ ನಾನಾಪ್ರಕಾರಗಳಲ್ಲಿ ಸಾಹಿತ್ಯ ರಚನೆ ಮಾಡಿದ್ದಾರೆ.

ಅವರ ಮಹಾಕೃತಿ "ಭಾರತ ಸಿಂಧುರಶ್ಮಿ" ಒಂದು ಮಹಾಕಾವ್ಯ. "ಸಮುದ್ರದಾಚೆ"ಯಿಂದ ಇವರು ರಚಿಸಿರುವ ಪ್ರವಾಸ ಸಾಹಿತ್ಯ.

ಗೋಕಾಕರಿಗೆ ಹಲವಾರು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಪ್ರಶಸ್ತಿಗಳು ಲಭಿಸಿವೆ. ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಕ್ಯಾಲಿಫೋರ್ನಿಯ ಪೆಸಿಫಿಕ್ ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್ ಪ್ರಶಸ್ತಿ ನೀಡಿ ಗೌರವಿಸಿದೆ "ದ್ಯಾವಾ ಪೃಥ್ವಿ" ಕೃತಿಗೆ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ "ಭಾರತ ಸಿಂಧು ರಶ್ಮಿಗೆ" ಜ್ಞಾನಪೀಠ ಪ್ರಶಸ್ತಿ ಲಭಿಸಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಕನ್ನಡದ ಮೊದಲ ಅಧ್ಯಕ್ಷ ಪದವಿಯ ಗೌರವಕ್ಕೂ ಇವರು ಭಾಜನರಾಗಿದ್ದರು.

ಭಾರತ ಸರ್ಕಾರದ ಪದ್ಮಶ್ರೀ ಪ್ರಶಸ್ತಿಯೂ 1961ರಲ್ಲಿ ಇವರಿಗೆ ಲಭಿಸಿದೆ.

ಕನ್ನಡಿಗರ ಮನದಲ್ಲಿ ಕನ್ನಡಾಭಿಮಾನದ ಕಿಚ್ಚನ್ನು ಹೆಚ್ಚಿಸಲು ಪ್ರೇರಕವಾದ ಗೋಕಾಕ್ ವರದಿಯನ್ನು ನೀಡಿದ ತಜ್ಞರ ಸಮಿತಿಯ ಅಧ್ಯಕ್ಷರಾಗಿ ಅವರ ಕಾರ್ಯ ನಿರ್ವಹಿಸಿ ಕನ್ನಡಿಗರ ಮನಮನಗಳಲ್ಲಿ ಶಾಶ್ವತವಾಗಿ ನೆಲೆಯೂರಿದ್ದಾರೆ.

ದಿನಕರ ದೇಸಾಯಿ

ಜನನ : 10.9.1909 **ನಿಧನ : 6.11.1982**



ಚುಟುಕು ಬ್ರಹ್ಮನೆಂದು ಖ್ಯಾತನಾಮರಾಗಿರುವ ದಿನಕರ ದೇಸಾಯಿಯವರು ಕೇವಲ ಕವಿ ಮಾತ್ರವಲ್ಲ. ಜನಸೇವಕ, ಸಾಮಾಜಿಕ ಕಾರ್ಯಕರ್ತ, ದೀನರ ಬಂಧು, ಜನತೆಯ ಸೇವೆಯಲ್ಲಿ ಜನಾರ್ಧನನನ್ನು ಕಾಣುವ ಮಾನವತೆಯ ಉಪಾಸಕ.

ಮೈಸೂರಿನಲ್ಲಿ ಬಿ.ಎ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದ ದೇಸಾಯಿಯವರು, ಮುಂಬಯಿಯಲ್ಲಿ ಎಂ.ಎ. ಪರೀಕ್ಷೆಯನ್ನು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದರು. 1934ರಲ್ಲಿ ಎಲ್.ಎಲ್.ಬಿ. ಪರೀಕ್ಷೆಯಲ್ಲಿಯೂ ತೇರ್ಗಡೆಯಾದರು.

ವಕೀಲರಾಗಿ ವೃತ್ತಿಯನ್ನಾರಂಭಿಸುವ ಆಸೆಯಿಂದಿದ್ದ ಅವರು ಕಾರ್ಮಿಕ ಧುರೀಣರಾಗಿದ್ದ ಎಂ.ಎನ್. ಜೋಷಿಯವರಿಂದ ಪ್ರೇರಿತರಾಗಿ ಕಾರ್ಮಿಕ ಹೋರಾಟದತ್ತ ಆಕರ್ಷಿತರಾದರು. ಕಾರ್ಮಿಕರ ಸಮಸ್ಯೆಗಳತ್ತ ಗಮನ ಹರಿಸಿದರು.

1953ರಲ್ಲಿ ತಮ್ಮ ಜಿಲ್ಲೆಯಾದ ಉತ್ತರ ಕನ್ನಡಕ್ಕೆ ಒಂದಿರುಗಿ ಕೆನರಾ ವೆಲ್‌ಫೇರ್ ಟ್ರಸ್ಟ್‌ನ್ನು ಸ್ಥಾಪನೆಮಾಡಿದರು. ಅವರು ಅದರ ಆಶ್ರಯದಲ್ಲಿ ಹಲವಾರು ವಿದ್ಯಾಸಂಸ್ಥೆಗಳನ್ನು ಸ್ಥಾಪನೆ ಮಾಡಿದರು.

ಅಂಕೋಲದಲ್ಲಿ "ಜನಸೇವಕ" ಕನ್ನಡ ವಾರಪತ್ರಿಕೆಯನ್ನು ಆರಂಭಿಸಿದರು. ತನ್ಮೂಲಕ ಪತ್ರಿಕೋದ್ಯಮಕ್ಕೆ ಕಾಲಿಟ್ಟರು.

1967ರಲ್ಲಿ ದೇಶದ ಲೋಕಸಭೆಗೂ ಆಯ್ಕೆಯಾಗಿದ್ದರು. ಸ್ವತಂತ್ರ ಅಭ್ಯರ್ಥಿಯಾಗಿದ್ದ ಇವರಿಗೆ ಎಲ್ಲಾ ವಿರೋಧಪಕ್ಷಗಳೂ ಬೆಂಬಲಿಸಿದ್ದವು.

ಕನ್ನಡ ಸಾಹಿತ್ಯ ದಿಗ್ಗಜರುಗಳಾದ ವಿ.ಸೀ., ತೀನಂ.ಶ್ರೀ. ಬಿ.ಎಂ.ಶ್ರೀ., ಮುಂತಾದವರಿಂದ ಪ್ರೋತ್ಸಾಹಗೊಂಡು ಕನ್ನಡದಲ್ಲಿ ಕವನಗಳನ್ನು ಬರೆಯಲು ಆರಂಭಿಸಿದರು. ಚುಟುಕ ಬರೆಯುವುದರಲ್ಲಿ ಪ್ರಾವೀಣ್ಯತೆಯನ್ನು ಪಡೆದ ಅವರು "ಚುಟುಕು ಬ್ರಹ್ಮ"ನೆಂದೇ ಪ್ರಸಿದ್ಧರಾದರು. ನಾಲ್ಕು ಸಾಲುಗಳನ್ನು ಹೊಂದಿದ್ದ ಚುಟುಕು ಪದ್ಯಗಳು ಜನ ಸಾಮಾನ್ಯರ ಮೆಚ್ಚುಗೆ ಗಳಿಸಿತು.

ರೈತರು, ಕಾರ್ಮಿಕರು ಮುಂತಾದವರಿಗೆ ಸಂಬಂಧಪಟ್ಟ ಲೇಖನಗಳನ್ನು ಸಹ ಬರೆದರು.

ರೈತರ ಹಾಡುಗಳು, ಕವನ ಸಂಗ್ರಹ, ಮಕ್ಕಳ ಗೀತೆಗಳು, ಹೂಗೊಂಚಲು ದಿನಕರನ ಚೌಪದಿ, ದಾಸಾಳ ಮುಂತಾದವು ಇವರು ರಚಿಸಿದ ಕವನ ಸಂಗ್ರಹಗಳು.

ನಾ ಕಂಡ ಪಡುವಣ, ಇವರ ಮತ್ತೊಂದು ಕೃತಿ.

'ಚುಟುಕು ಸಾರ್ವಭೌಮ', 'ಚೌಪದಿಯ ಜನಕ' ಎಂದು ಹೆಸರಾದ ದಿನಕರ ದೇಸಾಯಿಯವರಿಗೆ ಹಲವಾರು ಗೌರವ ಪ್ರಶಸ್ತಿಗಳು ಸಂದಿವೆ. ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ (1975) ಕರ್ನಾಟಕ ಸಾಹಿತ್ಯ ಅಕಾಡಮಿ ಪ್ರಶಸ್ತಿ (1980) ಮುಂತಾದುವನ್ನು ಹೆಸರಿಸಬಹುದಾಗಿದೆ.

ಜಯದೇವಿ ತಾಯಿ ಲಿಗಾಡೆ

ಜನನ : 23.6.1912 **ನಿಧನ : 24.7.1986**



ಸೊಲ್ಲಾಪುರದಲ್ಲಿ ಬಾಲ್ಯದ ವಿದ್ಯಾಭ್ಯಾಸವನ್ನು ಪೂರೈಸಿದ ಜಯದೇವಿ ತಾಯಿ ಲಿಗಾಡೆಯವರು ಕನ್ನಡ ಮತ್ತು ಹಿಂದಿ ಭಾಷೆಗಳಲ್ಲಿ ಪ್ರಾವೀಣ್ಯತೆ ಗಳಿಸಿಕೊಂಡವರು. ಸೊಲ್ಲಾಪುರದ ವಿಭಾಗದಲ್ಲಿ ಹಲವಾರು ಕನ್ನಡ ಶಾಲೆಗಳ ಆರಂಭಕ್ಕೆ ಕಾರಣರಾದರು. ಕರ್ನಾಟಕದ ಏಕೀಕರಣಕ್ಕೆ ಗಡಿಪ್ರದೇಶದಲ್ಲಿ ಜಾಗೃತಿಯನ್ನುಂಟುಮಾಡಿದವರು.

ಜಯದೇವಿ ತಾಯಿಯವರು ಮಹಿಳೆಯರ ವಿದ್ಯಾಭ್ಯಾಸಕ್ಕೆ ಆದ್ಯತೆ ನೀಡಿ, ಅವರಲ್ಲಿ ಸಂಘಟನಾ ಶಕ್ತಿಯನ್ನು ಹೆಚ್ಚಿಸಲು ಸತತವಾಗಿ ಶ್ರಮಿಸಿದರು.

ವಿದ್ಯೆಯ ಕಲಿಕೆಯಿಂದಲೇ ಮಹಿಳೆಯರ ಉನ್ನತಿ ಸಾಧ್ಯ ಎಂದು ಬಲವಾಗಿ ಪ್ರತಿಪಾದಿಸುತ್ತಿದ್ದ ಅವರು ಮಹಿಳೆಯರಲ್ಲಿ ಸಂಘಟನಾ ಶಕ್ತಿಯನ್ನು ಹೆಚ್ಚಿಸಲು ಶ್ರಮಿಸಿದರು.

ಅಖಿಲ ಭಾರತ ವೀರಶೈವ ಮಹಿಳಾ ಪರಿಷತ್ತಿನ ಸಮ್ಮೇಳನಗಳು ಹುಬ್ಬಳ್ಳಿ ಮತ್ತು ತುಮಕೂರುಗಳಲ್ಲಿ ನಡೆದಾಗ ಆ ಸಮ್ಮೇಳನಗಳ ಅಧ್ಯಕ್ಷತೆ ವಹಿಸಿದ್ದರು. ಮುಂಬಯಿ ಹಾಗೂ ಬೇಲೂರಿನಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು.

ಇವರ ಪ್ರಥಮ ಕವನ ಸಂಕಲನ ಜಯಗೀತೆ. ತಾಯಿಯವರ ಪದಗಳು, ತಾರಕ ತಂಬೂರಿ, ಸಿದ್ಧರಾಮೇಶ್ವರ ಪುರಾಣಗಳನ್ನು ರಚಿಸಿದ್ದಾರೆ.

ಸಿದ್ಧರಾಮ (ಗದ್ಯಕೃತಿ) ಬಸವದರ್ಶನ, ಮಹಾಯೋಗಿನಿ, ಸಿದ್ಧ ರಾಮಾಂಚಿ, ತ್ರಿವಿಧಿ, ಸಮೃದ್ಧ ಕರ್ನಾಟಕಾಂಬೆ, ರೂಪರೇಷಾ ಬಸವ ವಚನಾಮೃತ (ಮರಾಠಿ ಭಾಷೆಯ ಕೃತಿಗಳು)

ಸಿದ್ಧ ರಾಮೇಶ್ವರ ಪುರಾಣಕ್ಕೆ ರಾಜ್ಯ ಸಾಹಿತ್ಯ ಅಕಾಡಮಿಯ ಪ್ರಶಸ್ತಿ ಲಭ್ಯವಾಗಿದೆ. ಇದೇ ಕೃತಿಗೆ ದೇವರಾಜ ಬಹದ್ದೂರ್ ಬಹುಮಾನವು ಪ್ರಾಪ್ತವಾಗಿದೆ. 1974ರ ಮೇ ತಿಂಗಳಿನಲ್ಲಿ ಮಂಡ್ಯದಲ್ಲಿ ನಡೆದ 48ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು.

ಗೌರೀಶ್ ಕಾಯ್ಕಿಣಿ

ಜನನ : 12.9.1912 **ನಿಧನ : 14.11.2002**



ವಿಚಾರವಾದಿ, ಕವಿ, ನಾಟಕಕಾರ, ವಿಮರ್ಶಕ, ಚರಿತ್ರೆಕಾರ ಭಾಷಾಂತರಕಾರ ಎಂದೆಲ್ಲಾ ಬಣ್ಣಿಸಲ್ಪಟ್ಟಿರುವ ಗೌರೀಶ ಕಾಯ್ಕಿಣಿಯವರು ಗೋಕರ್ಣದ ಭದ್ರಕಾಳಿ ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿ 1976ರಲ್ಲಿ ನಿವೃತ್ತರಾದರು.

ಕೊಂಕಣಿ ಅವರ ತಾಯಿನುಡಿಯಾದರೆ, ಕನ್ನಡ ಪರಿಸರದ ಭಾಷೆ. ಈ ಎರಡು ಭಾಷೆಗಳಲ್ಲದೆ ಇಂಗ್ಲಿಷ್, ಕನ್ನಡ, ಮರಾಠೀ, ಹಿಂದಿ, ಸಂಸ್ಕೃತ ಭಾಷೆಗಳನ್ನು ಬಲ್ಲವರಾಗಿದ್ದರು.

ಕಾಯ್ಕಿಣಿಯವರು ಮೊದಲಿಗೆ ತಮ್ಮ ಬರಹವನ್ನು ಆರಂಭಿಸಿದ್ದು ಮರಾಠಿಯಲ್ಲಿ ನಂತರ 30ರ ದಶಕದಲ್ಲಿ ಕನ್ನಡದಲ್ಲಿ ಬರೆಯಲಾರಂಭಿಸಿದು.

ಸಿರಸಿಯಿಂದ ಪ್ರಕಟವಾಗುತ್ತಿದ್ದ ನಂದಿನಿ ವಾರಪತ್ರಿಕೆಯಲ್ಲಿ 'ಜಾಗತಿಕ ಯುದ್ಧಗಳು ಏಕೆ ಜರುಗುವುವು? ಎಂಬ ಶೀರ್ಷಿಕೆಯಲ್ಲಿ ಬರೆದ ಲೇಖನ ಇವರ ಪ್ರಥಮ ಬರಹ. ನಂತರ ಇವರ ಹಲವಾರು ಲೇಖನಗಳು 'ಜಯಂತಿ', 'ಜೆಳಕು', 'ನಾಗರಿಕ', 'ಜನಸೇವಕ' ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾದುವು.

ಗೌರೀಶರು ವಿಚಾರ ಸಾಹಿತ್ಯವನ್ನು ಹೆಚ್ಚಾಗಿ ರಚಿಸಿದ್ದು, ಕನ್ನಡದಲ್ಲಿದ್ದ ಆ ಸಾಹಿತ್ಯದ ಕೊರತೆಯನ್ನು ತಕ್ಕಮಟ್ಟಿಗೆ ನೀಗಿಸಿತ್ತೆನ್ನಬಹುದು. ಇವರ ಬರಹದ ಹರವು ವಿಸ್ತಾರವಾದುದು. ಶಿಕ್ಷಣದಿಂದ ವಿಜ್ಞಾನದವರೆಗೆ, ಕಾವ್ಯದಿಂದ ವಿಚಾರವಾದದವರೆಗೆ ಬರೆದಿದ್ದಾರೆ. ಇವರು ಬರೆದಿರುವ ಬಿಡಿ ಬರಹಗಳ ಸಂಖ್ಯೆ ಎರಡು ಸಾವಿರಕ್ಕೂ ಮೇಲ್ಪಟ್ಟಿದೆ.

ಇವರು ಸುಮಾರು ಅರವತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಮರಾಠಿಯಿಂದ ಕನ್ನಡಕ್ಕೆ, ಕನ್ನಡದಿಂದ ಮರಾಠಿಗೆ ಅನುವಾದ ಮಾಡಿದ್ದಾರೆ. ಡಾ. ಮುಗಳಿಯವರ ಕನ್ನಡ ಸಾಹಿತ್ಯ ಚರಿತ್ರೆಯನ್ನು ಮತ್ತು ಮಲ್ಲಿಕಾರ್ಜುನ ಮನ್ಸೂರರ ಆತ್ಮ ವೃತ್ತಾಂತವನ್ನು ಮರಾಠಿಗೂ, ಶ್ರೀಮತಿ ದುರ್ಗಾ ಭಾಗವತರ ವ್ಯಾಸ ಪರ್ವವನ್ನು (ಮರಾಠಿ) ಕನ್ನಡಕ್ಕೂ ಅನುವಾದ ಮಾಡಿದ್ದಾರೆ.

ಇವರು ಸಲ್ಲಿಸಿರುವ ಸಾಹಿತ್ಯ ಸೇವೆಗೆ ಹಲವಾರು ಗೌರವ ಪ್ರಶಸ್ತಿಗಳು ಇವರಿಗೆ ಲಭಿಸಿವೆ. ಆದರ್ಶ ಶಿಕ್ಷಕ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪ್ರಶಸ್ತಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗಳು ಇವರಿಗೆ ಲಭಿಸಿವೆ.

ಬೀchi

ಜನನ : 23.4.1913 ನಿಧನ : 7.12.1980



ಬೀchi. ಎಂದೇ ಪ್ರಸಿದ್ಧರಾದ ರಾಯಸಂ ಭೀಮಸೇನರಾವ್‌ರವರು ವೈಶಿಷ್ಟ್ಯಪೂರ್ಣ ಹಾಸ್ಯ ಬರಹಗಳಿಗೆ ಹೆಸರಾದವರು.

ಎಸ್.ಎಸ್.ಎಲ್.ಸಿ ಯವರೆಗೆ ಶಿಕ್ಷಣ ಪಡೆದ ಅವರು ಪೋಲಿಸ್ ಇಲಾಖೆಯಲ್ಲಿ ಉದ್ಯೋಗಕ್ಕೆ ಸೇರಿ ಹಂತಹಂತವಾಗಿ ಮೇಲೇರಿದರು.

ಆರಂಭದಲ್ಲಿ ಬೀ.chi. ಯವರಿಗೆ ಬರೆಯುವ ಅಭ್ಯಾಸವೇ ಇರಲಿಲ್ಲ. ಅಷ್ಟೇ ಏಕೆ ಕನ್ನಡದಲ್ಲಿ ಬರೆಯುವುದು ಓದುವುದು. ಅಷ್ಟೇನೂ ಗೌರವದ

ಕೆಲಸವೂ ಅಲ್ಲ ಎಂಬ ಮನೋಭಾವ ಹೊಂದಿದ್ದವರು. ಆದರೆ ಅವರ ಈ ಮನೋಭಾವವನ್ನು ಹೋಗಲಾಡಿಸಿ ಅವರನ್ನು ಕನ್ನಡ ಸಾಹಿತ್ಯಲೋಕದ ಕಡೆ ಬರುವಂತೆ ಆಕರ್ಷಿಸಿದ್ದು ಅ.ನ.ಕೃ ರವರ ಬರವಣಿಗೆ. ಕನ್ನಡ ಪುಸ್ತಕವೋದುವ ಹವ್ಯಾಸವಿದ್ದ ಹೆಂಡತಿಗೊಂದು ಕನ್ನಡ ಪುಸ್ತಕ ತೆಗೆದುಕೊಂಡು ಹೋಗಬೇಕೆಂದು ಪುಸ್ತಕದ ಅಂಗಡಿಗೆ ಹೋಗಿ ಯಾವುದಾದರೂ ಒಂದು ಕನ್ನಡ ಪುಸ್ತಕ ಕೊಡಿ ಎಂದು ಅಸಡ್ಡೆಯಿಂದ ಕೇಳಿದಾಗ ಆತ ಕೊಟ್ಟಿದ್ದು ಅ.ನ.ಕೃರವರ ಸಂಧ್ಯಾರಾಗ. ಹೆಂಡತಿಗೆ ಕೊಡುವುದಕ್ಕೆ ಮುಂಚೆ ಅದನ್ನು ಓದಿದ ಬೀchi. ಅಂದಿನಿಂದಲೇ ಕನ್ನಡ ಪ್ರೇಮಿಯಾದರು. ಕೋ. ಚೆನ್ನಬಸಪ್ಪವನರು ಪ್ರಕಟಿಸುತ್ತಿದ್ದ ರೈತ ಪತ್ರಿಕೆಯಲ್ಲಿ ಬೇವಿನ ಕಟ್ಟೆ ತಿಂಮ ಎಂಬ ಹೆಸರಿನಲ್ಲಿ ಹಾಸ್ಯ ಲೇಖನಗಳನ್ನು ಬರೆಯಲಾರಂಭಿಸಿದರು.

ಅಲ್ಲಿಂದ ಪ್ರಾರಂಭವಾದ ಅವರ ಬರವಣಿಗೆ ಅವ್ಯಾಹತವಾಗಿ ಮುಂದುವರೆದು ಸುಮಾರು 66 ಕೃತಿಗಳನ್ನು ರಚಿಸಿದರು. ಅವುಗಳಲ್ಲಿ 35 ಕಾದಂಬರಿಗಳು, ಉಳಿದುವು ಏಕಾಂಕ, ರೇಡಿಯೋ ನಾಟಕಗಳು, ವಿನೋದ ಬರಹಗಳು, ಸಣ್ಣಕಥೆ ಇತ್ಯಾದಿ.


ತಿಂಮನ ತಲೆ, ದಾಸಕೂಟ, ಸತೀ ಸೂಳೆ, ಸರಸ್ವತಿ ಸಂಹಾರ, ಖಾದಿಸೀರೆ, ಬೆಂಗಳೂರು ಬಸ್ಸು, ದೇವನ ಹೆಂಡ, ಬ್ರಹ್ಮಚಾರಿಯ ಮಗ ಸತ್ತವನು ಎದ್ದು ಬಂದಾಗ, ಏರದ ಬಳೆ, ಮುಂತಾದ ಇವರು ಬರೆದಿರುವ ಕೆಲವು ಕಾದಂಬರಿಗಳನ್ನು ಹೆಸರಿಸಬಹುದು. ಇವರ ಹಲವಾರು ಕೃತಿಗಳು ಪುನರ್ ಮುದ್ರಣವಾಗಿವೆ.

ಸಮಾಜದ ಕಂದಾಚಾರ, ವರ್ಗ ಕಲಹಗಳು ಸಿಡಿಸುತ್ತಿರುವ ಸಾಮಾಜಿಕ ಬೇನೆಗಳನ್ನು ಅವರು ತಮ್ಮ ಕೃತಿಗಳಲ್ಲಿ ವಿಶ್ಲೇಷಿಸಿದ್ದಾರೆ.

ಸುಧಾ ವಾರ ಪತ್ರಿಕೆಯಲ್ಲಿ 'ನೀವು ಕೇಳಿದಿರಿ'–ಓದುಗರ ಪ್ರಶ್ನೋತ್ತರ ಮಾಲಿಕೆ ಉತ್ತರ ಭೂಪ ಎನ್ನುವ ಶೀರ್ಷಿಕೆಯಲ್ಲಿ ಪ್ರಕಟವಾಗಿದೆ.

ಜಿ. ವೆಂಕಟಸುಬ್ಬಯ್ಯ

ಜನನ : 23.8.1913



ಜಿ.ವಿ. ಎಂದೇ ಆತ್ಮೀಯರಿಂದ ಕರೆಯಿಸಿಕೊಳ್ಳುವ ಶತಾಯುಷಿ ಜಿ.ವೆಂಕಟಸುಬ್ಬಯ್ಯನವರು 23-08-1913 ರಂದು ಶ್ರೀರಂಗಪಟ್ಟಣದ ಗಂಜಾಂನಲ್ಲಿ ಜನಿಸಿದರು.

ಬಾಲ್ಯದಿಂದಲೇ ಪ್ರತಿಭಾವಂತ ವಿದ್ಯಾರ್ಥಿ ಎನಿಸಿಕೊಂಡ ಅವರು ಎಂ.ಎ. ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಪಡೆದು ಚಿನ್ನದ ಪದಕ ಗಳಿಸಿದರು. ಕನ್ನಡ ಸಾಹಿತ್ಯದ ಗುರುಪರಂಪರೆಯ ತ್ರಿಮೂರ್ತಿಗಳಾದ ಬಿ.ಎಂ.ಶ್ರೀಕಂಠಯ್ಯ. ಟಿ.ಎಸ್.

ವೆಂಕಣ್ಣಯ್ಯ ಹಾಗೂ ಬೆನಗಲ್ ರಾಮರಾಯರಿಂದ ಕನ್ನಡದ ದೀಕ್ಷೆಯನ್ನು ಪಡೆದ ಅವರು ಕನ್ನಡ ಕಟ್ಟುವ ಹಲವಾರು ಕಾಯಕಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು.

ವ್ಯಾಕರಣ ಪಂಡಿತರಾಗಿ, ನಿಘಂಟು ತಜ್ಞರಾಗಿ, ಸೃಜನಶೀಲಬರಹಗಾರರಾಗಿ ವಿಮರ್ಶಕರಾಗಿ ಅನುವಾದಕರಾಗಿ ಹಲವಾರು ಕ್ಷೇತ್ರಗಳಲ್ಲಿ ಸೇವೆಯನ್ನು ಸಲ್ಲಿಸಿದ್ದಾರೆ.

ಮಂಡ್ಯದ ಪುರಸಭಾ ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿ ಆರಂಭಗೊಂಡು ಬೆಂಗಳೂರಿನ ವಿಜಯ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ, ಸಂಜೆ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ್ದಾರೆ.

ಕನ್ನಡ ಕನ್ನಡ ಕೋಶದ ಪ್ರಧಾನ ಸಂಪಾದಕ ಕನ್ನಡ–ಕನ್ನಡ ಕೋಶದ ಸಮಿತಿಯ ಅಧ್ಯಕ್ಷ ಹಾಗೂ ಪ್ರಧಾನ ಸಂಪಾದಕ ಸಾಹಿತ್ಯ ಅಕಾಡಮಿ ಸದಸ್ಯ, ಪಂಪ ಆಯ್ಕೆ ಸಮಿತಿಯ ಅಧ್ಯಕ್ಷ ಹೀಗೆ ಹಲವಾರು ಪ್ರತಿಷ್ಠಿತ ಪದವಿಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

ಪ್ರಜಾವಾಣಿ ಪತ್ರಿಕೆಯಲ್ಲಿ ನಿರಂತರ ಹದಿನೆಂಟು ವರ್ಷಗಳ ಕಾಲ 'ಇಗೋ ಕನ್ನಡ' ಅಂಕಣದಲ್ಲಿ ಕನ್ನಡ ಭಾಷೆಗೆ ಸಂಬಂಧಿಸಿದಂತೆ ಓದುಗರ ಸಮಸ್ಯೆಗಳಿಗೆ ಉತ್ತರಿಸುತ್ತಿದ್ದರು. "ಇಗೋ ಕನ್ನಡ"ದ ವೆಂಕಟಸುಬ್ಬಯ್ಯನವರೆಂದೇ ಪ್ರಸಿದ್ಧರಾದರು. ಇವರು ರಚಿಸಿದ ಪ್ರಿಸ್ಮ್ ಇಂಗ್ಲಿಷ್–ಕನ್ನಡ ನಿಘಂಟು ಅನೇಕ ದೃಷ್ಟಿಗಳಿಂದ ಹೊಸ ಬಗೆಯ ನಿಘಂಟಾಗಿದೆ. ಇದನ್ನು ಬ್ರೈಲ್ ಲಿಪಿಗೂ ಸಹ ಅಳವಡಿಸಲ್ಪಟ್ಟು ವಿಶ್ವದಾಖಲೆಯಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಗಳಾಗಿ (1954–56) ಅಧ್ಯಕ್ಷರಾಗಿ (1964–69) ಸಾಹಿತ್ಯ ಪರಿಷತ್ತಿನ ಸೇವೆ ಸಲ್ಲಿಸಿದ್ದಾರೆ.

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಸಾಹಿತ್ಯ ಅಕಾಡಮಿ ಪ್ರಶಸ್ತಿ ಕರ್ನಾಟಕ ಏಕೀಕರಣ ಸುವರ್ಣ ಪುರಸ್ಕಾರ ಮುಂತಾದ ಪ್ರಶಸ್ತಿಗಳು ಇವರಿಗೆ ದೊರೆತಿವೆ. 2014ರಲ್ಲಿ ಕನ್ನಡ ನಿಘಂಟು ಕ್ಷೇತ್ರಕ್ಕೆ ಇವರು ಸಲ್ಲಿಸಿರುವ ಕಾಣಿಕೆಗೆ ಪಂಪ ಪ್ರಶಸ್ತಿ ದೊರಕಿದೆ. 2017ರಲ್ಲಿ 'ಪದ್ಮಶ್ರೀ' ಪ್ರಶಸ್ತಿ ಭಾರತ ಸರ್ಕಾರದಿಂದ ಪ್ರದಾನವಾಗಿದೆ.

2011ರ ಫೆಬ್ರವರಿಯಲ್ಲಿ ಬೆಂಗಳೂರಿನಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿಯ ಗೌರವವೂ ಇವರಿಗೆ ದೊರೆತಿದೆ.

ಕೆ. ಎಸ್. ನರಸಿಂಹಸ್ವಾಮಿ

ಜನನ : **26.1.1915** ನಿಧನ : **28.12.2003**



ಅತ್ಯಧಿಕ ಮುದ್ರಣ ಭಾಗ್ಯ ಕಂಡು ಜನಪ್ರಿಯವಾಗಿರುವ 'ಮೈಸೂರು ಮಲ್ಲಿಗೆ'ಯ ಕರ್ತೃ ಕೆ.ಎಸ್. ನರಸಿಂಹಸ್ವಾಮಿಯವರು ವಿದ್ಯಾರ್ಥಿ ದೆಸೆಯಿಂದಲೇ ಕವನ ರಚನೆಯನ್ನು ಆರಂಭಿಸಿದ್ದರು.

1937ರಲ್ಲಿ ಸರಕಾರದಲ್ಲಿ ಗುಮಾಸ್ತರಾಗಿ ವೃತ್ತಿ ಜೀವನ ಆರಂಭಿಸಿ ರಾಜ್ಯದ ಹಲವಾರು ಕಡೆ ಕೆಲಸ ಮಾಡಿ ನಿವೃತ್ತರಾದ ನಂತರ ಬೆಂಗಳೂರಿನಲ್ಲಿಯೇ ನೆಲೆಸಿದರು.

ಅವರ ಅತ್ಯಂತ ಜನಪ್ರಿಯ ಕವನ ಸಂಕಲನ ಮೈಸೂರು ಮಲ್ಲಿಗೆ ಪ್ರಕಟನೆಯಾಗಿದ್ದು 1943ರಲ್ಲಿ. ನಂತರ ಅವರಿಂದ ಹಲವಾರು ಕವನ ಸಂಕಲನಗಳು, ಕಿರುಗೀತೆಗಳು, ಗದ್ಯಕೃತಿಗಳು ರಚಿತವಾಗಿವೆ.

ಐರಾವತ, ದೀಪದ ಮಲ್ಲಿ, ಉಂಗುರ, ಇರುವಂತಿಗೆ, ಮನೆಯಿಂದ ಮನೆಗೆ ಕವನ ಸಂಕಲನಗಳಾದರೆ ಮಾರಿಯ ಕಲ್ಲು–ಕಿರುಗೀತೆ, ಉಪವನ, ದಮಯಂತಿ ಗದ್ಯ ಕೃತಿಗಳಾಗಿವೆ. ಇವರಿಂದ ರಚಿತವಾದ ಇತರ ಕೃತಿಗಳೆಂದರೆ ಮೋಹನ ಮಾಲೆ, ನನ್ನ ಕನಸಿನ ಭಾರತ, ಮಾಯಾ ಶಂಖ ಮತ್ತು ಇತರ ಕಥೆಗಳು ಮುಂತಾದುವು.

ಇವರ ಹಲವಾರು ಕವಿತೆಗಳು ಹಿಂದಿ, ಉರ್ದು. ಇಂಗ್ಲಿಷ್ ಹಾಗೂ ದಕ್ಷಿಣದ ಇತರ ಭಾಷೆಗಳಿಗೆ ಅನುವಾದಗೊಂಡಿವೆ.

"ಮೈಸೂರು ಮಲ್ಲಿಗೆ" ಕೃತಿಗೆ ಸರ್ಕಾರದ ದೇವರಾಜ್ ಬಹದ್ದೂರ್ ಬಹುಮಾನ, "ಶಿಲಾಲತೆ"ಗೆ ಮೈಸೂರು ರಾಜ್ಯದ ಸಂಸ್ಕೃತಿ ಪ್ರಸಾರ ಇಲಾಖೆಯ ಬಹುಮಾನ ಲಭಿಸಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವ ಆಚರಣೆಯ ಸಂದರ್ಭದಲ್ಲಿ ಇವರು ಸನ್ಮಾನಿತರಾಗಿದ್ದಾರೆ. ಅಲ್ಲದೆ 1985ರಲ್ಲಿ ಪರಿಷತ್‌ನ ಗೌರವ ಸದಸ್ಯತ್ವ ಲಭಿಸಿದೆ.


ರಾಜ್ಯೋತ್ಸವ ಪ್ರಶಸ್ತಿ (1972), ಪಂಪ ಪ್ರಶಸ್ತಿ (1995), ಕೇಂದ್ರ ಸಾಹಿತ್ಯ ಅಕಾಡಮಿಯ ಪ್ರತಿಷ್ಠಿತ ಫೆಲೋಷಿಪ್ (1999) ಇವರಿಗೆ ಸಂದಿರುವ ಇತರ ಪುರಸ್ಕಾರಗಳು.

ಇವರು ಬರೆದ 'ಇವಳು ಯಾರು ಬಲ್ಲೆಯೇನು?" ಎಂಬ ಜನಪ್ರಿಯ ಗೀತೆಯನ್ನು ಕನ್ನಡ ಚಿತ್ರ (ಗೌರಿ)ಯಲ್ಲಿ ಅಳವಡಿಸಿಕೊಳ್ಳಲಾಯಿತು. ಅಲ್ಲಿಂದ ಮುಂದೆ ಹಲವಾರು ಚಿತ್ರಗಳಲ್ಲಿ ಇವರ ಗೀತೆಗಳನ್ನು ಅಳವಡಿಸಿ ಕೊಳ್ಳಲಾಯಿತಾದರೂ ಮೈಸೂರು ಮಲ್ಲಿಗೆ ಕವನ ಸಂಕಲನದಲ್ಲಿನ ಹಾಡುಗಳು ಅದೇ ಹೆಸರಿನಲ್ಲಿ ಚಿತ್ರಿತವಾಗಿ ಕೆ.ಎಸ್.ನ ಕಾವ್ಯ ಪ್ರಪಂಚವನ್ನು ಚಿತ್ರಪ್ರಪಂಚಕ್ಕೆ ಪರಿಚಯಿಸಲಾಯಿತು. ಕೆ.ಎಸ್.ನ ಕಾವ್ಯಗಳು ಜೀವಂತ ಕಾವ್ಯವಾಗಿ ಹೊರ ಹೊಮ್ಮಿದುವು. ಈ ಚಿತ್ರದ ಮೂಲಕ ಅವರಿಗೆ ಅತ್ಯುತ್ತಮ ಗೀತೆ ರಚನೆಗೆ ರಾಷ್ಟ್ರಪ್ರಶಸ್ತಿಯ ಗೌರವ ಭಾಗ್ಯವು ದೊರೆಯಿತು. ಡಾ. ರಾಜಕುಮಾರ್‌ರಿಂದ ಹಿಡಿದು ಪಂಡಿತ್ ಭೀಮಸೇನ ಜೋಷಿಯವರೆಗೆ ಎಲ್ಲಾ ಗಾಯಕರೂ ಅವರ ಗೀತೆಗಳನ್ನು ಹಾಡಿರುವುದು ಒಂದು ವಿಶೇಷವೇ ಸರಿ.

1990ರ ಡಿಸೆಂಬರ್‌ನಲ್ಲಿ ಮೈಸೂರಿನಲ್ಲಿ ನಡೆದ 60ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಕಯ್ಯಾರ ಕಿಞ್ಞಣ್ಣ ರೈ

ಜನನ : 8.6.1915 **ನಿಧನ : 9.8.2015**



ಕಾಸರಗೋಡಿನ ಹೆಮ್ಮೆಯ ಕವಿ ಕಯ್ಯಾರ ಕಿಞ್ಞಣ್ಣ ರೈರವರು ಬಾಲ್ಯದಲ್ಲಿ ಬದಿಯಡ್ಕದಲ್ಲಿ ಪ್ರಾಥಮಿಕ ಹಂತದ ವಿದ್ಯಾಭ್ಯಾಸ ಪಡೆದ ನಂತರ ಸಂಸ್ಕೃತ 'ಎ' ವಿದ್ವಾನ್ ಪದವಿ ಪಡೆದರು. ಬಿ.ಎ. ಮತ್ತು ಎಂ.ಎ. ಪದವಿಗಳನ್ನು ಖಾಸಗಿಯಾಗಿ ಪಡೆದರು. ಪ್ರೌಢಶಾಲೆಯಲ್ಲಿ ಉಪಾಧ್ಯಾಯರಾಗಿ ಸೇವೆ ಸಲ್ಲಿಸಿದ ಇವರು ಕೇಂದ್ರ ಸರ್ಕಾರದಿಂದ ಉತ್ತಮ ಶಿಕ್ಷಣ ಪ್ರಶಸ್ತಿಯನ್ನು ಪಡೆದಿದ್ದಾರೆ.

ಶಿಕ್ಷಕ ವೃತ್ತಿಯ ಜೊತೆಜೊತೆಗೆ ಪತ್ರಿಕೋದ್ಯಮವನ್ನು ಪ್ರವೇಶಿಸಿದ ರೈರವರು ಸ್ವದೇಶಾಭಿಮಾನ, ಜಯ ಕರ್ನಾಟಕ, ದೇಶಾಭಿಮಾನ, ರಾಷ್ಟ್ರ ಬಂಧು, ಮುಂತಾದ ಪತ್ರಿಕೆಗಳಿಗೆ ಕವನ, ಲೇಖನಗಳನ್ನು ಬರೆಯುತ್ತಿದ್ದರು.

ಕಾಸರಗೋಡಿನಲ್ಲಿಯೇ ವಾಸಮಾಡುತ್ತಿದ್ದ ಅವರು ಜೀವನದ ಕೊನೆಯವರೆಗೆ, ಆ ಪ್ರದೇಶವನ್ನು ಕನ್ನಡ ನಾಡಿನೊಳಗೆ ಸೇರಿಸಲು ಅಹರ್ನಿಶಿ ಹೋರಾಟ ನಡೆಸುತ್ತಿದ್ದರು.

ರೈ ಅವರದು ಬಹು ಮುಖ ಪ್ರತಿಭೆ. ಕವನ, ಕಥೆ, ಜೀವನ ಚರಿತ್ರೆ, ಶಿಶುಸಾಹಿತ್ಯ, ನಾಟಕ, ವ್ಯಾಕರಣ, ಪ್ರಬಂಧ, ಸಾಹಿತ್ಯ ವಿಮರ್ಶೆ – ಹೀಗೆ ವಿವಿಧ ಪ್ರಕಾರಗಳಲ್ಲಿ ಸಾಹಿತ್ಯ ರಚಿಸಿದ್ದಾರೆ.

ಇವರ ಮುಖ್ಯ ಕೃತಿಗಳಲ್ಲಿ ಕೆಲವನ್ನು ಹೆಸರಿಸಬಹುದಾದರೆ ಐಕ್ಯಗಾನ, ಪುನರ್ನವ, ಚೇತನ, ಪಂಚಮಿ (ಕವನ ಸಂಕಲನಗಳು) ರತ್ನರಾಶಿ. ಎ.ಬಿ.ಶೆಟ್ಟಿ, ಕಾರ್ನಾಡ್ ಸದಾಶಿವರಾವ್, ನಾರಾಯಣ ಕಿಲ್ಲೆ (ಜೀವನ ಚಿತ್ರಗಳು), ಲಕ್ಷ್ಮೀಶನ ಕಥೆಗಳು, ಅನ್ನದೇವರು ಮತ್ತು ಇತರ ಕತೆಗಳು (ಕಥೆಗಳು), ಮಕ್ಕಳ ಪದ್ಯ ಮಂಜರಿ, ದುಡಿತವೇ ನನ್ನ ದೇವರು (ಆತ್ಮ ಕಥನ), ಮುಂತಾದವು.


ರಾಜ್ಯೋತ್ಸವ ಪ್ರಶಸ್ತಿ (1985), ಕರ್ನಾಟಕ ಸಾಹಿತ್ಯ ಅಕಾಡಮಿ ಪ್ರಶಸ್ತಿ (1969), ಶ್ರೇಷ್ಠ ಅಧ್ಯಾಪಕ ಪ್ರಶಸ್ತಿ (1969), ಅಖಿಲ ಭಾರತ ತುಳು ಸಮ್ಮೇಳನದ ಸನ್ಮಾನ ಪ್ರಶಸ್ತಿ (1989) ಹಂಪಿ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ (2006) ಇವರಿಗೆ ಲಭಿಸಿರುವ ಹಲವು ಪ್ರಶಸ್ತಿಗಳು.

'ಪಡುವಾರ ಹಳ್ಳಿ ಪಾಂಡವರು' ಚಿತ್ರಕ್ಕೆ ಇವರಿಂದ ಪುಟ್ಟಣ್ಣ ಕಣಗಾಲ್ ರವರು ಮೂರು ಚಿತ್ರಗೀತೆಗಳನ್ನು ಬರೆಸಿದರು. ರೈಯವರು ಚಿತ್ರ ಸಾಹಿತ್ಯ ನೀಡಿದ ಏಕೈಕ ಚಿತ್ರ ಇದಾಗಿತ್ತು.

1997ರಲ್ಲಿ ಮಂಗಳೂರಿನಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ಇವರು ವಹಿಸಿದ್ದರು.

ಸಿ. ಕೆ. ನಾಗರಾಜ ರಾವ್

ಜನನ : 12.6.1915 **ನಿಧನ : 10.4.1998**



ಜೂನ್ ೧೨, ೧೯೧೫ರಂದು ಚಿತ್ರದುರ್ಗದ ಚಳ್ಳಕೆರೆಯಲ್ಲಿ ಜನಿಸಿದ ಸಾಹಿತಿ, ರಂಗಭೂಮಿ ಕಲಾವಿದ ಪತ್ರಕರ್ತ ಕನ್ನಡದ ಮಹಾನ್‌ಕಾರ್ಯಕರ್ತ ರಾಗಿ ಬಹುಮುಖ ಪ್ರತಿಭಾವಂತರಾದವರು ಸಿ.ಕೆ. ನಾಗರಾಜರಾವ್ ರವರು. ಆರಂಭಿಕ ಶಿಕ್ಷಣವನ್ನು ಚಿಕ್ಕಬಳ್ಳಾಪುರದಲ್ಲಿಯೂ ನಂತರ ಬೆಂಗಳೂರಿನ ಹೈಸ್ಕೂಲ್, ಹಾಗೂ ಇಂಟರ್ಮೀಡಿಯಟ್ ಕಾಲೇಜಿನಲ್ಲಿಯೂ ಪೂರೈಸಿದರು.

ಪತ್ರಿಕೋದ್ಯಮಕ್ಕೆ ಕಾಲಿಟ್ಟ ಅವರು ಕನ್ನಡ ಮತ್ತು ಇಂಗ್ಲಿಷ್ ಪತ್ರಿಕೆಗಳಿಗೆ ವಿಮರ್ಶೆಗಳನ್ನು ಬರೆಯತೊಡಗಿದರು. "ವಾಣಿ" ಪತ್ರಿಕೆಯ ಸಂಪಾದಕರಾಗಿ ಕೆಲ ಕಾಲವಿದ್ದ ಅವರು ಮಿಥಿಕ್ ಸೊಸೈಟಿಯ ತ್ರೈಮಾಸಿಕ ಪತ್ರಿಕೆಗೆ ಸಂಪಾದಕರಾಗಿ ವಿದ್ವತ್ ಪೂರ್ಣ ಲೇಖನಗಳನ್ನು ಬರೆಯುತ್ತಿದ್ದರು. ಶಾಲಾ ಕಾಲೇಜು ದಿನಗಳಿಂದಲೇ ಕಥೆಗಳನ್ನು ಬರೆಯಲು ಆರಂಭಿಸಿದ್ದ ಅವರು ಕಾಡು ಮಲ್ಲಿಗೆ. ಸಂಗಮ, ದೃಷ್ಟಿಮಥನ ಸಾವಿಲ್ಲದವರು ಮುಂತಾದ ಕಥಾ ಸಂಕಲನಗಳನ್ನು

ಪ್ರಕಟಿಸಿದ್ದಾರೆ. ಮಹಾಕವಿ ಲಕ್ಷ್ಮೀಶನ ಸ್ಥಳ ಮತ್ತು ಕಾಲ ಎಂಬ ಸಂಶೋಧನ ಗ್ರಂಥವನ್ನು ಬರೆದು ಲಕ್ಷ್ಮೀಶನ ಊರು ದೇವನೂರು ಎಂದೂ ಸಾಕ್ಷ್ಯಾಧಾರಗಳ ಮೂಲಕ ಖಚಿತಪಡಿಸಿದ್ದಾರೆ. ಈ ಕೃತಿಗೆ ಸಾಹಿತ್ಯ ಅಕಾಡಮಿಯ ಪ್ರಶಸ್ತಿ ದೊರೆತಿದೆ.

ಉತ್ತಮ ಅನುವಾದಕರೂ ಆಗಿದ್ದ ನಾಗರಾಜರಾಯರು ಹಿಂದಿ ಭಾಷೆಯಿಂದ ಶರಶ್ಚಂದ್ರರ ಪ್ರೇಮ ಯೋಗಿನಿ, ದರ್ಪಚೂರ್ಣ, ಅರಕ್ಷಣೀಯ, ಕಾಳಿದಾಸ, ವಿಶ್ವೇಶ್ವರಿ, ಮತ್ತು ಮಂತ್ರದೀಕ್ಷೆ, ಎಂಬ ಆರು ಕಾದಂಬರಿಗಳನ್ನು ಅನುವಾದಿಸಿದ್ದಾರೆ. ಸ್ವತಂತ್ರ ಕಾದಂಬರಿ ರಚನೆಯಲ್ಲಿ ತೊಡಗಿದ ಅವರು ಕನ್ನಡ ಸಾಹಿತ್ಯಕ್ಕೆ ನೀಡಿರುವ ಅಪೂರ್ವ ಕೊಡುಗೆ ಅಂದರೆ ಅವರ ಮೇರುಕೃತಿ "ಪಟ್ಟಮಹಾದೇವಿ ಶಾಂತಲಾದೇವಿ". ಹೊಯ್ಸಳ ಸಾಮ್ರಾಜ್ಯದ 150 ವರ್ಷಗಳ ಇತಿಹಾಸವನ್ನು ಒಳಗೊಂಡ ಮಹಾರಾಣಿ ಶಾಂತಲೆಯ ನಲವತ್ತು ವರ್ಷಗಳ ಬದುಕಿನ ಚಿತ್ರಣ ಕೊಡುವ ಈ ಮಹತ್ತಾದ ಹಾಗೂ ಬೃಹತ್ತಾದ ಕಾದಂಬರಿ 175 ಅಧ್ಯಾಯಗಳ, 2150 ಪುಟಗಳಿಂದ ಕೂಡಿದೆ. ಇಂತಹ ಅತ್ಯಪೂರ್ವ ಕೃತಿಗೆ ಜ್ಞಾನಪೀಠ ಪ್ರತಿಷ್ಠಾನದ "ಮೂರ್ತಿದೇವಿ" ಪ್ರಶಸ್ತಿ ದೊರಕಿರುವುದು ನಾಗರಾಜರಾಯರ ಶ್ರಮಕ್ಕೆ ಸಾರ್ಥಕತೆಯನ್ನು ತಂದುಕೊಟ್ಟಿದೆಯೆನ್ನಬಹುದು. ಅಲ್ಲದೆ ಈ ಪ್ರಶಸ್ತಿ ಮೊಟ್ಟಮೊದಲಬಾರಿಗೆ 1983ರಲ್ಲಿ ಕನ್ನಡ ಸಾಹಿತ್ಯಕ್ಕೆ ಲಭಿಸಿರುವುದು ಮತ್ತೊಂದು ಹೆಮ್ಮೆಯ ಸಂಗತಿಯಾಗಿದೆ. ಈ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡಮಿಯ ಶ್ರೇಷ್ಠ ಸೃಜನಶೀಲ ಪ್ರಶಸ್ತಿಯೂ ಸಹ ಲಭಿಸಿದೆ. ರಾಜ್ಯೋತ್ಸವ ಪ್ರಶಸ್ತಿಗೂ ಸಹ ನಾಗರಾಜರಾಯರು ಪಾತ್ರರಾಗಿದ್ದಾರೆ.

ಇವರು ರಚಿಸಿರುವ ಇತರ ಕಾದಂಬರಿಗಳೆಂದರೆ ಭಕ್ತಿವಿಜಯದ ಸಣ್ಣ ಕಥೆಯನ್ನಾಧರಿಸಿದ ತುಂಬಿದ ಜೀವ ಮತ್ತು ಮಣಿಪುರದ ಇತಿಹಾಸ ಕರುಂಗನಯಿನಿ. ಶಾಂತಲ ಕಾದಂಬರಿಯ ಮುಂದಿನ ಭಾಗವಾದ ವೀರಗಂಗ ವಿಷ್ಣುವರ್ಧನ ಮತ್ತು ಹೊಯ್ಸಳ ಸಾಮ್ರಾಜ್ಯದ ಸಂಪೂರ್ಣ ಕತೆಯನ್ನು ಕಟ್ಟಿಕೊಡುವ "ದಾಯಾದ ದಾವಾನಲ", ಕರುಂಗನಯಿನಿ, ಶ್ರೀ ಪೃಥ್ವಿವಲ್ಲಭ ಕಾದಂಬರಿಗಳು ಓದುಗರಿಂದ ಪ್ರಶಂಸೆಗೊಳಗಾಗಿವೆ. ನನ್ನ ನೆಚ್ಚಿನ ನಾಡೆ, ತಾತಮಾವನ ಕನಸು, ಕಾಂಬೋಡಿಯಾ – ಲಾವೋಸ್, ನಾಯಿ ಕೊಡೆ, ಏಕಲವ್ಯ ದರ್ಶನ ಅವರ ಇನ್ನಿತರ ಕೃತಿಗಳು.

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿ ಕೋಶಾಧಿಕಾರಿಯಾಗಿ, ಕರ್ನಾಟಕ ಲೇಖಕರ ಸಂಘದ ಅಧ್ಯಕ್ಷರಾಗಿ ಮಿಥಿಕ್ ಸೊಸೈಟಿಯ ಕಾರ್ಯದರ್ಶಿಯಾಗಿ ಆದರ್ಶ ಫಿಲಂ ಇನಸ್ಟಿಟ್ಯೂಟ್‌ನ ಸ್ಥಾಪಕ ಸಹಾಯಕ ಕಾರ್ಯದರ್ಶಿಯಾಗಿ ಕರ್ನಾಟಕ ಸಾಹಿತ್ಯ ಅಕಾಡಮಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

ಚದುರಂಗ

ಜನನ : 11.1.1916 **ನಿಧನ : 19.10.1989**



ಚದುರಂಗ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಎಂ.ಸುಬ್ರಮಣ್ಯ ಅರಸುರವರ ವಿದ್ಯಾಭ್ಯಾಸ ಮೈಸೂರು ಮತ್ತು ಬೆಂಗಳೂರಿನಲ್ಲಿ ನಡೆಯಿತು.

ರಾಜಮನೆತನದೊಂದಿಗೆ ಸಂಬಂಧಪಿದ್ದ ಇವರು ಮೈಸೂರಿನ ಮಹಾರಾಜರಾಗಿದ್ದ ಜಯಚಾಮರಾಜ ಒಡೆಯರ್‌ರವರ ಸಹಪಾಠಿಯಾಗಿದ್ದರು.

ಎಳೆಯ ವಯಸ್ಸಿನಿಂದಲೆ ಸೃಜನಶೀಲತೆ ಇವರಲ್ಲಿ ಮೂಡಿತ್ತು. ಮನೆಯ ವಾತಾವರಣವೂ ಇದಕ್ಕೆ ಸಹಾಯಕವಾಗಿದ್ದರಿಂದ ಕಥೆ ಹೇಳುವ, ಬರೆಯುವ

ಪ್ರವೃತ್ತಿ ಇವರಲ್ಲಿ ಬೆಳೆಯಿತು. ಸಮಾಜ ಸುಧಾರಣೆ, ಹಳ್ಳಿಯ ಉದ್ಧಾರ ಮುಂತಾದ ಆದರ್ಶಗಳು ಇವರಲ್ಲಿ ಮನೆ ಮಾಡಿತ್ತು. ಹಾಗಾಗಿ ಕಲ್ಲಹಳ್ಳಿಯಲ್ಲಿ ನೆಲೆಸಿ ಕೃಷಿಕರಾದರೆ, ಕೃಷಿಯೊಂದಿಗೆ ಸಾಹಿತ್ಯದಲ್ಲಿಯೂ ಆಸಕ್ತಿ ಹೊಂದಿದ್ದ ಚದುರಂಗರು ಕಥೆ ಕಾದಂಬರಿಗಳನ್ನು ಬರೆದರು.

ಇವರ ಹೆಸರಿಸಬಹುದಾದ ಪ್ರಮುಖ ಕೃತಿಗಳೆಂದರೆ–ಸಪ್ನ ಸುಂದರಿ. ಶವದ ಮನೆ, ಇಣುಕುನೋಟ, ಬಂಗಾರದ ಗೆಜ್ಜೆ, ಮೀನಿನ ಹೆಜ್ಜೆ, ಮುಂತಾದ ಕಥಾ ಸಂಕಲನಗಳು.

ಇವರು ರಚಿಸಿದ ಮೊದಲ ಕಾದಂಬರಿ ಸರ್ವಮಂಗಳ. ಎರಡನೆ ಕಾದಂಬರಿ ಉಯ್ಯಾಲೆ. ಈ ಎರಡೂ ಕಾದಂಬರಿಗಳು ಚಲನಚಿತ್ರಗಳಾಗಿ ತಯಾರಾಗಿವೆ. ಸರ್ವಮಂಗಳಕ್ಕೆ ಇವರೇ ನಿರ್ದೇಶಿಸಿದ್ದು ಪ್ರಶಸ್ತಿಯನ್ನು ಗಳಿಸಿದೆ.

ಇವರು ರಚಿಸಿದ ಮೂರನೆಯ ಮಹತ್ತರ ಕೃತಿ ವೈಶಾಖ. ಈ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ದೊರಕಿದೆ. ಅಲ್ಲದೆ ರಾಜ್ಯ ಸಾಹಿತ್ಯ ಅಕಾಡಮಿಯ ಗೌರವ ಪ್ರಶಸ್ತಿ ದೊರೆತಿದೆ. ಮೃಗಯಾ ಕಥಾ ಸಂಕಲನಕ್ಕೂ ಸಹ ರಾಜ್ಯ ಸಾಹಿತ್ಯ ಅಕಾಡಮಿಯ ಪ್ರಶಸ್ತಿ ದೊರೆತಿದೆ.

ಮೈಸೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಹಾಗೂ ರಾಜ್ಯ ಸರ್ಕಾರದಿಂದ ರಾಜ್ಯೋತ್ಸವ ಪ್ರಶಸ್ತಿಯ ಗೌರವಕ್ಕೆ ಪಾತ್ರರಾಗಿದ್ದಾರೆ.

1994ರ ಫೆಬ್ರವರಿಯಲ್ಲಿ ಮಂಡ್ಯದಲ್ಲಿ ನಡೆದ 63ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಬಿ. ಜಿ. ಎಲ್. ಸ್ವಾಮಿ

ಜನನ : 5.2.1916 **ನಿಧನ : 2.11.1980**



ಬೆಂಗಳೂರು ಗುಂಡಪ್ಪ ಲಕ್ಷ್ಮೀನಾರಾಯಣಸ್ವಾಮಿ–ಬಿ.ಜಿ.ಎಲ್ ಸ್ವಾಮಿ ಕನ್ನಡದ ಹಿರಿಯ ವಿಜ್ಞಾನಿ, ಸಾಹಿತಿ, ಚಿಂತನಶೀಲ ಬರಹಗಾರರು. ಕನ್ನಡದ ಭೀಷ್ಮ ಎನಿಸಿಕೊಂಡ ಕನ್ನಡ ಸಾಹಿತ್ಯ ದಿಗ್ಗಜಗಳಲ್ಲೊಬ್ಬರಾದ ಡಿ.ವಿ.ಜಿಯವರ ಪುತ್ರರು. ಸಾಹಿತ್ಯ, ಸಂಗೀತ, ಚಿಂತನಶೀಲತೆಯಿಂದ ಕೂಡಿದ್ದ ವಾತಾವರಣದಲ್ಲಿ ಬೆಳೆದ ಅವರು ಸೆಂಟ್ರಲ್ ಕಾಲೇಜಿನಲ್ಲಿ ಅಭ್ಯಾಸಮಾಡುತ್ತಿದ್ದಾಗ ಕರ್ನಾಟಕ ಸಂಘದ ಕಾರ್ಯದರ್ಶಿಯಾಗಿದ್ದರು. ಸಸ್ಯಶಾಸ್ತ್ರದ ಅಧ್ಯಯನವನ್ನು ಮಾಡಿ ಬಿ.ಎಸ್.ಸಿ (ಆನರ್ಸ್)ನ್ನು ಮೊದಲ ದರ್ಜೆಯಲ್ಲಿ ತೇರ್ಗಡೆಯಾದರು.

ಮೈಸೂರು ವಿಶ್ವವಿದ್ಯಾಲಯದಿಂದ ಡಿ.ಎಸ್.ಸಿ ಪದವಿ ಪಡೆದರು. ಭಾರತ ಸರ್ಕಾರದ ನೆರವಿನಿಂದ ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಹೆಚ್ಚಿನ ಅಧ್ಯಯನ ಕೈಗೊಂಡರು.

1953ರಲ್ಲಿ ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ 25 ವರ್ಷ ಸೇವೆ ಸಲ್ಲಿಸಿದರು. ಮೂರು ವರ್ಷ ಪ್ರಾಂಶುಪಾಲರಾಗಿದ್ದರು. ಈ ಅವಧಿಯಲ್ಲಿ ನೂರಾರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿ ಆದರ್ಶ ಪ್ರಾಧ್ಯಾಪಕ, ಸಂಶೋಧಕ ಎನಿಸಿಕೊಂಡರು.

ಅಂತರ ರಾಷ್ಟ್ರೀಯ ಸಮಾವೇಶಗಳಲ್ಲಿ ವಿಜ್ಞಾನದ ಸಂಶೋಧನೆಗಳನ್ನು ಕುರಿತು ಪ್ರೌಢ ಪ್ರಬಂಧಗಳನ್ನು ಮಂಡಿಸಿದ್ದಾರೆ. ಪ್ರಸಿದ್ಧ ನಿಯತಕಾಲಿಕಗಳಲ್ಲಿ ಹಾಗೂ ಪತ್ರಿಕೆಗಳಲ್ಲಿ ಇವರ ಲೇಖನಗಳು ಪ್ರಕಟವಾಗಿವೆ.

ಕನ್ನಡ ಸಾಹಿತ್ಯಕ್ಕೆ ಅವರು ನೀಡಿರುವ ಕೊಡುಗೆ ಬಹಳ ಮಹತ್ವದ್ದು. ಹಸಿರು ಹೊನ್ನು, ಮೈಸೂರು ಡೈರಿ, ಸಾಕ್ಷಾತ್ಕಾರದ ಹಾದಿಯಲ್ಲಿ, ಸಸ್ಯಪುರಾಣ, ಪಂಚ ಕಲಶ ಗೋಪುರ, ನಮ್ಮ ಹೊಟ್ಟೆಯಲ್ಲಿ, ದಕ್ಷಿಣ ಅಮೆರಿಕ, ಕಾಲೇಜುರಂಗ, ಪ್ರಾಧ್ಯಾಪಕನ ಪೀಠದಲ್ಲಿ, ತಮಿಳು ತಲೆಗಳ ನಡುವೆ, ಕಾಲೇಜು ತರಂಗ ಶಾಸನಗಳಲ್ಲಿ ಗಿಡಮರಗಳು, ದೌರ್ಗಂಧಿಕಾಪಹರಣ, ಮುಂತಾದವುಗಳನ್ನು ಹೆಸರಿಸಬಹುದಾಗಿದೆ. "ಅಮೆರಿಕದಲ್ಲಿ ನಾನು" ಅವರು ಬರೆದಿರುವ ಪ್ರವಾಸ ಕಥನ.

'ಹಸಿರು ಹೊನ್ನು' ಪುಸ್ತಕಕ್ಕೆ 1978ರಲ್ಲಿ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ದೊರಕಿತು. ಈ ಹಿಂದೆ 1968ರಲ್ಲಿ ಡಿವಿಜಿಯವರಿಗೂ ಕೇಂದ್ರ ಸಾಹಿತ್ಯ ಅಕಾಡಮಿಯು ಲಭಿಸಿತ್ತು. ಹಾಗಾಗಿ ತಂದೆ ಮಕ್ಕಳಿಬ್ಬರಿಗೂ ಈ ಪ್ರಶಸ್ತಿ ಲಭ್ಯವಾಗಿದ್ದು ಇದೇ ಮೊದಲು.

ಇವರು ಬರೆದ "ಕಾಲೇಜುರಂಗ" ಪುಟ್ಟಣ್ಣ ಕಣಗಾಲರ ನಿರ್ದೇಶನದಲ್ಲಿ ಚಲನ ಚಿತ್ರವಾಗಿ ತಯಾರಾಯಿತು.

ಎಂ. ಕೆ. ಇಂದಿರಾ

ಜನನ : 5.1.1917 **ನಿಧನ : 15.3.1994**



ಕನ್ನಡದ ಹೆಸರಾಂತ ಲೇಖಕಿ, ಕಾದಂಬರಿಗಾರ್ತಿ. ಇವರು ಓದಿರುವುದು ಮಾಧ್ಯಮಿಕ ಶಾಲೆಯ ಎರಡನೆಯ ತರಗತಿಯವರೆಗೆಂದರೆ ಎಂತಹವರಿಗೂ ಆಶ್ಚರ್ಯವಾಗದಿರದು. ಹೆಚ್ಚಿನ ಶಿಕ್ಷಣವಿಲ್ಲ, ಅನೇಕ ಭಾಷೆಗಳ ಪರಿಚಯ ಇಲ್ಲ. ಸಾಹಿತ್ಯದ ಆಳವಾದ ಅಧ್ಯಯನವಿಲ್ಲ. ಹೀಗೆ ಹಲವು ಇಲ್ಲಗಳ ಮಧ್ಯವೇ ಕನ್ನಡದ ಲೇಖಕಿಯರಲ್ಲಿ ಮಾತ್ರವೇ ಅಲ್ಲದೆ, ಪ್ರಮುಖ ಸಾಹಿತಿಗಳ ಸಾಲಿನಲ್ಲಿ ಅವರೂ ಒಬ್ಬರಾಗಿರುವುದರಲ್ಲಿ ಯಶಸ್ವಿಯಾಗಿದ್ದಾರೆ.

ಅವರ ಬರವಣಿಗೆ ಪ್ರಾರಂಭವಾಗಿದ್ದೇ ಅವರು 40 ವರ್ಷಗಳು ದಾಟಿದ ಮೇಲೆ. ಅವರ ಮೊದಲ ಕಾದಂಬರಿ ತುಂಗಭದ್ರ ಮೊದಲಿಗೆ ಮುದ್ರಣ ಭಾಗ್ಯ ಕಂಡಿದ್ದು 1963ರಲ್ಲಿ. ಮೊದಲ ಕೃತಿಯಿಂದಲೇ ಅವರು ಓದುಗರ ಮೆಚ್ಚುಗೆಯ ಕಾದಂಬರಿಗಾರ್ತಿಯರಾದರು.

ಅವರು ಬರೆದಿರುವ ಕಾದಂಬರಿಗಳ ಸಂಖ್ಯೆ 49. ಕಥಾ ಸಂಕಲನಗಳು 15, ಸುಮಾರು 150 ಕಥೆಗಳು.

ತುಂಗಭದ್ರಾ, ಗೆಜ್ಜೆಪೂಜೆ, ಮುಸುಕು, ಟುಲೆಟ್ ಸದಾನಂದ, ಫಣಿಯಮ್ಮ, ತಗ್ಗಿನಮನೆ ಸೀತೆ, ತಪೋವನ, ಪೂರ್ವಾಪರ ಗಿರಿಬಾಲೆ ಹೂಬಾಣ ಮುಂತಾದವು ಪ್ರಮುಖ ಕಾದಂಬರಿಗಳೆಂದು ಹೆಸರಿಸಬಹುದು.

ಕನ್ನಡ ಚಿತ್ರಶಿಲ್ಪಿ ಪುಟ್ಟಣ್ಣ ಕಣಗಾಲ್ ಮತ್ತು ಚಿತ್ರಭಾರತ–ಎನ್ನುವ ಚಿತ್ರ ಜಗತ್ತಿಗೆ ಸಂಬಂಧಿಸಿದ ಎರಡು ಕೃತಿಗಳನ್ನು ರಚಿಸಿದ್ದಾರೆ.

ಬೆಂಗಳೂರು ವಿಶ್ವವಿದ್ಯಾಲಯದ ಪದವಿ ತರಗತಿಗಳಿಗೆ ತುಂಗಭದ್ರಾ ಕಾದಂಬರಿ ಪಠ್ಯಪುಸ್ತಕವಾಗಿತ್ತು. ಶ್ರೀಮತಿ ಮಂದಾಕಿನಿ ಪುರೋಹಿತ ಅವರು ಎಂ.ಕೆ. ಇಂದಿರಾ ಅವರ ಕಾದಂಬರಿಗಳು ಎಂಬ ಮಹಾಪ್ರಬಂಧ ಬರೆದು ಕರ್ನಾಟಕ ವಿಶ್ವ ವಿದ್ಯಾಲಯದಿಂದ ಡಾಕ್ಟರೇಟ್ ಪಡೆದಿದ್ದಾರೆ.

ತುಂಗಭದ್ರಾ, ಗೆಜ್ಜೆ ಪೂಜೆ ತೆಲುಗಿಗೂ ಫಣಿಯಮ್ಮ ಮಲಯಾಳಂ ಭಾಷೆಗೂ ಭಾಷಾಂತರಗೊಂಡಿದೆ. ತೇಜಸ್ವಿನಿ ನಿರಂಜನ ಅವರು ಫಣಿಯಮ್ಮ ಕಾದಂಬರಿಯನ್ನು ಇಂಗ್ಲೀಷ್‌ಗೆ ಅನುವಾದಿಸಿದ್ದಾರೆ. ವಿಶೇಷವೆಂದರೆ ಅನುವಾದಕ್ಕಾಗಿ ಕೇಂದ್ರ ಸಾಹಿತ್ಯ ಅಕಾಡಮಿಯ ಬಹುಮಾನ ಪಡೆದಿದ್ದಾರೆ.

ಸದಾನಂದ, ಗೆಜ್ಜೆಪೂಜೆ, ಫಣಿಯಮ್ಮ, ಹೂಬಾಣ, ಮುಸುಕು – ಈ ಕಾದಂಬರಿಗಳು ಚಲನಚಿತ್ರವಾಗಿವೆ– ಚಿತ್ರರಸಿಕರ ಮನಗೆದ್ದಿವೆ.

ಇವರ ಸಾಹಿತ್ಯ ಸೇವೆಗೆ ಹಲವಾರು ಪ್ರಶಸ್ತಿಗಳು ಲಭ್ಯವಾಗಿವೆ. ಸಾವಿತ್ರಮ್ಮ ದೇಜಗೌ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡಮಿ ಪ್ರಶಸ್ತಿ ದೊರೆತಿದೆ. 1975ರಲ್ಲಿ ಅಕಾಡಮಿಯಿಂದ ಗೌರವ ಪ್ರಶಸ್ತಿಯೂ ದೊರೆತಿದೆ. ಕರ್ನಾಟಕ ಲೇಖಕಿಯರ ಸಂಘದಿಂದ "ಸುರಗಿ" ಎನ್ನುವ ಅಭಿನಂದನಾ ಗ್ರಂಥವನ್ನು ಅವರಿಗೆ ಅರ್ಪಿಸಲಾಗಿದೆ.

ಟಿ. ಸುನಂದಮ್ಮ

ಜನನ : 8-8-1917 ನಿಧನ : 27-1-2006



ಕನ್ನಡ ಸಾಹಿತ್ಯ ಲೋಕ ಕಂಡ ಅಪರೂಪದ ಹಾಸ್ಯಲೇಖಕಿ ಟಿ.ಸುನಂದಮ್ಮರವರು. ಮಹಿಳೆಯರಿನ್ನೂ ಬರಹವನ್ನೇ ಆರಂಭಿಸದ ಕಾಲದಲ್ಲಿ ತಮ್ಮ ತಿಳಿ ಹಾಸ್ಯದ ಮೂಲಕ ಎಲ್ಲ ವರ್ಗದ ಓದುಗರನ್ನು ನಕ್ಕು ನಲಿಸಿದವರು. ಕಳೆದ ಶತಮಾನದಲ್ಲಿ ಹತ್ತು ಹಲವು ವರ್ಷಗಳ ಕಾಲ ಕನ್ನಡದ ಏಕೈಕ ಮಹಿಳಾ ಹಾಸ್ಯಬರಹಗಾರ್ತಿಯ ಸ್ಥಾನವನ್ನು ಗಳಿಸಿಕೊಂಡವರು, ಉಳಿಸಿಕೊಂಡವರು.

ಬಾಲಕಿಯರ ಪಾಠಶಾಲೆಗಳು ಅಪರೂಪವಾಗಿದ್ದ ಅವರ ಬಾಲ್ಯ

ಕಾಲದಲ್ಲಿ ಬಾಲಕರ ಶಾಲೆಯಲ್ಲಿಯೇ ಸುನಂದಮ್ಮನವರು ವ್ಯಾಸಂಗ ಮಾಡಿದ್ದು ಅಂದಿನ ಕಾಲಕ್ಕೆ ಒಂದು ದಾಖಲೆಯೆಂದೆನ್ನಬಹುದು.

ವಿವಾಹವಾದ ನಂತರವೂ ವ್ಯಾಸಂಗವನ್ನು ಮುಂದುವರೆಸಿ ಇಂಟರ್ ಮೀಡಿಯಟ್‌ರವರೆಗೆ ಓದಿದರು. ಕನ್ನಡದ ಹೆಸರಾಂತ ಲೇಖಕರ ಕೃತಿಗಳನ್ನು ಹಾಗೂ ಇಂಗ್ಲೀಷ್ ಸಾಹಿತ್ಯವನ್ನು ಓದುವ ಮೂಲಕ ಸಾಹಿತ್ಯಾಭಿರುಚಿಯನ್ನು ಬೆಳೆಸಿಕೊಂಡ ಅವರು ಬರವಣಿಗೆಯನ್ನು ಆರಂಭಿಸಿದರು.

ಅವರ 'ಹೂವು' ಕವನ ಪ್ರಕಟವಾದಾಗ ಅವರಿಗಿನ್ನೂ ಒಂಭತ್ತು ವರ್ಷ. ಅವರು ಬಾಲ ವಿಧವೆಯರ ಕುರಿತು ಬರೆದ ಕಥೆ ಹೂಬಾಡಿತು ಪ್ರಕಟವಾದಾಗ ಅವರಿಗೆ ಹನ್ನೆರಡು ವರ್ಷ.

'ಕೊರವಂಜಿ' ಹಾಸ್ಯಮಾಸಪತ್ರಿಕೆಯಲ್ಲಿ ಅವರು ಬರೆಯುತ್ತಿದ್ದ ಲೇಖನ ಗಳು ಅವರಿಗೆ ಭಾರೀ ಜನಪ್ರಿಯತೆಯನ್ನು ತಂದುಕೊಟ್ಟಿತು. ಬದುಕಿನ ಸುತ್ತಮುತ್ತಲಿನವರನ್ನೇ ದೃಷ್ಟಿಯಲ್ಲಿಟ್ಟುಕೊಂಡು ಕೃತಿಗಳನ್ನು ರಚಿಸುತ್ತಿದ್ದರು. ಸಮಾಜದಲ್ಲಿ ಕಾಲ ಕಾಲಕ್ಕೆ ಆಗುತ್ತಿದ್ದ ಬದಲಾವಣೆಗಳು, ಕಾನೂನುಗಳನ್ನು ವಿಷಯವನ್ನಾಗಿಟ್ಟುಕೊಂಡು ಬರಹಗಳನ್ನು ರಚಿಸುತ್ತಿದ್ದುದು ಅವರ ಬರವಣಿಗೆಯ ವೈಶಿಷ್ಟ್ಯವಾಗಿತ್ತು.

ಬಣ್ಣದ ಚಿಟ್ಟೆ, ಜಂಭದ ಚೀಲ, ಪೆಪ್ಪರ್ ಮಿಂಟ್, ವೃಕ್ಷವಾಹನ, ಮುತ್ತಿನ ಚೆಂಡು, ನನ್ನ ಅತ್ತೆಗಿರಿ, ಟಿ.ಸುನಂದಮ್ಮ ಸಮಗ್ರ ಹಾಸ್ಯ ಸಾಹಿತ್ಯ ಮುಂತಾದ ಹಲವು ಅವರ ಕೃತಿಗಳನ್ನು ಹೆಸರಿಸಬಹುದಾದುವು.

ತಮ್ಮ ಲೇಖನ ವ್ಯವಸಾಯದ ಜೊತೆ ಜೊತೆಗೇ ಅವರು ಕೈಗೊಂಡ ಮತ್ತೊಂದು ಮಹತ್ತರ ಸಾಧನೆಯೆಂದರೆ ಲೇಖಕಿಯರ ಸಂಘವನ್ನು ಸ್ಥಾಪಿಸಿದ್ದು. ಅದರ ಮೊದಲ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು.

ಕರ್ನಾಟಕ ಸಾಹಿತ್ಯ ಅಕಾಡಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿ, ಅನುಪಮಾ ಪ್ರಶಸ್ತಿ ಮುಂತಾದುವು ಇವರಿಗೆ ಲಭಿಸಿವೆ.

ಎಂ. ಗೋಪಾಲ ಕೃಷ್ಣ ಅಡಿಗ

ಜನನ : 18-2-1918 **ನಿಧನ : 14-11-1992**



ಮೊಗೇರಿ ಗೋಪಾಲಕೃಷ್ಣ ಅಡಿಗರು ಬೈಂದೂರು, ಮೈಸೂರುಗಳಲ್ಲಿ ವಿದ್ಯಾಭ್ಯಾಸ ಮಾಡಿ ಬಿ.ಎ. ಆನರ್ಸ್ ಪದವಿಯನ್ನು ಗಳಿಸಿದ ನಂತರ ಅಧ್ಯಾಪಕರಾಗಿ ಚಿತ್ರದುರ್ಗ, ದಾವಣಗೆರೆ, ಬೆಂಗಳೂರು, ತುಮಕೂರು ಹಾಗೂ ಮೈಸೂರಿನ ವಿವಿಧ ಶಾಲೆಗಳಲ್ಲಿ ಸೇವೆಯನ್ನುಸಲ್ಲಿಸಿದರು. ಎಂ.ಎ. ಪದವಿಯನ್ನು ಪಡೆದ ನಂತರ ಮೈಸೂರಿನ ಸೆಂಟ್ ಫಿಲೋಮಿನಾ ಕಾಲೇಜು ಹಾಗೂ ಕುಮಟಾದ ಕೆನರಾ ಕಾಲೇಜಿನಲ್ಲಿ ಇಂಗ್ಲೀಷ್ ಉಪನ್ಯಾಸಕರಾಗಿದ್ದರು. 1964-68ರ ಅವಧಿಯಲ್ಲಿ ಸಾಗರದ ಕಾಲೇಜಿನಲ್ಲಿ ಹಾಗೂ ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನಲ್ಲಿ ಪ್ರಿನ್ಸಿಪಾಲರಾಗಿದ್ದರು. ಸಿಮ್ಲಾದ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಅಡ್ವಾನ್ಸ್ ಸ್ಟಡಿಯಲ್ಲಿ ರಿಸರ್ಚ್ ಫೆಲೋ ಆಗಿ ಕರ್ತವ್ಯ ನಿರ್ವಹಿಸಿದರು.

1971ರಲ್ಲಿ ರಾಜಕೀಯ ಕ್ಷೇತ್ರಕ್ಕೆ ಪ್ರವೇಶ ಮಾಡುವ ಉದ್ದೇಶದಿಂದ ಜನಸಂಘದ ಅಭ್ಯರ್ಥಿಯಾಗಿ ಬೆಂಗಳೂರು ಲೋಕಸಭಾ ಕ್ಷೇತ್ರದಿಂದ ಚುನಾವಣೆಯಲ್ಲಿ ಸ್ಪರ್ಧಿಸಿದರು. ಆದರೆ ಚುನಾವಣೆಯಲ್ಲಿ ಗೆಲ್ಲಲಾಗಲಿಲ್ಲ.

ಬಾಲ್ಯದಿಂದಲೇ ಪದ್ಯ ರಚನೆಯಲ್ಲಿ ತೊಡಗಿದ ಅವರ ಪ್ರಥಮ ಕವನ ಸಂಕಲನ ಭಾವ ತರಂಗ. ಇವರ ಇತರ ಕೃತಿಗಳೆಂದರೆ ಕಟ್ಟುವೆವು ನಾವು, ನಡೆದು ಬಂದ ದಾರಿ, ಮಣ್ಣಿನ ವಾಸನೆ, ಚಂಡಮದ್ದಲೆ, ಭೂಮಿಗೀತೆ, ವರ್ಧಮಾನ, ಮುಂತಾದುವು.

ಅನಾಥೆ, ಆಕಾಶದೀಪ ಇವರ ಲೇಖನಿಯಿಂದ ಮೂಡಿಬಂದಿರುವ ಕಾದಂಬರಿಗಳು. ಇದಲ್ಲದೆ ಹಲವಾರು ಗದ್ಯ ಲೇಖನಗಳು, ಅನುವಾದಗಳು ಸಹ ಇವರ ಸಾಹಿತ್ಯ ಕೃಷಿಯಲ್ಲಿ ಸೇರಿವೆ.

ರಾಜ್ಯಸಾಹಿತ್ಯ ಅಕಾಡಮಿ (1973) ಕೇಂದ್ರಸಾಹಿತ್ಯ ಅಕಾಡಮಿ (1974) ಪ್ರಶಸ್ತಿಗಳು ಇವರಿಗೆ ದೊರೆತಿವೆ.

ಕರ್ನಾಟಕದ ಪ್ರತಿಷ್ಠಿತ ಪಂಪ ಪ್ರಶಸ್ತಿ ಇವರ "ಸುವರ್ಣ ಪುತ್ಥಳಿ" ಸಂಕಲನಕ್ಕೆ 1993ರಲ್ಲಿ ಲಭಿಸಿದ್ದರೆ, ಮತ್ತೊಂದು ಪ್ರತಿಷ್ಠಿತ ಪ್ರಶಸ್ತಿ ಮಧ್ಯಪ್ರದೇಶ ಸರ್ಕಾರದ ಕಬೀರ್ ಸನ್ಮಾನ್ ಪ್ರಶಸ್ತಿಯೂ ಸಹ ಲಭ್ಯವಾಗಿದೆ.

1979ರ ಮಾರ್ಚ್‌ನಲ್ಲಿ ಧರ್ಮಸ್ಥಳದಲ್ಲಿ ನಡೆದ 51ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗುವ ಗೌರವವು ಇವರ ಪಾಲಿಗೆ ದೊರಕಿತ್ತು.

ಮ. ರಾಮಮೂರ್ತಿ

ಜನನ : 11.3.1918 **ನಿಧನ : 25.12.1967**



ಪತ್ತೇದಾರಿ ರಾಮಮೂರ್ತಿ ಎಂದೇ ಖ್ಯಾತರಾಗಿದ್ದ ಮ.ರಾಮಮೂರ್ತಿಯವರು ಬೆಂಗಳೂರಿನ ಆರ್ಯ ವಿದ್ಯಾಶಾಲೆಯಲ್ಲಿ ವ್ಯಾಸಂಗ ಮಾಡಿದರು. ಆ ಸಮಯದಲ್ಲಿ ಅವರ ಮೇಲೆ ಪ್ರಭಾವ ಬೀರಿದವರು ಅವರ ವಿದ್ಯಾಗುರುಗಳಾದ ದೇವುಡು ನರಸಿಂಹಶಾಸ್ತ್ರಿಯವರು.

ತಂದೆ ವೀರಕೇಸರಿ ಸೀತಾರಾಮಶಾಸ್ತ್ರಿಗಳ ಸಾಹಿತ್ಯಾಭಿರುಚಿ, ಗುರುಗಳಾದ ದೇವುಡುರವರ ಮಾರ್ಗದರ್ಶನದಿಂದ ಇವರಲ್ಲಿ ಬಾಲ್ಯದಲ್ಲಿಯೇ

ಸಾಹಿತ್ಯಾಭಿರುಚಿ ಮೂಡಿತು. ಬಾಲಕ ರಾಮಮೂರ್ತಿಗೆ ಕರ್ನಾಟಕ ಗತವೈಭವ ಕನ್ನಡದ ಸಿರಿ ಸಂಪತ್ತಿನ ಸ್ಥೂಲದರ್ಶನವನ್ನು ಮಾಡಿಸಿ ಕನ್ನಡದ ದೀಕ್ಷೆ ಕೊಟ್ಟ ವರು ನಂಜನಗೂಡಿನ ಸುಬ್ರಮಣ್ಯ ಅಯ್ಯರ್‌ರವರು.

ಇವರೆಲ್ಲರ ಪ್ರಭಾವದಿಂದ ಬಾಲಕನಾಗಿದ್ದಾಗಲೆ ಸಾಹಿತ್ಯ ರಚನೆ ಕೈಗೊಂಡ ರಾಮಮೂರ್ತಿ 'ಗುರುದಕ್ಷಿಣೆ' ಎಂಬ ಕಥೆಯನ್ನು ಬರೆದು ಅದು ಮಕ್ಕಳ ಪುಸ್ತಕದಲ್ಲಿ ಪ್ರಕಟವಾಯಿತು.

ದಿನ ಕಳೆದಂತೆ ಅವರ ಸಾಹಿತ್ಯಾಭಿರುಚಿ ಪತ್ತೇದಾರಿ ಕಾದಂಬರಿಗಳ ರಚನೆಯತ್ತ ಹೊರಳಿತು. ಈ ಸಾಹಿತ್ಯ ಪ್ರಕಾರದಲ್ಲಿ ಅವರು ರಚಿಸಿದ್ದು ಸುಮಾರು 150 ಕಾದಂಬರಿಗಳನ್ನು .

ಅವರ ಕಾದಂಬರಿಗಳಲ್ಲಿ ಪತ್ತೇದಾರನಾಗಿ ಜನಪ್ರಿಯತೆ ಪಡೆದಿದ್ದು ಚಲಂ ಪಾತ್ರ. ಅವರು ಬರೆದ ಕಾದಂಬರಿಗಳಲ್ಲಿ ಅವರಿಗೆ ತುಂಬ ಪ್ರಸಿದ್ಧಿಯನ್ನು ತಂದು ಕೊಟ್ಟ ಕಾದಂಬರಿ ಎಂದರೆ 'ಕಾಲುವೆ ಮನೆ.' ಅವರು ರಚಿಸಿದ ಇನ್ನಿತರ ಪ್ರಮುಖ ಕಾದಂಬರಿಗಳೆಂದರೆ ಐದು ದಿನಗಳು, ಮಾಟಗಾತಿ, ಜುಲೇಕ-ಲಗುಮಿಯ ಹೆಣ ಮತ್ತೆ ಜುಲೇಕ, ರಕ್ತ ಚುಂಬನ, ಮರೆಯಾಗಿದ್ದ ವಜ್ರಗಳು. ಭಾಗ್ಯಳ ಮದುವೆ' ಮುಂತಾದವು.

ಪತ್ತೇದಾರಿ ಕಾದಂಬರಿಗಳೇ ಅಲ್ಲದೆ ಚಾರಿತ್ರಿಕ ಕಾದಂಬರಿಗಳನ್ನೂ ಬರೆದಿದ್ದಾರೆ. ನಾಡಿನ ಇತಿಹಾಸದ ಬಗ್ಗೆ ಗತವೈಭವದ ಬಗ್ಗೆ ಅವರಿಗೆ ಹೆಚ್ಚು ಒಲವಿತ್ತು. ಇಪ್ಪರಗಿ ಸೀಮೆ, ಇಬ್ಬರು ರಾಣಿಯರು ಹಾಗೂ ಶಿವಮೊಗ್ಗ ಜಿಲ್ಲೆಯ ನಗರದಲ್ಲಿ ನಡೆದ ಬಂಡಾಯವನ್ನು ಕುರಿತ ರಾಜದಂಡ ಎಂಬ ಚಾರಿತ್ರಿಕ ಕಾದಂಬರಿಯನ್ನು ಬರೆದಿದ್ದಾರೆ. ತಾವು ಬರೆದಿದ್ದ ಕಾದಂಬರಿಗಳು ಜನ ಸಾಮಾನ್ಯರನ್ನು ತಲುಪಬೇಕು. ಹೆಚ್ಚು ಹೆಚ್ಚು ಜನ ತಮ್ಮ ಸಾಹಿತ್ಯವನ್ನು ಓದಬೇಕು ಎಂಬ ಹಂಬಲವನ್ನು ಹೊಂದಿದ್ದ ಅವರು ಸುಲಭ ಬೆಲೆಗೆ ಪುಸ್ತಕ ಗಳನ್ನು ಪ್ರಕಟಿಸಿದರು. ಸುಮಾರು 120 ಪುಟಗಳ ಪುಸ್ತಕಕ್ಕೆ 9 ಆಣೆ ಎಂದು ನಿಗದಿ ಮಾಡುತ್ತಿದ್ದರು. ಹಾಗಾಗಿ ಅವರ ಕೆಲವು ಕಾದಂಬರಿಗಳು ಹತ್ತು ಸಾವಿರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಪ್ರಕಟವಾಗುತ್ತಿದ್ದವು.

ಕನ್ನಡ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ಅವರು "ಕನ್ನಡ ಯುವಜನ" ಪತ್ರಿಕೆಯ ಸಂಪಾದಕರೂ ಆಗಿದ್ದರು.

ಸಿದ್ದಯ್ಯ ಪುರಾಣಿಕ

ಜನನ : 18.6.1918 **ನಿಧನ : 5.9.1994**



'ಕಾವ್ಯಾನಂದ' ಕಾವ್ಯ ನಾಮದಿಂದ ಕನ್ನಡಿಗರಿಗೆ ಪರಿಚಿತರಾಗಿರುವ ಸಿದ್ಧಯ್ಯ ಪುರಾಣಿಕರು ಕಲಬುರ್ಗಿಯ ಶಾಲಾ ಕಾಲೇಜು ಮತ್ತು ಉಸ್ಮಾನಿಯಾ ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣ ಪೂರೈಸಿದರು. IAS ಪರೀಕ್ಷೆಯಲ್ಲಿಯೂ ತೇರ್ಗಡೆಯಾಗಿ ಸರ್ಕಾರದ ಉನ್ನತ ಹುದ್ದೆಗಳಲ್ಲಿ ಸೇವೆಸಲ್ಲಿಸಿದ್ದರು.

ವೃತ್ತಿಯಲ್ಲಿ ಸರ್ಕಾರಿ ಅಧಿಕಾರಿಯಾಗಿದ್ದರೂ ಸಾಹಿತ್ಯದ ಒಲವನ್ನು ಮೊದಲಿನಿಂದಲೂ ರೂಢಿಸಿಕೊಂಡಿದ್ದ ಅವರು ನಿವೃತ್ತಿಯ ನಂತರದ ತಮ್ಮ ಸಮಯವನ್ನು ಸಾಹಿತ್ಯಕ್ಕೇ ಕೇಂದ್ರೀಕರಿಸಿದರು.

ಪುರಾಣಿಕರು ಕನ್ನಡವೇ ಅಲ್ಲದೆ ಉರ್ದು, ಮರಾಠಿ. ಪರ್ಷಿಯನ್, ಸಂಸ್ಕೃತ ಭಾಷೆಗಳಲ್ಲಿಯೂ ಪಾಂಡಿತ್ಯ ಪಡೆದಿದ್ದರು.

ಅವರ ತಂದೆ ಮೊದಲುಗೊಂಡು ಇಡೀ ಕುಟುಂಬವೇ ಸಾಹಿತ್ಯಾಭಿಮಾನ ಹಾಗೂ ಪಾಂಡಿತ್ಯವನ್ನು ಹೊಂದಿದ್ದವರಾಗಿದ್ದರಿಂದ ಸಹಜವಾಗಿಯೇ ಅವರೆಲ್ಲರ ಪ್ರಭಾವವೂ ಇವರ ಮೇಲಾಗಿತ್ತು.

ವಿದ್ಯಾರ್ಥಿ ದೆಸೆಯಿಂದಲೇ ಕವನ ಬರೆಯುವುದನ್ನು ರೂಢಿಸಿಕೊಂಡಿದ್ದ ಅವರು ಉತ್ತಮ ಕವಿಯಾದರು. ಅವರ ಮುಖ್ಯ ಕವನ ಸಂಕಲನಗಳೆಂದರೆ ಜಲಪಾತ, ತರುಣಾಶ್ರಾವಣಾ, ಮಾನಸ ಸರೋವರ, ವಚನೋದ್ಯಾನ. ವಚನ ನಂದನ ವಚನ ರಾಮ, ಚರಗ, ಮರುಳ ಸಿದ್ಧನ ಕಂತೆ ಮುಂತಾದವು.

ಅಲ್ಲದೆ ಶರಣ ಚರಿತಾಮೃತ (ಜೀವನ ಚರಿತ್ರೆ), ಭಾರತಪೀಠ (ನಾಟಕ). ತುಷಾರ ಹಾರ (ಕಿರುಗೀತೆಗಳು), ತ್ರಿಭುವನ ಮಲ್ಲ (ಐತಿಹಾಸಿಕ ನಾಟಕ). ಮುಂತಾದವುಗಳನ್ನು ಬರೆದಿದ್ದಾರೆ. 75ಕ್ಕೂ ಹೆಚ್ಚು ರೇಡಿಯೋ ನಾಟಕಗಳನ್ನು ಬರೆದಿದ್ದಾರೆ. ಮಕ್ಕಳ ಸಾಹಿತ್ಯಕ್ಕೂ ಇವರು ಅನೇಕ ಕೃತಿಗಳನ್ನು ರಚಿಸಿದ್ದಾರೆ.

ಕರ್ನಾಟಕ ಏಕೀಕರಣಕ್ಕೂ ಮುಂಚೆ ಅವರು ಹೈದರಾಬಾದಿನಲ್ಲಿ ಕೃಷಿ ಇಲಾಖೆಯ ಅಧಿಕಾರಿಯಾಗಿದ್ದರು. ಕರ್ನಾಟಕವಾದಾಗ ಅವರು ಕರ್ನಾಟಕಕ್ಕೆ ಬರುವ ಆಸೆಯನ್ನು ಹೊಂದಿದ್ದರು. ಆ ಸಂದರ್ಭದಲ್ಲಿ ಅಲ್ಲಿನ ಕೃಷಿ ಸಚಿವ ರಾಗಿದ್ದ ಚೆನ್ನಾರೆಡ್ಡಿಯವರು. "ನೀವು ಹಿರಿಯ IAS ಅಧಿಕಾರಿಯಾಗಿರುವ ಕಾರಣ ಸರ್ಕಾರದ ಮುಖ್ಯ ಕಾರ್ಯದರ್ಶಿ ಹುದ್ದೆ ನಿಮಗೆ ದೊರಕುತ್ತದೆ. ಆದರೆ, ಕರ್ನಾಟಕಕ್ಕೆ ಹೋದರೆ ಆ ಸ್ಥಾನ ನಿಮ್ಮ ಕೈ ತಪ್ಪಿ ಹೋಗುತ್ತದೆ" ಎಂದು ಹೇಳಿದರು. ಆದರೆ ಆ ಉನ್ನತ ಹುದ್ದೆಗೆ ಆಸೆ ಪಡದೆ ಅವರು ಕರ್ನಾಟಕವನ್ನೇ ಆಯ್ದುಕೊಂಡದ್ದು ಕನ್ನಡ ನಾಡಿನ ಮೇಲೆ ಅವರು ಹೊಂದಿದ್ದ ಅಭಿಮಾನವನ್ನು ತೋರಿಸುತ್ತದೆ.

ಕರ್ನಾಟಕ ವಿಶ್ವವಿದ್ಯಾಲಯದ ಡಾಕ್ಟರೇಟ್ ಹಾಗೂ ಇತರೆ ಹಲವಾರು ಪ್ರಶಸ್ತಿಗಳು ಇವರಿಗೆ ಲಭಿಸಿವೆ.

ಕಲಬುರ್ಗಿಯಲ್ಲಿ 1987 ಅಕ್ಟೋಬರ್‌ನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ದೇ. ಜವರೇಗೌಡ

ಜನನ : 6.7.1918 **ನಿಧನ : 30.5.2016**



ದೇ.ಜ.ಗೌ. ಎಂದೇ ಪ್ರಸಿದ್ಧರಾದ ದೇ ಜವರೇಗೌಡರು ಚನ್ನಪಟ್ಟಣ. ಮೈಸೂರು, ಬೆಂಗಳೂರುಗಳಲ್ಲಿ ವಿದ್ಯಾಭ್ಯಾಸ ನಡೆಸಿ ಎಂ.ಎ.ಪದವಿ ಪಡೆದರು. ಸೆಕ್ರೆಟರಿಯೇಟ್‌ನಲ್ಲಿ ಉದ್ಯೋಗ ಕೈ ಗೊಂಡರೂ ನಂತರ ಅದನ್ನು ತ್ಯಜಿಸಿ ಮೈಸೂರಿನ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕ ವೃತ್ತಿ ಕೈಗೊಂಡರು. ನಂತರ ಉಪಪ್ರಾಧ್ಯಾಪಕ, ಪರೀಕ್ಷಾಧಿಕಾರಿ, ಸಹ್ಯಾದ್ರಿ ಕಾಲೇಜಿನ ಪ್ರಾಂಶುಪಾಲ. ಕಲಾ ವಿಭಾಗದ ಡೀನ್, ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಸ್ಥಾನಗಳನ್ನು ಅಲಂಕರಿಸಿದ್ದ ಅವರು ವಿಶ್ವವಿದ್ಯಾಲಯದ ಅತ್ಯುಚ್ಚ ಪದವಿಯಾದ ಉಪಕುಲಪತಿ ಹುದ್ದೆಯನ್ನು ಅಲಂಕರಿಸಿದರು.

ಇವರು ಕನ್ನಡ ಸಾಹಿತ್ಯದ ಅತ್ಯಂತ ಯಶಸ್ವಿ ಗದ್ಯ ಲೇಖಕರೆಂದು ಖ್ಯಾತರಾಗಿದ್ದಾರೆ. ವಿವಿಧ ಪ್ರಕಾರಗಳಲ್ಲಿ 400ಕ್ಕೂ ಹೆಚ್ಚಿನ ಪುಸ್ತಕಗಳನ್ನು ಬರೆದಿರುವ ಖ್ಯಾತಿ ಇವರದು. ಪತ್ರಿಕೆಗಳು ಮತ್ತು ನಿಯತಕಾಲಿಕಗಳಲ್ಲಿ ನೂರಾರು ಲೇಖನಗಳನ್ನು ಪ್ರಕಟಿಸಿದ್ದಾರೆ. ಇವರ ಸಾಹಿತ್ಯ ರಚನೆಯಲ್ಲಿ ಜಾನಪದ, ಜೀವನ ಚರಿತ್ರೆ, ಅನುವಾದ ಎಲ್ಲವೂ ಸೇರಿದೆ.

ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನವನ್ನು ದೊರಕಿಸಿಕೊಡುವ ಪ್ರಯತ್ನದಲ್ಲಿ ಇವರ ಪಾತ್ರ ಹಿರಿದು.


ಇವರ ಭಾಷಾಂತರಗಳಲ್ಲಿ "ಪುನರುತ್ಥಾನ" ಪ್ರಮುಖವಾದುದು. ಇದಕ್ಕೆ ಸೋವಿಯತ್ ಲ್ಯಾಂಡ್ ಪ್ರಶಸ್ತಿ ದೊರೆತಿದೆ. ಟಾಲ್‌ಸ್ಟಾಯ್‌ರವರ ವಾರ್ ಅಂಡ್ ಪೀಸ್ ಕೃತಿಯನ್ನು 'ಯುದ್ಧ ಮತ್ತು ಶಾಂತಿ' ಎಂಬ ಹೆಸರಿನಲ್ಲಿ ಭಾಷಾಂತರಿಸಿದ್ದಾರೆ. ಕೃಷ್ಣ ಹಥಿಸಿಂಗ್‌ರವರು ಬರೆದಿರುವ ವಿತ್ ನೋ ರಿಗ್ರೆಟ್ಸ್ ಕೃತಿಯನ್ನು 'ನೆನಪು ಕಹಿಯಲ್ಲ" ಎಂಬ ಹೆಸರಿನಲ್ಲಿ ಅನುವಾದಿಸಿದ್ದಾರೆ.

ಇವರ ಸಾಹಿತ್ಯ ಸೇವೆಗೆ ಹಲವಾರು ಪ್ರಶಸ್ತಿಗಳು ಸಂದಿವೆ. ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್, ಸಾಹಿತ್ಯ ಅಕಾಡಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ಹಂಪಿಯ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ, ಕರ್ನಾಟಕ ರತ್ನ ಪ್ರಶಸ್ತಿ ಹಾಗೂ ಪದ್ಮಶ್ರೀ ಪ್ರಶಸ್ತಿಗಳು ಇವರಿಗೆ ಸಂದಿರುವ ಪ್ರಶಸ್ತಿಗಳಲ್ಲಿ ಕೆಲವು.

1970ರ ಡಿಸೆಂಬರ್‌ನಲ್ಲಿ ಬೆಂಗಳೂರಿನಲ್ಲಿ ನಡೆದ 47ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ತ. ರಾ. ಸುಬ್ಬರಾವ್

ಜನನ : 21.4.1920 **ನಿಧನ : 10.4.1984**



ತ.ರಾ.ಸು ಎಂಬ ಮೂರಕ್ಷರಗಳಿಂದಲೇ ಇಡೀ ಕನ್ನಡನಾಡಿನ ಸಾಹಿತ್ಯ ಪ್ರಿಯರಿಗೆ ಅಚ್ಚುಮೆಚ್ಚಿನ ಬರಹಗಾರರಾಗಿ ಕನ್ನಡ ಸಾಹಿತ್ಯ ಲೋಕಕ್ಕೆ ತಮ್ಮದೇ ಆದ ವಿಶಿಷ್ಟ ಕಾದಂಬರಿಗಳ ಕೊಡುಗೆಯನ್ನು ನೀಡಿದವರು ತಳುಕಿನ ರಾಮ ಸ್ವಾಮಯ್ಯ ಸುಬ್ಬರಾವ್.

ಕನ್ನಡದ ಅಶ್ವಿನಿ ದೇವತೆಗಳಲ್ಲಿ ಒಬ್ಬರೆಂದು ಹೆಸರಾದ ಟಿ.ಎಸ್. ವೆಂಕಣ್ಣಯ್ಯನವರು ತರಾಸುರವರ ದೊಡ್ಡಪ್ಪನವರು ಅವರ ತಂದೆ ರಾಮಸ್ವಾಮಯ್ಯನವರೂ ಸಹ ಒಬ್ಬ ಕಥೆಗಾರರಾಗಿ ಕಥಾ ಸಂಕಲನವನ್ನು ಬರೆದಿದ್ದವರು. ಹೀಗೆ ಸಾಹಿತಿಗಳ ಕುಟುಂಬದಲ್ಲಿ ಬೆಳೆದ ತರಾಸುರವರು ಬಾಲಕ ನಾಗಿದ್ದಾಗಲಿಂದಲೇ ಸಾಹಿತ್ಯ ರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು.

ಚಿತ್ರದುರ್ಗದ ಪರಿಸರದಲ್ಲಿ ಬಾಲ್ಯವನ್ನು ಕಳೆದ ಅವರಿಗೆ ಇತಿಹಾಸ ಕಾರರಾಗಿದ್ದ ಮಲ್ಲೂರು ಶ್ರೀನಿವಾಸ ಜೋಯಿಸರು ಚಿತ್ರದುರ್ಗದ ಇತಿಹಾಸವನ್ನು ತಿಳಿಯಪಡಿಸಿದರು. ಅದರಿಂದ ಪ್ರಭಾವಿತವಾದ ಅವರು ಚಿತ್ರದುರ್ಗದ ಓನ್ನೆಲೆ ಯಲ್ಲಿ ಬರೆದ ಐತಿಹಾಸಿಕ ಕಾದಂಬರಿಗಳನ್ನು ಮನೋಜ್ಞವಾಗಿ ಹೃದಯ ಸ್ಪರ್ಶಿ ಯಾಗಿ ಬರೆಯಲು ಪ್ರೇರಣೆಯಾಯಿತು.

ಅಂದಿನ ಪ್ರಸಿದ್ಧ ಪತ್ರಿಕೆಯಾಗಿದ್ದ 'ವಿಶ್ವಕರ್ನಾಟಕ'ದ ಸಹಸಂಪಾದಕರಾಗಿ ಕಾರ್ಯನಿರ್ವಹಿಸಿದ್ದ ಅವರು ಆ ಅನುಭವದಿಂದಲೇ 'ಮುಂಜಾವಿನಿಂದ ಮುಂಜಾವು' ಎಂಬ ಕಾದಂಬರಿಯನ್ನು ರಚಿಸಿ ಅದರಲ್ಲಿ ಪತ್ರಕರ್ತರ ಜೀವನದ ಬಗ್ಗೆ ವಿಶದವಾಗಿ ಚಿತ್ರಿಸಿದರು.

ಕಾದಂಬರಿ, ಕಥಾಸಂಕಲನ, ನಾಟಕ, ಜೀವನ ಚರಿತ್ರೆ ಓೀಗೆ ಹತ್ತು ಹಲವು ಪ್ರಾಕಾರಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ.

ಹಂಸಗೀತೆ, ಹಿಂದಿ ಮತ್ತು ಕನ್ನಡದಲ್ಲಿ ತಯಾರಾಗಿ ಎರಡೂ ಭಾಷೆಗಳಲ್ಲಿ ರಾಷ್ಟ್ರಪ್ರಶಸ್ತಿಯನ್ನು ಗಳಿಸಿದೆ.


ಚಂದವಳ್ಳಿಯ ತೋಟ, ಚಕ್ರತೀರ್ಥ, ನಾಗರಹಾವು, ಮಾರ್ಗದರ್ಶಿ, ಪುನರ್ಜನ್ಮ ಕಾದಂಬರಿಗಳು ಚಲನಚಿತ್ರಗಳಾಗಿವೆ.

ಕನ್ನಡ ಚಳುವಳಿಯ ಅನೇಕ ಹೋರಾಟಗಳಲ್ಲಿಯೂ ಭಾಗವಹಿಸಿದ್ದ ತ.ರಾ.ಸುರವರು ಕೆಲವು ವರ್ಷ ಕನ್ನಡ ಪಕ್ಷದ ಅಧ್ಯಕ್ಷರೂ ಆಗಿದ್ದರು. ಗೋಕಾಕ್ ಚಳುವಳಿಯಲ್ಲೂ ಭಾಗವಹಿಸಿದ್ದರು. ರಾಜ್ಯಸಾಹಿತ್ಯ ಅಕಾಡಮಿ ಹಾಗೂ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿಗಳಿಗೂ ಭಾಜನರಾಗಿದ್ದರು. ಕನ್ನಡ ಸಾಹಿತ್ಯಪರಿಷತ್ತಿನ ಸುವರ್ಣ ಮಹೋತ್ಸವದ ಆಚರಣೆಯ ಸಂದರ್ಭದಲ್ಲಿ 'ಶ್ರೇಷ್ಠ ಕಾದಂಬರಿಕಾರ' ಗೌರವಕ್ಕೆ ಪಾತ್ರರಾಗಿದ್ದರು.

ಮೈಸೂರು ಪುರಸಭೆಯ ಸದಸ್ಯರಾಗಿ ಒಂದು ಅವಧಿಗೆ ಆಯ್ಕೆಗೊಂಡು ಜನ ಮೆಚ್ಚುವ ರೀತಿಯಲ್ಲಿ ಕಾರ್ಯ ನಿರ್ವಹಿಸಿದ್ದರು. ರಾಜ್ಯ ಸಾಹಿತ್ಯ ಅಕಾಡೆಮಿ ಹಾಗೂ ಮೈಸೂರು ವಿ.ವಿ. ಸೆನೆಟ್‌ಗೆ ಸದಸ್ಯರಾಗಿ ಸರ್ಕಾರದಿಂದ ನಾಮಕರಣಗೊಂಡಿದ್ದರು.

ಸು. ರಂ. ಎಕ್ಕುಂಡಿ

ಜನನ : 20.1.1923 ನಿಧನ : 20.8.1995



ಸುಬ್ಬಣ್ಣ ರಂಗನಾಥ ಎಕ್ಕುಂಡಿ – ಸು ರಂ. ಎಕ್ಕುಂಡಿಯವರು ಹುಬ್ಬಳ್ಳಿ ಹಾಗೂ ಸಾಂಗಲಿಯಲ್ಲಿ ವಿದ್ಯಾಭ್ಯಾಸವನ್ನು ಕೈಗೊಂಡು 1944ರಲ್ಲಿ ಮುಂಬಯಿ ವಿಶ್ವವಿದ್ಯಾಲಯದಿಂದ ಬಿ.ಎ. ಪದವಿಯನ್ನು ಗಳಿಸಿದರು. ತಮ್ಮ ತಂದೆಯವರಂತೆಯೇ ಅವರೂ ಸಹ ಅಧ್ಯಾಪಕ ವೃತ್ತಿಯನ್ನು ಕೈಗೊಂಡು ಬಂಕಿಕೊಡ್ಲದ ಆನಂದಾಶ್ರಮದ ಮಾಧ್ಯಮಿಕ ಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿ 35 ವರ್ಷಗಳ ಕಾಲ ಸೇವೆಯನ್ನು ಸಲ್ಲಿಸಿದರು.

ವಿದ್ಯಾರ್ಥಿ ದೆಸೆಯಿಂದಲೆ ಸಾಹಿತ್ಯಾಸಕ್ತಿಯನ್ನು ಹೊಂದಿದ್ದ ಅವರು ಕವನಗಳನ್ನು ರಚಿಸತೊಡಗಿದರು. ನವ್ಯ ಕವಿತೆ, ಕಾವ್ಯ ವಿಮರ್ಶೆಗಳನ್ನು

ರಚಿಸಿರುವುದೇ ಅಲ್ಲದೆ ರಾಮಾಯಣ, ಮಹಾಭಾರತ, ಭಾಗವತ ಕಥೆಗಳನ್ನು ಆಧಾರವಾಗಿಟ್ಟುಕೊಂಡು ಕಥನ ಕವನಗಳನ್ನು ಬರೆದರು.

ಶ್ರೀ ಆನಂದ ತೀರ್ಥರು (ಖಂಡ ಕಾವ್ಯ) ಪು.ತಿ.ನ. ಮಧ್ವಮುನಿ (ವಿಮರ್ಶೆ) ನೆರಳು (ಸಂಕಲನ) ಪ್ರತಿಬಿಂಬಗಳು, ಸಂತಾನ, ಬೆಳ್ಳಕ್ಕಿಗಳು ಹೂವಾಡಿಗರ ಹುಡುಗ, ಸಂತಾನ (ಮೇರುಕೃತಿ) ಲೆನಿನ್ನನ ನೆನಪಿಗಾಗಿ ಹಾಗೂ ಕೆಂಬಾವುಟ ಸಾಹಿತ್ಯ ಲೋಕಕ್ಕೆ ಇವರು ನೀಡಿರುವ ಕೊಡುಗೆಗಳು.


ಕೇಂದ್ರ ಸರ್ಕಾರದ ಫೆಲೋಷಿಪ್ ಪಡೆದು ವಾದಿರಾಜಕೃತಿಗಳ ಸಂಶೋಧನೆಯನ್ನು ಮಾಡಿದ್ದಾರೆ.

1974ರಲ್ಲಿ ರಾಜ್ಯ ಶಿಕ್ಷಕ ಪ್ರಶಸ್ತಿ 1978ರಲ್ಲಿ ಸೋವಿಯಟ್ ಲ್ಯಾಂಡ್ ನೆಹರು ಪ್ರಶಸ್ತಿ ಇವರಿಗೆ ದೊರೆತಿದೆ. ಇವರ ಮತ್ಸ್ಯಗಂಧಿ ಕವನಕ್ಕೆ 1975ರಲ್ಲಿ ರಾಜ್ಯಸಾಹಿತ್ಯ ಅಕಾಡಮಿ ಪ್ರಶಸ್ತಿ ಪ್ರಾಪ್ತವಾಗಿದೆ.

1991ರಲ್ಲಿ ಬರೆದ 'ಬಕುಲದ ಹೂವುಗಳು' ಕವನ ಸಂಕಲವನ್ನು ತಮ್ಮ ಗುರು ವಿನಾಯಕ ಕೃಷ್ಣ ಗೋಕಾಕರಿಗೆ ಅರ್ಪಿಸಿದರು. ಈ ಕೃತಿಗೆ 1992ರಲ್ಲಿ ಕೇಂದ್ರಸಾಹಿತ್ಯ ಅಕಾಡಮಿ ಪ್ರಶಸ್ತಿಯ ಗೌರವ ಲಭಿಸಿದೆ.

ಎಲ್. ಎಸ್. ಶೇಷಗಿರಿರಾವ್

ಜನನ : 16.2.1925



16–2–1925ರಂದು ಬೆಂಗಳೂರಿನಲ್ಲಿ ಜನಿಸಿದ ಶ್ರೀ ಶೇಷಗಿರಿರಾಯರು ಇಂಗ್ಲೀಷ್ ಪ್ರಾಧ್ಯಾಪಕರಾಗಿ ವಿದ್ಯಾರ್ಥಿಗಳಿಂದ ಅಪಾರವಾದ ಗೌರವಕ್ಕೆ ಪಾತ್ರ ರಾಗಿದ್ದಾರೆ. ಕನ್ನಡದ ಖ್ಯಾತ ಲೇಖಕರಾದ ಅವರು ಸಾಹಿತ್ಯದ ಹಲವು ಪ್ರಾಕಾರ ಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಎಲ್.ಎಸ್.ಎಸ್.ರವರು ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಕೊಟ್ಟಿರುವ ಕೊಡುಗೆ ಅಪಾರ.

ತಂದೆಯವರ ಸಾಹಿತ್ಯದ ಒಲುಮೆ ಶೇಷಗಿರಿ ರಾಯರ ಮೇಲೂ ಅಪಾರ ಪ್ರಭಾವವನ್ನು ಬೀರಿತು. ಪರಿಣಾಮ ತಂದೆಯವರ ಗ್ರಂಥಭಂಡಾರದಲ್ಲಿನ ಎಲ್ಲಾ ಗ್ರಂಥಗಳನ್ನು ಓದಿದರು.

ಎಸ್.ಎಸ್.ಎಲ್.ಸಿ. ಯಲ್ಲಿ ಒಳ್ಳೆಯ ಅಂಕ ಪಡೆದು ಇಂಜಿನಿಯರಿಂಗ್ ಸೀಟ್ ದೊರಕಿದರೂ ಸಹ ಇಂಗ್ಲೀಷ್ ಆನರ್ಸ್‌ಗಾಗಿ ಸೆಂಟ್ರಲ್ ಕಾಲೇಜಿಗೆ ಸೇರಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದರು.

ಅಧ್ಯಾಪಕ ವೃತ್ತಿಗೆ ಸೇರಿದ ಶೇಷಗಿರಿರಾಯರು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಪ್ರವೇಶಿಸಿದರು. ಖ್ಯಾತ ವಿಮರ್ಶಕರಾಗಿ, ಗ್ರಂಥ ಸಂಪಾದಕರಾಗಿ, ಸಂಕಲನಕಾರರಾಗಿ, ಅನುವಾದಕರಾಗಿ, ಕಾದಂಬರಿಕಾರರಾಗಿ, ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ಪ್ರಖ್ಯಾತರಾದರು.

ಭಾರತ ಭಾರತಿ ಪುಸ್ತಕ ಸಂಪದ, ಕಿರಿಯರ ವಿಶ್ವಕೋಶ, ಸಪ್ನ ದಿವ್ಯ ದರ್ಶನ ಮಾಲೆ, ಜ್ಞಾನ ದೀಪಮಾಲೆಗಳಡಿ ನೂರಾರು ಜನಪ್ರಿಯ ಕೃತಿಗಳನ್ನು ಸಂಪಾದಿಸಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಯಾಗಿ, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಗೌರವ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

4 ಕಥಾ ಸಂಕಲನ, 20 ಸಾಹಿತ್ಯ ವಿಮರ್ಶೆ, 10 ಮಕ್ಕಳ ಸಾಹಿತ್ಯ, 10 ಅನುವಾದ, 3 ಇಂಗ್ಲೀಷ್ ಕೃತಿಗಳು ಇವರ ಲೇಖನಿಯಿಂದ ಮೂಡಿಬಂದಿವೆ. ಇಂಗ್ಲೀಷ್-ಕನ್ನಡ, IBH ಕನ್ನಡ-ಕನ್ನಡ-ಇಂಗ್ಲೀಷ್ ನಿಘಂಟುಗಳನ್ನು ರಚಿಸಿದ್ದಾರೆ.

ಇಂಗ್ಲೀಷ್ ಸಾಹಿತ್ಯ ಚರಿತ್ರೆ, ಹಿಸ್ಟರಿ ಆಫ್ ಕನ್ನಡ ಲಿಟರೇಚರ್, ಬೆಂಗಳೂರು ದರ್ಶನ, ಭಾರತೀಯ ಸಾಹಿತ್ಯ ಸಮೀಕ್ಷೆ, ಹೊಸ ಕನ್ನಡ ಸಾಹಿತ್ಯ ಸಮೀಕ್ಷೆ, ಮಾಸ್ತಿ ಜೀವನ ಮತ್ತು ಸಾಹಿತ್ಯ, ಮಹಾಭಾರತ ನಾಲ್ಕು ಸಂಪುಟಗಳು, ಮುಂತಾದವು ಇವರು ರಚಿಸಿರುವ ಕೆಲವು ಸಾಹಿತ್ಯ ಕೃತಿಗಳು.

ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ, ರಾಜ್ಯಸಾಹಿತ್ಯ ಅಕಾಡಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಮುಂತಾದ ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

2007ರ ಫೆಬ್ರವರಿಯಲ್ಲಿ ಉಡುಪಿಯಲ್ಲಿ ನಡೆದ 74ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು.

ಜಿ. ಎಸ್. ಶಿವರುದ್ರಪ್ಪ

ಜನನ : 7.2.1926 **ನಿಧನ : 23.12.2013**



ಜಿ.ಎಸ್.ಎಸ್. ಎಂದೇ ಕರೆಸಿಕೊಳ್ಳುವ ಜಿ.ಎಸ್. ಶಿವರುದ್ರಪ್ಪನವರು ಮೈಸೂರು ವಿಶ್ವವಿದ್ಯಾಲಯದಿಂದ ಎಂ.ಎ. ಪದವಿಯನ್ನು ಪಡೆದ ನಂತರ ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಅಧ್ಯಾಪಕವೃತ್ತಿಯನ್ನು ಕೈಗೊಂಡರು. ವಿವಿಧ ಕಾಲೇಜುಗಳಲ್ಲಿ ಅಧ್ಯಾಪಕರಾಗಿ ವೃತ್ತಿ ಜೀವನವನ್ನು ನಡೆಸಿದ ಅವರು ಹೈದರಾಬಾದಿನ ಉಸ್ಮಾನಿಯಾ ವಿದ್ಯಾಲಯ ಕನ್ನಡ ವಿಭಾಗದ ಮುಖ್ಯಸ್ಥರಾಗಿಯೂ ಕೆಲಕಾಲ ಕೆಲಸ ಮಾಡಿ ಮತ್ತೆ ಮಹಾರಾಜ ಕಾಲೇಜಿಗೆ ಬಂದು 1966ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸೇರಿದರು. 1970ರಿಂದ ಅಲ್ಲಿಯ

ಕನ್ನಡ ಅಧ್ಯಯನ ಕೇಂದ್ರದ ಮುಖ್ಯಸ್ಥರಾದರು. ಕನ್ನಡದ-ಅತ್ಯಂತ ಪ್ರಭಾವಶಾಲಿ ಅಧ್ಯಾಪಕರ ಸಾಲಿನಲ್ಲಿ ಶಿವರುದ್ರಪ್ಪನವರು ಸ್ಥಾನ ಪಡೆದಿದ್ದಾರೆ.

ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ನಿರ್ದೇಶಕರಾಗಿ ಮತ್ತು ಕನ್ನಡ ಸಾಹಿತ್ಯ ಅಕಾಡಮಿಯ ಅಧ್ಯಕ್ಷರಾಗಿ ಸಾಹಿತ್ಯ ಸಂಬಂಧದ ಚಟುವಟಿಕೆಗಳನ್ನು ಸಂಯೋಜಿಸಿ, ಸಂಘಟಿಸಿ, ನಿರ್ವಹಿಸಿದ್ದಾರೆ.

ತಮ್ಮ ವಿದ್ಯಾಗುರುಗಳಾದ ತ.ಸು.ಶಾಮರಾಯರು, ಕುವೆಂಪುರವರು ಹಾಗೂ ತೀನಂ.ಶ್ರೀ ಯವರನ್ನು ಅತ್ಯಂತ ಗೌರವ ಭಾವದಿಂದ ಕಾಣುತ್ತಿದ್ದರು. ಇವರ ಅತ್ಯಂತ ಜನಪ್ರಿಯ ಕವನ "ಎದೆ ತುಂಬಿ ಹಾಡಿದೆನು ಅಂದು ನಾನು" ಕವನವು ತ.ಸು ಶಾಮರಾಯರನ್ನು ಉದ್ದೇಶಿಸಿ ಬರೆದದ್ದು.

ತಮ್ಮ ಜೀವನದಲ್ಲಿ "ಕುವೆಂಪು ಗಾಳಿ ಬೆಳಕು ಇದ್ದಂತೆ ತ.ಸು. ಶಾಮ ರಾಯರು ನೀರು ನೆಲ ಇದ್ದಂತೆ" ಎಂದು ಸದಾ ನೆನೆಯುತ್ತಿದ್ದರು. ಕನ್ನಡದ ಕೊರಳಲ್ಲಿ ಶ್ರೀ ಕಂಡಿಗೆ ಎಂದು ತೀ.ನಂ.ಶ್ರೀಯವರನ್ನು ಕುರಿತು ಹೇಳುತ್ತಿದ್ದರು.

ಸಾಮಗಾನ, ಒಲವು ಚೆಲುವು, ದೇವಶಿಲ್ಪಿ, ಗೋಡೆ, ಅನಾವರಣ, ದೀಪದ ಹೆಜ್ಜೆ, ಮೊದಲಾದುವು ಅವರು ರಚಿಸಿರುವ ಕೆಲವು ಕವನ ಸಂಕಲನಗಳು. 'ಸೌಂದರ್ಯ ಸಮೀಕ್ಷೆ' ಮಹಾಪ್ರಬಂಧ, ಕನ್ನಡ ಸಾಹಿತ್ಯ ಸಮೀಕ್ಷೆ ಕನ್ನಡ ಕವಿಗಳ ಕಾವ್ಯ ಕಲ್ಪನೆ ಅವರು ರಚಿಸಿರುವ ಇತರ ಕೃತಿಗಳು.

"ಮಾಸ್ಕೊದಲ್ಲಿ 22 ದಿನ', 'ಗಂಗೆಯ ಶಿಖರಗಳಲ್ಲಿ' ಹಾಗೂ ಅಮೆರಿಕಾದಲ್ಲಿ ಕನ್ನಡಿಗ (ಪ್ರವಾಸ ಕಥನಗಳು) ಕರ್ಮಯೋಗಿ ಸಿದ್ಧರಾಮನ ಕುರಿತ ಜೀವನ ಚಿತ್ರ, ಚತುರಂಗ (ಆತ್ಮಕಥನ) ಇವರು ಬರೆದಿರುವ ಇನ್ನಿತರ ಕೃತಿಗಳು.

ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ಸೋವಿಯತ್ ನೆಹರು ಪ್ರಶಸ್ತಿ ರಾಜ್ಯ ಸಾಹಿತ್ಯ ಪುರಸ್ಕಾರ, ಕನ್ನಡ ರಾಜ್ಯೋತ್ಸವ ಪ್ರಶಸ್ತಿಗಳು ಇವರಿಗೆ ದೊರತಿವೆ.

'ರಾಷ್ಟ್ರಕವಿ' ಪ್ರಶಸ್ತಿಯಿಂದ ಗೌರವಿತರಾಗಿದ್ದ ಜಿ.ಎಸ್.ಎಸ್. ಪಂಪ ಪ್ರಶಸ್ತಿಗೂ ಭಾಜನರಾಗಿದ್ದರು.

1992ರಲ್ಲಿ ದಾವಣಗೆರೆಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ವೈ.ಎನ್.ಕೆ.

ಜನನ : 16.5.1926 ನಿಧನ : 15.10.1999



ಯಳಂದೂರು ನರಸಿಂಹಮೂರ್ತಿ ಕೃಷ್ಣಮೂರ್ತಿಯವರು ವೈಎನ್ಕೆ ಎಂಬ ಮೂರು ಅಕ್ಷರಗಳಿಂದಲೆ ಕನ್ನಡದ ಓದುಗರಿಗೆ ಚಿರಪರಿಚಿತರಾದವರು.

ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ 1946ರಲ್ಲಿ ಬಿ.ಎಸ್ಸಿ ಪದವಿಯನ್ನು ಪಡೆದರು. ಕನ್ನಡದಲ್ಲಿ ಮೊದಲ ದರ್ಜೆಯ ಅಂಕಗಳನ್ನು ಗಳಿಸಿದ ಖ್ಯಾತಿ ಅವರದಾಗಿತ್ತು. ವಿದ್ಯಾರ್ಥಿ ದೆಸೆಯಿಂದಲೇ ಪತ್ರಿಕೋದ್ಯಮದಲ್ಲಿ ಅಪಾರ ಆಸಕ್ತಿ ತಾಳಿದ್ದ ಅವರು 'ದೇಶಬಂಧು' ದಿನಪತ್ರಿಕೆ, 'ಛಾಯಾ' ಮಾಸಪತ್ರಿಕೆಗಳಲ್ಲಿ ವೃತ್ತಿ ಜೀವನವನ್ನು ಆರಂಭಿಸಿದರು. 1949ರಲ್ಲಿ 'ಪ್ರಜಾವಾಣಿ' ಪತ್ರಿಕೆಗೆ ವರದಿಗಾರರಾಗಿ ಸೇರಿದ ಅವರು ಹಂತ ಹಂತವಾಗಿ ಮೇಲೇರಿ 1977ರಲ್ಲಿ ಸಂಪಾದಕ ಹುದ್ದೆಯನ್ನು ಅಲಂಕರಿಸಿದರು. ಒಂದು ವರ್ಷಕಾಲ ಆ ಪತ್ರಿಕೆಯ ಸಲಹೆಗಾರರಾಗಿಯೂ ಕರ್ತವ್ಯ ನಿರ್ವಹಿಸಿದರು.

1971ರಲ್ಲಿ 'ಕನ್ನಡ ಪ್ರಭ' ಪತ್ರಿಕೆಯ ಸಂಪಾದಕರಾಗಿ ಆ ಪತ್ರಿಕೆಯ ಸಾಹಿತ್ಯಿಕ ಮೌಲ್ಯವನ್ನು ಹೆಚ್ಚಿಸಿದರು.

1977ರಲ್ಲಿ ಅಂದಿನ ಪ್ರಧಾನಮಂತ್ರಿ ಮೊರಾರ್ಜಿ ದೇಸಾಯಿಯವರೊಂದಿಗೆ ರಷ್ಯಾ ದೇಶದ ಪ್ರವಾಸಕ್ಕೆ ಹೋಗಿದ್ದರು ಅಲ್ಲದೆ ವಿದೇಶಗಳ ಆಹ್ವಾನದಂತೆ ಅಮೆರಿಕ, ಜರ್ಮನಿ, ಬ್ರಿಟನ್, ಕೆನಡಾ, ಮುಂತಾದ ಅನೇಕ ದೇಶಗಳಿಗೂ ಪ್ರವಾಸ ಹೋಗಿದ್ದಾರೆ.

ಫೋಟೋಗ್ರಫಿ, ಚಿತ್ರಕಲೆ, ಟೇಬಲ್ ಟೆನಿಸ್, ಗಾಲ್ಫ್, ಯೋಗ–ಹೀಗೆ ಹತ್ತು ಹಲವು ಪ್ರಕಾರಗಳಲ್ಲಿ ಆಸಕ್ತಿ ಹೊಂದಿದ್ದರು.

ನಾಟಕ ಹಾಗೂ ಚಲನಚಿತ್ರಗಳಲ್ಲಿಯೂ ಅಪಾರ ಒಲವು ಹೊಂದಿದ್ದರು. ಸಂಸ್ಕಾರ, ವಂಶವೃಕ್ಷ, ಹಂಸಗೀತೆ, ಕನ್ನೇಶ್ವರರಾಮ, ಫಣಿಯಮ್ಮ ಮುಂತಾದ ಚಿತ್ರಗಳ ಯಶಸ್ಸಿಗೆ ಅವರು ಕಾರಣರಾಗಿದ್ದರು. ನಾಲ್ಕನೆಯ ಅಂತರರಾಷ್ಟ್ರೀಯ ಮಕ್ಕಳ ಚಲನಚಿತ್ರೋತ್ಸವ ಪ್ರಕಾಶನ ಸಮಿತಿಗೂ ಅಧ್ಯಕ್ಷರಾಗಿದ್ದರು.

ವೈಎನ್‌ಕೆಯವರ ವಿಶೇಷತೆ ಎಂದರೆ ಕಾವ್ಯ ಸಾಹಿತ್ಯವನ್ನು ಸೃಷ್ಟಿಸುವುದರ ಜೊತೆ ಜೊತೆಗೆ ಅನೇಕ ಉದಯೋನ್ಮುಖ ಲೇಖಕರ ಬೆಳವಣಿಗೆಗೆ ಕಾರಣರಾಗಿದ್ದಾರೆ. ನವ್ಯ ಸಾಹಿತ್ಯಕ್ಕೆ ಅವರು ಕೊಟ್ಟ, ಬೆಂಬಲ, ಪ್ರೋತ್ಸಾಹ ಅಪಾರ ಅದನ್ನು ಜನಪ್ರಿಯ ಗೊಳಿಸುವುದರಲ್ಲಿಯೂ ಅವರು ಸಮರ್ಥವಾಗಿ ದುಡಿದಿದ್ದಾರೆ. ಅವರು ಬರೆಯುತ್ತಿದ್ದ 'ವಂಡರ್ ಕಣ್ಣು' ಅತ್ಯಂತ ಜನಪ್ರಿಯ ಅಂಕಣ. ಹತ್ತಾರು ಪುಸ್ತಕಗಳ ಲೇಖಕರಾಗಿರುವ ಇವರು ಜಾಕ್‌ಲಂಡನ್, ಮುಂದೇನು ರಾಮನ್, ಇದು ಸುದ್ದಿ ಇದು ಸುದ್ದಿ, ಹೈಡ್ ಪಾರ್ಕ್, ಬರಲಿದೆ ಬರಲಿದೆ, ಪತ್ರಿಕೋದ್ಯಮಕ್ಕೆ ಸಂಬಂಧಪಟ್ಟವು. ಪದ್ಯ ಇಷ್ಟು ಲೈಟ್ ಆದರೆ ಹೇಗೆ ಸ್ವಾಮಿ, ತೀರ್ಥರೂಪ, 'ವಂಡರ್‌ಕಣ್ಣು' ಮೊದಲಾದವು ವೈ.ಎನ್.ಕೆ.ಯವರ ಪ್ರತಿಭೆಗೆ ಸಾಕ್ಷಿ.

ಪತ್ರಿಕೋದ್ಯಮದ ಇವರ ಸೇವೆಗಾಗಿ ರಾಜ್ಯೋತ್ಸವ ಪ್ರಶಸ್ತಿ (1986). ರಾಜ್ಯ ಪತ್ರಿಕಾ ಅಕಾಡೆಮಿ ಪ್ರಶಸ್ತಿ (1975) ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1988 ಹಾಗೂ 1995)ಗಳು ಲಭಿಸಿವೆ.

ಪದಗಳನ್ನು ಪನ್ ಮಾಡುತ್ತಾ ಪದದಾಟ ಆಡುವುದಕ್ಕೆ ಹೆಸರಾದ ಇವರು ಹಾಸ್ಯ ಹಾಗೂ ಲಲಿತ ಸಾಹಿತ್ಯವನ್ನು ತಮ್ಮ ವಿಶಿಷ್ಟ ಶೈಲಿಯಿಂದ ಶ್ರೀಮಂತಗೊಳಿಸಿದರು.

ಶಂಕರ ಮೊಕಾಶಿ ಪುಣೇಕರ

ಜನನ : 8.5.1928 ನಿಧನ : 11.8.2004



ಯೇಟ್ಸ್ ವಿದ್ವಾಂಸರೆಂದೇ ವಿಶ್ವಮನ್ನಣೆ ಪಡೆದಿರುವ ಶಂಕರ ಮೊಕಾಶಿ ಪುಣೇಕರರು, ಕನ್ನಡ ಹಾಗೂ ಇಂಗ್ಲಿಷ್ ಎರಡೂ ಭಾಷೆಗಳ ಮೇಲೆ ಸಮಾನ ಹಿಡಿತ ಸಾಧಿಸಿದ್ದ ಪ್ರತಿಭಾನ್ವಿತರು. ಅಷ್ಟೇ ಅಲ್ಲ ಸಂಸ್ಕೃತದಲ್ಲಿಯೂ ಪರಿಣಿತರಾಗಿದ್ದರು.

ಶಿಕ್ಷಕರಾಗಿ, ಪ್ರಾಧ್ಯಾಪಕರಾಗಿ, ಕವಿಗಳಾಗಿ, ಕಾದಂಬರಿಕಾರರಾಗಿ, ವಿಮರ್ಶಕರಾಗಿ, ಅನುವಾದಕರಾಗಿ ಸಂಗೀತ ವಿಮರ್ಶಕರಾಗಿ, ಲಿಪಿ ಸಂಶೋಧಕರಾಗಿ ಹೀಗೆ ಹತ್ತು ಹಲವು ಹೆಚ್ಚುಗಾರಿಕೆಗಳಿಗೆ ಪಾತ್ರರಾಗಿದ್ದವರು.

ಯೇಟ್ಸ್ ಬಗ್ಗೆ ಇವರು ಬರೆದಿರುವ ಮಹಾಪ್ರಬಂಧವು ಈ ಬಗ್ಗೆ ಪ್ರಕಟವಾಗಿರುವ ಅತ್ಯುತ್ತಮವೆಂದು ಪರಿಗಣಿತವಾಗಿರುವ ಎರಡು ಪ್ರಬಂಧಗಳಲ್ಲಿ ಒಂದೆಂದು ಪರಿಗಣಿಸಲ್ಪಟ್ಟಿದೆ. ಮತ್ತೊಂದು ಹರಿವಂಶರಾಯ್ ಬಚ್ಚನ್ (ಖ್ಯಾತನಟ ಅಮಿತಾಬ್ ಬಚ್ಚನ್‌ರವರ ತಂದೆ)ರವರದು. 1970ರಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ರೀಡರ್ ಆಗಿ ಹತ್ತು ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಆಂಗ್ಲ ಭಾಷೆಯಲ್ಲಿ 19 ಕೃತಿಗಳನ್ನು ರಚಿಸಿದ್ದಾರೆ.

ಇಪ್ಪತ್ತು ಸಾವಿರ ಸಾಲುಗಳನ್ನು ಹೊಂದಿರುವ ಕುವೆಂಪುರವರ ಮೇರುಕೃತಿ ಶ್ರೀ ರಾಮಾಯಣ ದರ್ಶನಂನ್ನು ಇಂಗ್ಲೀಷ್‌ಗೆ ಅನುವಾದ ಮಾಡಿರುವುದು ಮೊಕಾಶಿಯವರ ಸಾಮರ್ಥ್ಯಕ್ಕೆ ದೊಡ್ಡ ಸಾಕ್ಷಿಯಾಗಿದೆ. ಅವರ ಅರವತ್ತನೇ ವರ್ಷದ ವಯಸ್ಸಿನಲ್ಲಿ ಎರಡು ವರುಷಗಳ ಕಾಲ, ತಪಸ್ಸಿನಂತೆ ಹಗಲು ರಾತ್ರಿ ಅನುವಾದ ಕಾರ್ಯವನ್ನು ಕೈಗೊಂಡ ಅವರು ತಾವೇ ಸ್ವತಃ ಟೈಪ್ ಮಾಡಿದ್ದು ಅವರ ಕಾರ್ಯದ ಮಹತ್ತನ್ನು ತೋರಿಸುತ್ತದೆ.

ಕಾಳಿದಾಸನ ಋತುಸಂಹಾರವನ್ನು ಇಂಗ್ಲಿಷಿಗೆ ಅನುವಾದಿಸಿದ್ದಾರೆ. ಮೊಕಾಶಿಯವರು ಮೂರು ಮಹತ್ವದ ಕಾದಂಬರಿಗಳನ್ನು ಓದುಗರಿಗೆ ನೀಡಿದ್ದಾರೆ. ಅವುಗಳಲ್ಲಿ 'ಗಂಗವ್ವ ಮತ್ತು ಗಂಗಾಮಾಯಿ' ತುಂಬ ಪ್ರಸಿದ್ಧ ವಾದುದು. ತಮ್ಮ ಗೃಹಕಲಹವನ್ನೇ ಮುಖ್ಯ ವಿಷಯವಾಗಿಟ್ಟುಕೊಂಡು ಬರೆದ ಈ ಕಾದಂಬರಿ ಅತ್ಯಂತ ಜನಪ್ರಿಯವಾಯಿತು. ಚಲನಚಿತ್ರವೂ ಆಗಿ ಹೆಸರು ಮಾಡಿತು. ಕನ್ನಡದ ಮಹತ್ವದ ಕಾದಂಬರಿಗಳಲ್ಲಿ ಒಂದೆಂದು ಪರಿಗಣಿತವಾದ ಈ ಕಾದಂಬರಿ ಭಾರತದ ಹದಿನಾರು ಭಾಷೆಗಳಿಗೆ ಅನುವಾದಗೊಂಡಿದೆ.

ಇವರ ಮತ್ತೊಂದು ಕಾದಂಬರಿ 'ಅವಧೇಶ್ವರಿ' ಕೇಂದ್ರ ಸಾಹಿತ್ಯ ಅಕಾಡೆಮಿಯ 1988ರ ಪ್ರಶಸ್ತಿಯನ್ನು ಗಳಿಸಿದೆ. ಮತ್ತೊಂದು ಕಾದಂಬರಿ 'ನಟಿ ನಾರಾಯಣಿ'. 'ಮಾಯಿಯ ಮೂರು ಮುಖಗಳು' ಮೊಕಾಶಿಯವರ ಪ್ರಸಿದ್ಧ ಕವನ ಸಂಕಲನ. 'ಪಾಶ್ಚಾತ್ಯ ವಿಮರ್ಶೆಯ ಇತಿಹಾಸ', 'ಬೇಂದ್ರೆಯವರ ಕಾವ್ಯ ಮೀಮಾಂಸೆ' ಹಾಗೂ 'ಸಾಹಿತ್ಯ ಮತ್ತು ಅಭಿರುಚಿ' ಮೊಕಾಶಿಯವರ ವಿಮರ್ಶಾ ಕೃತಿಗಳು.

ರಾಜ್ಯ ಮತ್ತು ಕೇಂದ್ರ ಅಕಾಡೆಮಿ ಸದಸ್ಯತ್ವವನ್ನು ನಿರ್ವಹಿಸಿದ್ದ ಮೊಕಾಶಿಯವರು 1984ರಲ್ಲಿ ಯುಗೊಸ್ಲೇವಿಯಾದಲ್ಲಿ ನಡೆದ ವಿಶ್ವಕಾವ್ಯ ಸಮ್ಮೇಳನದಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು ರಾಜ್ಯ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಗಳನ್ನು ಪಡೆದಿದ್ದಾರೆ

ತ್ರಿವೇಣಿ

ಜನನ : 1.9.1928 **ನಿಧನ : 29.7.1963**



ತ್ರಿವೇಣಿ ಎಂದೇ ಸಾಹಿತ್ಯ ಪ್ರಿಯರಲ್ಲಿ ಜನಪ್ರಿಯವಾಗಿರುವ ತ್ರಿವೇಣಿಯವರ ಹುಟ್ಟು ಹೆಸರು ಅನಸೂಯ.

ಮೈಸೂರು ಮಹಾರಾಜ ಕಾಲೇಜಿನಲ್ಲಿ ಬಿ.ಎ.ಪದವಿಯನ್ನು ಪಡೆದ ಅವರು ಮನಃಶಾಸ್ತ್ರವನ್ನು ವಿಶೇಷ ವಿಷಯವಾಗಿ ಆರಿಸಿಕೊಂಡಿದ್ದರು.

ಸಾಹಿತ್ಯದ ಹಿನ್ನೆಲೆಯ ಕುಟುಂಬದಿಂದ ಬಂದಿದ ಅವರ ಹತ್ತಿರದ ಬಂಧುಗಳಲ್ಲಿ ಪ್ರಸಿದ್ಧ ಬರಹಗಾರರಿದ್ದರು. ಅವರ ದೊಡ್ಡಪ್ಪ 'ಕನ್ನಡದ ಕಣ್ವ',

'ಆಚಾರ್ಯ ಪುರುಷ' ಎಂದು ಖ್ಯಾತರಾದ ಬಿ.ಎಂ.ಶ್ರೀ ಕಂಠಯ್ಯನವರು. ಪ್ರಸಿದ್ಧ ಕಾದಂಬರಿಕಾರ್ತಿ ವಾಣಿ, ಅವರ ಸಮೀಪ ಬಂಧು.

ಸಾಹಿತ್ಯ ರಚನೆಯಲ್ಲಿ ತೊಡಗಿಕೊಂಡ ತ್ರಿವೇಣಿಯವರು ಒಟ್ಟು ರಚಿಸಿದ್ದು 21 ಕಾದಂಬರಿಗಳು, ಮೂರು ಕಥಾಸಂಕಲನಗಳು. ಮೊದಲು ರಚಿಸಿದ್ದು – ಸಾಮಾಜಿಕ ಕಾದಂಬರಿ ಹೂವು ಹಣ್ಣು. ನಂತರ ಸಾಲುಸಾಲಾಗಿ ಬರೆದದ್ದು ಅಪಸ್ವರ, ಅಪಜಯ, ಹೃದಯಗೀತೆ, ವಸಂತಗಾನ, ಕೀಲುಗೊಂಬೆ, ಕಂಕಣ, ಮುಕ್ತಿ, 'ಬೆಳ್ಳಿಮೋಡ', 'ಹಣ್ಣೆಲೆ ಚಿಗುರಿದಾಗ', 'ಮೊದಲ ಹೆಜ್ಜೆ', 'ತಾವರೆ ಕೊಳ', 'ಬಾಳು ಬೆಳಗಿತು' 'ಅವಳ ಮನೆ', 'ಸೋತುಗೆದ್ದವಳು' ಮುಂತಾದ ಸಾಮಾಜಿಕ ಕಾದಂಬರಿಗಳು.

ಮನೋವೈಜ್ಞಾನಿಕ ವಸ್ತುವಿನ ಆಧಾರದ ಮೇಲೆಯೂ ಇವರು ಕಾದಂಬರಿಗಳನ್ನು ಬರೆದಿದ್ದಾರೆ. ಬೆಕ್ಕಿನ ಕಣ್ಣು, ದೂರದ ಬೆಟ್ಟ, ಶರಪಂಜರ, ಮುಚ್ಚಿದ ಬಾಗಿಲು, ಮುಂತಾದುವು. ಮೂರು ಕಥಾ ಸಂಕಲನಗಳನ್ನು ಬರೆದಿದ್ದಾರೆ. (ಹೆಂಡತಿಯ ಹೆಸರು, ಎರಡು ಮನಸ್ಸು, ಸಮಸ್ಯೆಯ ಮಗು).

ತ್ರಿವೇಣಿಯವರು ಬರೆಯುತ್ತಿದ್ದ ಕಾದಂಬರಿ "ಅವಳಮಗು" ಅದು ಪೂರ್ಣವಾಗುವ ವೇಳೆಗೆ ಅವರು ಅಕಾಲ ಮೃತ್ಯುವಿಗೀಡಾಗಿ, ಲೇಖಕಿ ಎಂ.ಸಿ. ಪದ್ಮಾ ಅವರು ಅದನ್ನು ಪೂರ್ಣಗೊಳಿಸಿದರು.

ತ್ರಿವೇಣಿಯವರು ತಮ್ಮ ಕಾದಂಬರಿಗಳಲ್ಲಿ ಚಿತ್ರಿಸುತ್ತಿದ್ದ ಪಾತ್ರಗಳ ಚಿತ್ರಣದಿಂದ, ಅವುಗಳ ಜೀವಂತಿಕೆಯಿಂದ ಅವರ ಓದುಗರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಕನ್ನಡ ಚಿತ್ರರಸಿಕರೂ ಸಹ ಅವರ ಕಾದಂಬರಿಗಳ ಆಧಾರದ ಮೇಲೆ ಚಿತ್ರಿತವಾದ ಬೆಳ್ಳಿಮೋಡ, ಶರಪಂಜರ, ಹಣ್ಣೆಲೆ ಚಿಗುರಿದಾಗ ಚಿತ್ರಗಳನ್ನು ನೋಡಿ ಮೆಚ್ಚಿದ್ದಾರೆ. ಅಷ್ಟೇ ಅಲ್ಲ, ಬೆಕ್ಕಿನ ಕಣ್ಣು ಕಾದಂಬರಿ ಮಲಯಾಳಂ ಭಾಷೆಯಲ್ಲಿ ಚಿತ್ರಿತವಾಗಿ ಮಲೆಯಾಳೀ ಪ್ರೇಕ್ಷಕರ ಮನವನ್ನು ಗೆದ್ದಿದೆ.

'ಅವಳ ಮನೆ' ಕಾದಂಬರಿಗೆ 'ಸಮಸ್ಯೆಯ ಮಗು' ಕಥಾಸಂಕಲನ ಗ್ರಂಥಗಳಿಗೆ ಕರ್ನಾಟಕ ಸಾಹಿತ್ಯ ಅಕಾಡಮಿ ಬಹುಮಾನ ಲಭಿಸಿದೆ.

ಕೀರ್ತಿನಾಥ ಕುರ್ತಕೋಟಿ

ಜನನ : 13.10.1928 ನಿಧನ : 31.7.2003



"ಹೊಸಗನ್ನಡದ ಸಾಹಿತ್ಯ ಲೋಕದ ವಿಮರ್ಶೆಯ ಭೀಷ್ಮ" ಎಂದೇ ಪ್ರಖ್ಯಾತರಾಗಿದ್ದ ಪ್ರೊ. ಕೀರ್ತಿನಾಥ ಕುರ್ತಕೋಟಿಯವರು ಕನ್ನಡದ ಹೆಸರಾಂತ ವಿಮರ್ಶಕ. 1958ರಲ್ಲಿ ಎಂ.ಎ. ಪದವಿಯನ್ನು ಪಡೆದ ಅವರು ತಮ್ಮ ಬದುಕಿನ ಅರ್ಧದಷ್ಟು ಭಾಗವನ್ನು ಕನ್ನಡ ನಾಡಿನ ಹೊರಗೇ ಕಳೆದಿದ್ದರು. ಗುಜರಾತಿನ ಸರದಾರ್ ಪಟೇಲ್ ವಿಶ್ವವಿದ್ಯಾಲಯದ ಇಂಗ್ಲಿಷ್ ವಿಭಾಗದ ಮುಖ್ಯಸ್ಥರಾಗಿದ್ದರು. ಹೊರನಾಡಿನಲ್ಲಿಯೇ ವಾಸ್ತವ್ಯವಿದ್ದರೂ ತಾಯ್ನಾಡಿನೊಂದಿಗೆ, ಕನ್ನಡ ಭಾಷೆಯೊಂದಿಗೆ ನಿಕಟ ಸಂಪರ್ಕವನ್ನಿಟ್ಟುಕೊಂಡಿದ್ದರು. ನಿವೃತ್ತಿಯ ನಂತರ ಧಾರವಾಡದಲ್ಲಿಯೇ ನೆಲೆಸಿದ್ದರು.

ಪ್ರೊ. ಕುರ್ತಕೋಟಿಯವರು ಕನ್ನಡ, ಸಂಸ್ಕೃತ, ಮರಾಠಿ, ಇಂಗ್ಲಿಷ್ ಸಾಹಿತ್ಯವನ್ನು ತೌಲನಿಕ ದೃಷ್ಟಿಯಿಂದ ಅಭ್ಯಾಸ ಮಾಡಿದ್ದರು. ಆ ಕಾರಣದಿಂದ ಅವರು ಕನ್ನಡದ ಆಧುನಿಕ ಸಾಹಿತ್ಯದ ವಿಮರ್ಶೆಗೆ ಹೊಸ ಹೊಳವು ನೀಡಲು ಸಾಧ್ಯವಾಯಿತು. ಕುಮಾರವ್ಯಾಸ, ಬೇಂದ್ರೆಯವರ ಕಾವ್ಯವನ್ನು ವಿಸ್ತಾರವಾಗಿ, ಆಳವಾಗಿ ಅಧ್ಯಯನ ಮಾಡಿದ್ದರು. ಆಧುನಿಕ ಕನ್ನಡ ಸಾಹಿತ್ಯವನ್ನು ಆಳವಾಗಿ ಅಭ್ಯಾಸ ಮಾಡಬಯಸುವವರು ಪ್ರೊ. ಕುರ್ತಕೋಟಿಯವರ ವಿಮರ್ಶೆಯ ನೆರವಿಲ್ಲದೆ ಮುಂದುವರೆಯುವುದು ಅಸಾಧ್ಯವೆಂಬ ಹಲವರ ಅಭಿಪ್ರಾಯ ಅವರ ಸಾಧನೆ ಸಿದ್ಧಿಗಳ ಹೆಗ್ಗಳಿಕೆ ಎಂದೆನ್ನಬಹುದು. 'ಆಮನಿ', 'ಸ್ವಪ್ನದರ್ಶಿ ಮತ್ತು ಇತರ ನಾಟಕಗಳು', 'ಮಹಾಶ್ವೇತೆಯ ಪ್ರಸಂಗ' 'ಚಂದ್ರಗುಪ್ತ', 'ಕ್ರಿಸ್ತನ ಕೊನೆಯ ಹಂತ' ಕುರ್ತಕೋಟಿಯವರು ರಚಿಸಿರುವ ಕೆಲವು ಪ್ರಮುಖ ನಾಟಕಗಳು.

'ಯುಗಧರ್ಮ ಹಾಗೂ ಸಾಹಿತ್ಯದರ್ಶನ', 'ಮನ್ವಂತರ', 'ನವ್ಯಕಾವ್ಯ ಪ್ರಯೋಗ', 'ಭೃಂಗದ ಬೆನ್ನೇರಿ' 'ವಿಮರ್ಶೆಯ ವಿನಯ' ಕಾದಂಬರಿ, 'ಸಂಸ್ಕೃತಿ ಸ್ಪಂದನ', 'ಶ್ರಾವಣ ಪ್ರತಿಭೆ', 'ವಾಸುದೇವ ಪ್ರಶಸ್ತಿ', 'ಪುಟ ಬಂಗಾರ' ಇವರು ರಚಿಸಿರುವ ವಿಮರ್ಶೆಯ ಮೇರು ಕೃತಿಗಳು.

ಮುಂಬಯಿ ಸರ್ಕಾರದಿಂದ ಆಮನಿ ನಾಟಕಕ್ಕೆ ಪ್ರಥಮ, ಹಾಗೂ 'ಸ್ವಪ್ನದರ್ಶಿ ಮತ್ತು ಇತರ ನಾಟಕಗಳು' ಕೃತಿಗೆ ದ್ವಿತೀಯ ಬಹುಮಾನ ಲಭಿಸಿದೆ. 'ಆಮನಿ' ನಾಟಕ ಹಿಂದಿಗೆ ಅನುವಾದಗೊಂಡು ದೂರದರ್ಶನದ ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಬಿತ್ತರಗೊಂಡಿದೆ.

ಹಲವಾರು ಪ್ರತಿಷ್ಠಿತ ಸಂಸ್ಥೆಗಳ ಸಮಿತಿಗಳ ಸದಸ್ಯರಾಗಿ, ಸಲಹೆಗಾರರಾಗಿ, ಸೇವೆಯನ್ನು ಸಲ್ಲಿಸಿದ್ದಾರೆ. ಭಾರತೀಯ ಸಾಹಿತ್ಯ ಅಕಾಡೆಮಿಯ ಭಾಷಾ ಸಲಹಾ ಸಮಿತಿಯ (ಕನ್ನಡ) ಸದಸ್ಯರು ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯತ್ವ, ಪಿ.ಇ.ಎನ್. ಇಂಡಿಯಾದ ಸದಸ್ಯತ್ವ ಮುಂತಾದ ಕೆಲವನ್ನು ಹೆಸರಿಸಬಹುದು. ಧಾರವಾಡದ ಮನೋಹರ ಗ್ರಂಥಮಾಲೆಯ ಸಾಹಿತ್ಯ ಸಲಹೆಗಾರರಾಗಿಯೂ ವಿಶಿಷ್ಟವಾದ ಸೇವೆಯನ್ನು ಕುರ್ತಕೋಟಿಯವರು ಸಲ್ಲಿಸಿದ್ದಾರೆ ಜ್ಞಾನಪೀಠ ಪ್ರಶಸ್ತಿಯ ಪ್ರಾದೇಶಿಕ (ಕನ್ನಡ) ಸಮಿತಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಇವರ ಸಾಹಿತ್ಯ ಸೇವೆಗೆ ಕೇಂದ್ರ ಸಾಹಿತ್ಯ ಅಕಾಡೆಮಿ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಸಂದಿವೆ. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ (1971)ದ ವಿಮರ್ಶೆಯ ಗೋಷ್ಠಿಯ ಅಧ್ಯಕ್ಷತೆಯ ಗೌರವ ಇವರದಾಗಿತ್ತು.

ಹಾ. ಮಾ. ನಾಯಕ

ಜನನ : **12.9.1931** ನಿಧನ : **10.11.2000**



"ನಾನು ಕನ್ನಡದ ಕೆಲಸಗಾರರಲ್ಲಿ ಕೊನೆಯವನು. ಕಿರಿಯವನು. ನನಗಿಂತ ಕೊನೆಯವರಿಲ್ಲ. ಕಿರಿಯರಿಲ್ಲ" ಎಂದು ವಿನಮ್ರತೆಯಿಂದ ಹೇಳಿಕೊಂಡಿರುವ ಹಾರೊಗದ್ದೆ ಮಾನಪ್ಪನಾಯಕ – ಹಾ.ಮಾ.ನಾಯಕರು ಮಹಾರಾಜಾ ಕಾಲೇಜಿನಿಂದ ಬಿ.ಎ. ಪದವಿ ಗಳಿಸಿ, ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ಭಾಷಾ ಶಾಸ್ತ್ರದಲ್ಲಿ ಎಂ.ಎ. ಪದವಿ ಪಡೆದು 1962ರಲ್ಲಿ ಫುಲ್‌ಬ್ರೈಟ್ ವೇತನ ಪಡೆದು ಅಮೆರಿಕಾ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪಡೆದ ಪ್ರತಿಭಾವಂತರು. ತುಮಕೂರು, ಶಿವಮೊಗ್ಗದಲ್ಲಿ ಉಪನ್ಯಾಸಕರಾಗಿ ನಂತರ 1961ರಲ್ಲಿ ಮೈಸೂರು ವಿಶ್ವವಿದ್ಯಾಲಯ ಸೇರಿ 1969ರಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ ಸೇವೆ ಸಲ್ಲಿಸಿದರು. 1985ರಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯದ ಕುಲಪತಿಗಳಾಗಿಯೂ ಕಾರ್ಯ ನಿರ್ವಹಿಸಿದರು.

ಹಾ.ಮಾ ನಾಯಕರದು ಬಹುಮುಖಿ ವ್ಯಕ್ತಿತ್ವ. ಕನ್ನಡ ಪ್ರಾಧ್ಯಾಪಕ, ಭಾಷಾಶಾಸ್ತ್ರಜ್ಞ, ಜಾನಪದ ತಜ್ಞ, ಅಂಕಣಕಾರ, ಅನುವಾದಕ, ವಿಮರ್ಶಕ, ವಿಚಾರವಾದಿ ಹಾಗೂ ಉತ್ತಮ ಭಾಷಣಕಾರರೂ ಸಹ. ಅವರ ವಿಶೇಷವೆಂದರೆ ಅಭಿನಂದನ ಗ್ರಂಥಗಳ ಸಂಸ್ಮರಣ ಗ್ರಂಥಗಳ, ಸಂಚಿಕೆಗಳ ಸಂಪಾದಕರಾಗಿದ್ದುದು.

ಕನ್ನಡ ವಿಶ್ವಕೋಶ, ಕನ್ನಡ ಸಾಹಿತ್ಯ ಚರಿತ್ರೆ, ಕನ್ನಡ ಛಂದಸ್ಸಿನ ಚರಿತ್ರೆ, ಎನ್ ಸೈಕ್ಲೋಪಿಡಿಯಾ ಆಫ್ ಕರ್ನಾಟಕ, ಮುಂತಾದ ಬೃಹತ್ ಯೋಜನೆಗಳ ಪ್ರಧಾನ ಸಂಪಾದಕರಾಗಿ ಅವುಗಳು ಪ್ರಕಟಣೆಗೊಳ್ಳುವಂತಾಗಿದ್ದು ಇವರ ದಕ್ಷ ಕಾರ್ಯ ನಿರ್ವಹಣೆಗೆ ಸಾಕ್ಷಿ.


ಅಂಕಣಕಾರರಾಗಿ ಅಪಾರ ಯಶಸ್ಸುಗಳಿಸಿರುವ, ಹಾ.ಮಾ.ನಾಯಕರಿಗೆ ಅವರ ಅಂಕಣ ಬರಹಗಳ 'ಸಂಪ್ರತಿಗೆ' ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ದೊರೆತಿದೆ. ಅಷ್ಟೇ ಅಲ್ಲದೆ, ರಾಜ್ಯಸಾಹಿತ್ಯ ಅಕಾಡಮಿಯ ಪ್ರಶಸ್ತಿ (1985), ರಾಜ್ಯೋತ್ಸವ ಪ್ರಶಸ್ತಿಗಳಿಗೂ (1982) ಭಾಜನರಾಗಿದ್ದರು.

ಇವರು 40ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಕೆಲವನ್ನು ಹೆಸರಿಸಬಹುದಾದರೆ ವಿನಾಯಕ ವಾಙ್ಮಯ, ದೇಜಗೌ ವ್ಯಕ್ತಿ ಮತ್ತು ಸಾಹಿತ್ಯ ಗೊರೂರು ಗೌರವ ಗ್ರಂಥ, ಎ.ಆರ್.ಕೃ ಜೀವನ ಸಾಧನೆ. ಹಾವು ಮತ್ತು ಹೆಣ್ಣು, ಅಕ್ಕಮಹಾದೇವಿ ಮುಂತಾದುವು. ಇವರ ಹಲವಾರು ಬರಹಗಳು ಬಂಗಾಳಿ, ಹಿಂದಿ, ತೆಲುಗು, ಮರಾಠಿ, ಉರ್ದು ಮೊದಲಾದ ಭಾಷೆಗಳಿಗೆ ಅನುವಾದಗೊಂಡಿವೆ.

1985 ಏಪ್ರಿಲ್‌ನಲ್ಲಿ ಬೀದರ್‌ನಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿಯನ್ನು ಅಲಂಕರಿಸಿದ್ದರು.

ಅನುಪಮ ನಿರಂಜನ

ಜನನ : 17.5.1934 ನಿಧನ : 15.2.1991



ವೈದ್ಯಕೀಯ ವೃತ್ತಿ ಹಾಗೂ ಸಾಹಿತ್ಯ ರಚನೆ ಎರಡರಲ್ಲಿಯೂ ಸಮಾನ ಆಸಕ್ತಿ ಅಭಿರುಚಿ ಹೊಂದಿದ್ದ ಅನುಪಮರವರು ಪ್ರಸಿದ್ಧ ಸಾಹಿತಿಗಳಾಗಿದ್ದ ನಿರಂಜನ (ಕುಳಕುಂದ ಶಿವರಾವ್‌ರವರನ್ನು)ರವರನ್ನು ವಿವಾಹವಾದ ನಂತರ ಅನುಪಮ ನಿರಂಜನರೆಂದು ನಾಮಾಂತರಗೊಂಡರು.

ಪ್ರಸಿದ್ಧ ವೈದ್ಯರಾದಂತೆ ಪ್ರಸಿದ್ಧ ಸಾಹಿತಿಯೂ ಆಗಿದ್ದ ಅವರು ಸಾಹಿತ್ಯ ಕ್ಷೇತ್ರದ ಎಲ್ಲ ಪ್ರಕಾರಗಳಲ್ಲಿ ರಚನೆ ಮಾಡಿದ್ದಾರೆ. ಕಾದಂಬರಿ, ಕಥಾ ಸಂಕಲನ,

ಪ್ರವಾಸ ಸಾಹಿತ್ಯ, ಆತ್ಮಕಥೆ, ಅನುವಾದ, ನಾಟಕ , ಶಿಶು ಸಾಹಿತ್ಯ ಮುಂತಾದುವೇ ಅಲ್ಲದೆ ವೈದ್ಯಕೀಯ ಸಾಹಿತ್ಯ ಕ್ಷೇತ್ರಕ್ಕೆ ಅವರು ಸಲ್ಲಿಸಿರುವ ಸೇವೆ ಅವರ ಹೆಸರಿಗೆ ತಕ್ಕಂತೆ ಅನುಪಮವೇ ಆಗಿದೆ.

ಅವರು ಬರೆದಿರುವ ಒಟ್ಟು 23 ಸಾಮಾಜಿಕ ಕಾದಂಬರಿಗಳಲ್ಲಿ ಹೆಸರಿಸ ಬಹುದಾದ ಕೆಲವು ಕಾದಂಬರಿಗಳು-ಅನಂತಗೀತ, ಶ್ವೇತಾಂಬರ, ಓಮದ ಹೂ. ಸಂಕೋಲೆಯೊಳಗಿಂದ, ಹೃದಯವಲ್ಲಭ, ಋಣ, ಸ್ನೇಹ ಪಲ್ಲವಿ ಮುಂತಾದುವು.

ಕಣ್ಮಣಿ, ನೀರಿಗೆ ನೈದಿಲೆ ಶೃಂಗಾರ, ಏಳುಸುತ್ತಿನ ಮಲ್ಲಿಗೆ, ಒಂದು ಗಿಣಿಯ ಕಥೆ ಮುಂತಾದ 9 ಕಥಾ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಅಲ್ಲದೆ ಕಲ್ಲೋಲ ಎನ್ನುವ ನಾಟಕವನ್ನು ರಚಿಸಿದ್ದಾರೆ.

'ನೆನಪು ಸಿಹಿ ಕಹಿ' ಮತ್ತು ಬರಹಗಾರ್ತಿಯ ಬದುಕು ಅವರ ಆತ್ಮಕತೆಯಾಗಿ ರಚಿತವಾಗಿದೆ.

ಸಾಹಿತ್ಯ ಅಕಾಡಮಿ ಪುರಸ್ಕಾರ, ಸೋವಿಯತ್ ಲ್ಯಾಂಡ್ ನೆಹರು ಪ್ರಶಸ್ತಿ ಕಾಸರಗೋಡು ಮಹಿಳಾಸಮ್ಮೇಳನದ ಪ್ರಶಸ್ತಿಗಳು ಇವರ ಸಾಹಿತ್ಯ ಸೇವೆಗೆ ಸಂದಿವೆ.

ಮುಂಬಯಿ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವವೂ ಸಹ ಇವರಿಗೆ ಲಭಿಸಿತ್ತು.


ವೈದ್ಯಕೀಯ ಸಾಹಿತ್ಯಕ್ಕೆ ಇವರು ನೀಡಿದ ಕಾಣಿಕೆ ಅತ್ಯಂತ ಜನಪ್ರಿಯವಾದುದು. ಆ ಕ್ಷೇತ್ರಕ್ಕೆ ಅವರು ಬರೆದ ಲೇಖನಗಳು, ಪುಸ್ತಕಗಳು ಅವರು ಸಾಹಿತ್ಯ ಲೋಕಕ್ಕೆ ನೀಡಿದ ಮೌಲಿಕ ಕೊಡುಗೆಗಳೆನ್ನಬಹುದು.

1968ರಲ್ಲಿ ಅವರು ಬರೆದ 'ತಾಯಿ ಮಗು' ಅತ್ಯಂತ ಜನಪ್ರಿಯ ಕೃತಿ. ಅಲ್ಲಿಂದ ಇಲ್ಲಿಯವರೆಗೆ ಐವತ್ತು ಮುದ್ರಣಗಳನ್ನು ಕಂಡಿರುವ ಈ ಕೃತಿ ಒಂದು ಲಕ್ಷಕ್ಕೂ ಹೆಚ್ಚು ಮಾರಾಟವಾದ ವೈದ್ಯಕೀಯ ಪುಸ್ತಕವೆಂಬ ಹೆಗ್ಗಳಿಕೆಯನ್ನು ಪಡೆದಿದೆ. ವೈದ್ಯಕೀಯ ಹಿನ್ನೆಲೆಯೊಂದಿಗೆ ಸ್ವತಃ ತಾಯಿಯಾದ ತಮ್ಮ ಅನುಭವಗಳು ಸಮನ್ವಯಗೊಂಡು ಈ ಪುಸ್ತಕವು ರೂಪುಗೊಂಡಿತು ಎಂದು ತಮ್ಮ ಆತ್ಮಕಥನ 'ಬರಹಗಾರ್ತಿಯ ಬದುಕುವಿ'ನಲ್ಲಿ ಅವರುಹೇಳಿಕೊಂಡಿದ್ದಾರೆ.

ಇವರ ಋಣಮುಕ್ತಳು ಕಾದಂಬರಿ ಚಲನಚಿತ್ರವಾಗಿದೆ.

ಎಸ್. ಎಲ್. ಭೈರಪ್ಪ

ಜನನ : 26.7.1934



ಸಂತೇಶಿವರ ಲಿಂಗಣ್ಣಯ್ಯ ಭೈರಪ್ಪ - ಎಸ್.ಎಲ್. ಭೈರಪ್ಪ - ಕನ್ನಡದ ಮಹತ್ವದ ಲೇಖಕರಲ್ಲಿ ಒಬ್ಬರು. 26-07-1934ರಂದು ಹಾಸನ ಜಿಲ್ಲೆಯಲ್ಲಿ ಜನಿಸಿದರು. ಬಾಲ್ಯದಲ್ಲಿ ಅತಿ ಕಡು ಬಡತನದಿಂದ SSLCಯ ನಂತರ ಮುಂದಿನ ವ್ಯಾಸಂಗ ಮಾಡಲಾಗದೆ, ಮುಂಬಯಿ, ಹರಿದ್ವಾರ-ಮುಂತಾದ ದೇಶದ ಹಲವು ಭಾಗಗಳಲ್ಲಿ ಸುತ್ತಾಡಿ ಜೀವನಾನುಭವವನ್ನು ಗಳಿಸಿದ ನಂತರ ಮೈಸೂರಿಗೆ ಬಂದು ಮುಂದಿನ ವ್ಯಾಸಂಗವನ್ನು ಕೈಗೊಂಡರು. ಬಿ.ಎ ಆನರ್ಸ್ ಮತ್ತು ಎಂ.ಎ. ಪರೀಕ್ಷೆಗಳಲ್ಲಿ ತೇರ್ಗಡೆಯಾದರು. ತತ್ವಶಾಸ್ತ್ರ ಅವರ ಅಧ್ಯಯನದ ವಿಶೇಷ ವಿಷಯವಾಗಿತ್ತು.

ಗುಜರಾತಿನ ಸರ್ದಾರ್ ವಲ್ಲಭಬಾಯಿ ಪಟೇಲ್ ವಿಶ್ವವಿದ್ಯಾಲಯದಲ್ಲಿ ತತ್ವಶಾಸ್ತ್ರದ ಅಧ್ಯಾಪಕರಾಗಿ ಸೇವೆಯನ್ನುಕೈಗೊಂಡರು. ಬರೋಡ ವಿಶ್ವ

ವಿದ್ಯಾಲಯದಿಂದ ಅವರು ಮಂಡಿಸಿದ 'ಸತ್ಯ ಮತ್ತು ಸೌಂದರ್ಯ" ಮಹಾ ಪ್ರಬಂಧಕ್ಕೆ ಪಿ.ಎಚ್.ಡಿ. ಪದವಿ ಪಡೆದ ನಂತರ ದೆಹಲಿಯಲ್ಲಿ ಸ್ವಲ್ಪ ಅವಧಿಯ ಮಟ್ಟಿಗೆ ಉಪನ್ಯಾಸಕರಾಗಿದ್ದು ಅಲ್ಲಿಂದ ಮೈಸೂರಿಗೆ ಹಿಂದಿರುಗಿ ರೀಜನಲ್ ಕಾಲೇಜ್ ಆಫ್ ಎಜುಕೇಷನ್‌ನಲ್ಲಿ ಸೇವೆ ಸಲ್ಲಿಸಿ 1994ರಲ್ಲಿ ನಿವೃತ್ತರಾದರು.

ಭೀಮಕಾಯ (1958) ಅವರು ರಚಿಸಿದ ಪ್ರಥಮ ಕಾದಂಬರಿಯಾದರೂ ಧರ್ಮಶ್ರೀ (1961) ಕಾದಂಬರಿಯಿಂದ ಸಾಹಿತ್ಯ ಪ್ರಿಯರನ್ನು ಆಕರ್ಷಿಸಿದರು. ಅಲ್ಲಿಂದ ಅವರು ಬರೆದ ಎಲ್ಲಾ ಕಾದಂಬರಿಗಳು ಕನ್ನಡದ ಓದುಗರನ್ನು ಸೂಜಿಗಲ್ಲಿನಂತೆ ಆಕರ್ಷಿಸುತ್ತಿದೆಯೆನ್ನಬಹುದು. ಅವರು ಇದುವರೆಗೆ ಬರೆದಿರುವ ಒಟ್ಟು ಕಾದಂಬರಿಗಳು 25. "ಭಿತ್ತಿ" ಅವರ ಆತ್ಮ ವೃತ್ತಾಂತ.

ವಿಶಿಷ್ಟವೆಂದರೆ ಅವರ ಒಂದೊಂದು ಕಾದಂಬರಿಯೂ ಪ್ರಕಟವಾದ ಕೆಲವೇ ದಿನಗಳಲ್ಲಿ ಮರುಮುದ್ರಣವಾಗುತ್ತಿರುವುದು.

2007ರಲ್ಲಿ ಪ್ರಕಟವಾದ 'ಆವರಣ' ಕಾದಂಬರಿ 2016ರವರೆಗೆ ನಲವತ್ತಾರು ಮುದ್ರಣಗಳನ್ನು ಕಂಡಿವೆಯೆಂದರೆ ಸಾಹಿತ್ಯ ಪ್ರೇಮಿಗಳು ಭೈರಪ್ಪನವರ ಕಾದಂಬರಿಗಳನ್ನು ಎಷ್ಟರಮಟ್ಟಿಗೆ ಇಷ್ಟಪಡುತ್ತಾರೆ ಎಂಬುದು ವೇದ್ಯವಾಗುತ್ತದೆ. ಅಷ್ಟೇ ಏಕೆ ಇವರ ಬಹಳಷ್ಟು ಕಾದಂಬರಿಗಳು ಭಾರತದ ಹಲವಾರು ಭಾಷೆಗಳಿಗೆ (ಸಂಸ್ಕೃತ ಹಾಗೂ ಇಂಗ್ಲೀಷ್ ಭಾಷೆಗಳೂ ಸೇರಿದಂತೆ) ಅನುವಾದಗೊಂಡಿವೆ. ಗೃಹಭಂಗ, ದಾಟು ಕಾದಂಬರಿಗಳು ಭಾರತದ ಎಲ್ಲಾ ಭಾಷೆಗಳಿಗೂ ಅನುವಾದಗೊಂಡಿದೆ.

'ತಂತು' ಕಾದಂಬರಿಗೆ ಭಾರತೀಯ ಭಾಷಾ ಪರಿಷತ್ತು ಪ್ರಶಸ್ತಿ 'ದಾಟು', ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ. 'ವಂಶವೃಕ್ಷ', 'ಸಾಕ್ಷಿ', 'ದಾಟು' ಕಾದಂಬರಿಗಳಿಗೆ ರಾಜ್ಯಸಾಹಿತ್ಯ ಅಕಾಡಮಿ ಬಹುಮಾನಗಳು ಲಭಿಸಿದೆ. ಪ್ರತಿಷ್ಠಿತ 'ಮಾಸ್ತಿ ಪ್ರಶಸ್ತಿ' ರಾಜ್ಯ ಸಾಹಿತ್ಯ ಅಕಾಡಮಿಯ ಗೌರವ ಪ್ರಶಸ್ತಿ ದೊರಕಿವೆ. ರಾಷ್ಟ್ರದ ಶ್ರೇಷ್ಠ ಸರಸ್ವತಿ ಸನ್ಮಾನ್ ಪ್ರಶಸ್ತಿಯ ಗೌರವವೂ ಲಭಿಸಿದೆ. ಇತ್ತೀಚೆಗೆ ನೃಪತುಂಗ ಪ್ರಶಸ್ತಿಯೂ ಅವರಿಗೆ ದೊರೆತಿದೆ.

1999ರ ಫೆಬ್ರವರಿಯಲ್ಲಿ ಕನಕಪುರದಲ್ಲಿ ನಡೆದ 67ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವ ಇವರಿಗೆ ಲಭಿಸಿತ್ತು.

ರಾಷ್ಟ್ರದ ಅತ್ಯುನ್ನತ ಪ್ರಶಸ್ತಿ ಪದ್ಮಶ್ರೀ ಲಭಿಸಿರುವುದೇ ಅಲ್ಲದೆ ರಾಷ್ಟ್ರೀಯ ಪ್ರಾಧ್ಯಾಪಕ ಗೌರವಕ್ಕೆ ಅವರು ಭಾಜನವಾಗಿದ್ದಾರೆ.

ಪಿ. ಲಂಕೇಶ್

ಜನನ : 8.3.1935 **ನಿಧನ : 25.1.2000**



ಬೆಂಗಳೂರು ಸೆಂಟ್ರಲ್ ಕಾಲೇಜಿನಿಂದ ಬಿ.ಎ (ಆನರ್ಸ್) ಪದವಿಯನ್ನು ಹಾಗೂ ಮೈಸೂರು ವಿಶ್ವವಿದ್ಯಾಲಯದಿಂದ ಎಂ.ಎ. (ಇಂಗ್ಲೀಷ್) ಪದವಿಯನ್ನು ಪಡೆದರು. ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ ಆಂಗ್ಲಭಾಷೆಯ ಅಧ್ಯಾಪಕರಾಗಿ ವೃತ್ತಿಜೀವನ ಆರಂಭಿಸಿದ ಲಂಕೇಶ್‌ರವರು 1959 ರಿಂದ 1962ರವರೆಗೂ ಅಲ್ಲಿಯೇ ಇದ್ದು 1962 ರಿಂದ 1965ರವರೆಗೆ ಬೆಂಗಳೂರು ಸೆಂಟ್ರಲ್ ಕಾಲೇಜ್ ಹಾಗೂ ಸರ್ಕಾರಿ ಕಾಲೇಜಿನಲ್ಲಿ 1966 ರಿಂದ 1978ರವರೆಗೆ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದರು.

1979ರಲ್ಲಿ ಲಂಕೇಶರು ಅಧ್ಯಾಪಕ ವೃತ್ತಿಯಿಂದ ಪತ್ರಿಕೋದ್ಯಮದತ್ತ ಹೊರಳಿದರು. ತಮ್ಮದೇ ಆದ ಲಂಕೇಶ್ ಪತ್ರಿಕೆಯನ್ನು ಆರಂಭಿಸಿದರು. ರಾಜಕೀಯ ಸುದ್ದಿಗಳು, ವಿಮರ್ಶೆಗಳು, ಅಂಕಣಗಳು, ಮುಂತಾದ ಅನೇಕ ವೈಶಿಷ್ಟ್ಯಗಳನ್ನೊಳಗೊಂಡ ಈ ಪತ್ರಿಕೆ ಅತ್ಯಂತ ಜನಪ್ರಿಯವಾಯಿತು. ಈ ಪತ್ರಿಕೆಯ ಗಮನಾರ್ಹ ಕೊಡುಗೆಯೆಂದರೆ ಇಂದು ಜನಪ್ರಿಯವಾಗಿರುವ ಹಲವಾರು ಪತ್ರಕರ್ತರು ಹಾಗೂ ಸಾಹಿತಿಗಳ ಬರವಣಿಗೆಗೆ ಅವಕಾಶ ಕೊಟ್ಟು ಅವರು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸಕ್ರಿಯವಾಗಿರುವಂತೆ ಮಾಡಿದ್ದು.

ಲಂಕೇಶರ ಮೊದಲ ಕಥಾಸಂಕಲನ "ಕೆರೆಯ ನೀರನ್ನು ಕೆರೆಗೆ ಚೆಲ್ಲಿ" 1963ರಲ್ಲಿ ಪ್ರಕಟವಾಯಿತು.

8 ನಾಟಕಗಳು, 7 ಕಥಾ ಸಂಗ್ರಹಗಳು. 3 ಕಾದಂಬರಿಗಳು 14 ಅಂಕಣ ಬರಹಗಳ ಸಂಗ್ರಹ, 8 ಕವನ ಸಂಗ್ರಹಗಳು ಲಂಕೇಶರ, ಲೇಖನಿಯಿಂದ ಹೊರಹೊಮ್ಮಿವೆ.


'ಹುಳಿಮಾವಿನ ಮರ'ದಲ್ಲಿ ಲಂಕೇಶರು ತಮ್ಮ ಜೀವನ ಕಥನವನ್ನು ನಿರೂಪಿಸಿದ್ದಾರೆ.

ಚಿತ್ರನಿರ್ದೇಶಕನಾಗಿ ಕನ್ನಡ ಚಿತ್ರರಂಗಕ್ಕೆ ಸೇವೆ ಸಲ್ಲಿಸಿರುವ ಅವರು 4 ಚಿತ್ರಗಳಿಗೆ ನಿರ್ದೇಶನ ಮಾಡಿದ್ದಾರೆ. ಅವುಗಳೆಂದರೆ, ಪಲ್ಲವಿ, ಅನುರೂಪ, ಖಂಡವಿದೆಕೊ ಮಾಂಸವಿದೆಕೊ, ಎಲ್ಲಿಂದಲೋ ಬಂದವರು. ಅಲ್ಲದೆ 'ಸಂಸ್ಕಾರ' ಹಾಗೂ 'ಎಲ್ಲಿಂದಲೋ ಬಂದವರು' ಚಿತ್ರಗಳಲ್ಲಿ ಪಾತ್ರವನ್ನೂ ವಹಿಸಿದ್ದಾರೆ.

ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ (ಕಲ್ಲು ಕರಗುವ ಸಮಯ; ಸಣ್ಣ ಕತೆಗಳ ಸಂಗ್ರಹ) ರಾಜ್ಯ ಸಾಹಿತ್ಯ ಅಕಾಡಮಿ ಪ್ರಶಸ್ತಿ (1986) ಜಿ.ಎಚ್. ಶ್ರೀಧರ ಪ್ರಶಸ್ತಿ. ರಾಜ್ಯ ನಾಟಕ ಅಕಾಡಮಿ ಪ್ರಶಸ್ತಿ ಹಾಗೂ ಆರ್ಯಭಟ ಪ್ರಶಸ್ತಿಗಳು ಇವರ ಸಾಹಿತ್ಯ ಸೇವೆಗೆ ಲಭಿಸಿವೆ.

ಕೆ. ಎಸ್. ನಿಸಾರ್ ಅಹಮದ್

ಜನನ : 5.2.1936



'ನಿತ್ಯೋತ್ಸವ ಕವಿ' ಎಂದೇ ಸಾಹಿತ್ಯಾಸಕ್ತರಲ್ಲಿ ಅತ್ಯಂತ ಪರಿಚಿತರಾಗಿರುವ ಕೆ. ಎಸ್. ನಿಸಾರ್ ಅಹಮದ್‌ರವರು ಭೂವಿಜ್ಞಾನದಲ್ಲಿ ಬಿ.ಎಸ್ಸಿ. ಹಾಗೂ ಎಂ.ಎಸ್ಸಿ ಪದವಿಧರರಾದರು. ಮೊದಲಿಗೆ ಅವರು ಉದ್ಯೋಗಕ್ಕೆ ಸೇರಿದ್ದು ಮೈಸೂರು ಸರ್ಕಾರದ ಭೂವಿಜ್ಞಾನ ಇಲಾಖೆಗೆ-ಗುಲ್ಬರ್ಗಾದಲ್ಲಿ, ಆ ಕೆಲಸದಲ್ಲಿ ಅವರಿಗೆ ತೃಪ್ತಿ ಕಾಣಲಿಲ್ಲ. ವೃತ್ತಿಗೆ ರಾಜೀನಾಮೆ ನೀಡಿ ಅಧ್ಯಾಪಕ ವೃತ್ತಿಗೆ ಸೇರಿದರು. ಬೆಂಗಳೂರಿನ ಸರ್ಕಾರಿ ಕಾಲೇಜಿನಲ್ಲಿ ಅಧ್ಯಾಪಕರಾಗಿ ಸೇರಿ ಚಿತ್ರದುರ್ಗ, ಶಿವಮೊಗ್ಗದಲ್ಲಿ ಕಾರ್ಯ ನಿರ್ವಹಿಸಿದರು. 1994ರಲ್ಲಿ ಶಿವಮೊಗ್ಗದಲ್ಲಿ ನಿವೃತ್ತಿ ಹೊಂದಿದ ನಂತರ, ಅವರು ತಮ್ಮ ನಿವೃತ್ತ ಜೀವನದ ಸಮಯವನ್ನು ತೆರೆದಿದ್ದು ಸಾರ್ವಜನಿಕ ಮತ್ತು ಏಕಾಂತದ ಕವಿ ಸಮಯಗಳಿಗೆ.

ಅವರು ಮುಸ್ಲಿಮರಾದರೂ ಅವರ ತಂದೆ ಅವರನ್ನು ಉರ್ದು ಶಾಲೆಗೆ ಸೇರಿಸದೆ ಕನ್ನಡ ಮಾಧ್ಯಮ ಶಾಲೆಗೆ ಸೇರಿಸಿದ್ದರು ಹಾಗಾಗಿ ಕನ್ನಡ ಭಾಷೆಯ ಮೇಲೆ ಇವರಿಗೆ ಮೊದಲಿನಿಂದಲೂ ಅಪಾರ ಒಲವು ಅಭಿಮಾನ. ಅವರು ಹೈಸ್ಕೂಲಿನಲ್ಲಿ ಓದುತ್ತಿದ್ದ ಕಾಲದಲ್ಲಿಯೇ ಕವನ ರಚನೆಯ ಹವ್ಯಾಸವನ್ನು ರೂಢಿಸಿಕೊಂಡಿದ್ದರು. ಆಗ ಅವರು ಪ್ರಕಟಿಸಿದ್ದು 'ಜಲಪಾತ' ಕವನ.

ಇವರ ಕಾವ್ಯಾಸಕ್ತಿಗೆ ಪ್ರೋತ್ಸಾಹ ಕೊಟ್ಟವರು ಎಲ್. ಗುಂಡಪ್ಪ, ಎಂ. ವಿ. ಸೀತಾರಾಮಯ್ಯ, ಜಿ. ಪಿ. ರಾಜರತ್ನಂ, ವಿ.ಸೀ. ಮುಂತಾದ ಹಿರಿಯ ಕವಿಗಳು.

1960ರಲ್ಲಿ ಅವರು ಪ್ರಕಟಿಸಿದ 'ಗಾಂಧೀಬಜಾರು' ಕವನ ಸಂಗ್ರಹದಿಂದ ನಾಡಿಗೆ ಪರಿಚಿತ ಕವಿಯಾದರು. 1976ರಲ್ಲಿ ಪ್ರಕಟವಾದ 'ನಿತ್ಯೋತ್ಸವ' ಭಾವ ಗೀತಗಳ ಸಂಗ್ರಹ. ನಂತರ 1978ರಲ್ಲಿ ಕನ್ನಡದ ಪ್ರಥಮ ಧ್ವನಿಸುರುಳಿ ಎಂಬ ಖ್ಯಾತಿಗೆ ಪಾತ್ರವಾದ ನಿತ್ಯೋತ್ಸವ ಧ್ವನಿಸುರುಳಿ, ಅವರು ಜನಪ್ರಿಯ ಕವಿಯಾಗಿ ಜನಮನದಲ್ಲಿ ನೆಲೆಯೂರುವಂತಾಯಿತು. ಇವರು ರಚಿಸಿರುವ ಸುಮಧುರ, ನವೋಲ್ಲಾಸ ಧ್ವನಿಸುರುಳಿಗಳು ಕೊಲ್ಲಿ ರಾಷ್ಟ್ರಗಳಲ್ಲಿ ಬಿಡುಗಡೆಗೊಂಡು ಜನಪ್ರಿಯ ವಾಗಿದೆ. ಗದ್ಯಸಾಹಿತ್ಯ ರಚನೆಯಲ್ಲೂ ಸಿದ್ಧಹಸ್ತರಾಗಿರುವ ನಿಸಾರ್‌ರವರು 'ಮನದೊಂದಿಗೆ ಮಾತುಕತೆ' ಹಾಗೂ 'ಹಿರಿಯರು ಹರಸಿದ ಹೆದ್ದಾರಿ' ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಮನಸು ಗಾಂಧಿಬಜಾರು, ನಿತ್ಯೋತ್ಸವ, ಅನಾಮಿಕ ಆಂಗ್ಲರು, ಸಮಗ್ರ ಭಾವಗೀತೆಗಳು ಮುಂತಾದ ಕವನ ಸಂಗ್ರಹಗಳು, ಇದು ಬರೀ ಬೆಡಗಲ್ಲೋ ಅಣ್ಣ, ಆಚಾರವಿಚಾರ, ಅಚ್ಚುಮೆಚ್ಚು, ಸರಸೋಕ್ತಿಯ ಸಂಗಾತಿ ಮುಂತಾದ ವಿಮರ್ಶೆ ಮತ್ತು ವಿಚಾರ ಸಾಹಿತ್ಯ ಕೃತಿಗಳು, ಒಥೆಲೋ, ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್ ಮುಂತಾದ ಅನುವಾದಿತ ಕೃತಿಗಳು ಇವರು ಸಾಹಿತ್ಯ ಕ್ಷೇತ್ರಕ್ಕೆ ನೀಡಿರುವ ಕೊಡುಗೆ.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ವಿಶ್ವಮಾನವ ಪ್ರಶಸ್ತಿ, ಪದ್ಮಶ್ರೀ ಪ್ರಶಸ್ತಿ, ನಾಡೋಜ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ ಮುಂತಾದ ಹತ್ತು ಹಲವು ಪ್ರಶಸ್ತಿಗಳು ಇವರಿಗೆ ಲಭಿಸಿದೆ.

2006 ಡಿಸೆಂಬರ್‌ನಲ್ಲಿ ಶಿವಮೊಗ್ಗದಲ್ಲಿ ನಡೆದ 73ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವವೂ ಇವರಿಗೆ ಲಭಿಸಿದೆ.

407ನೆಯ ದಸರಾ ಮಹೋತ್ಸವವನ್ನು ಉದ್ಘಾಟಿಸುವ ಹೆಗ್ಗಳಿಕೆಯೂ ಇವರ ಪಾಲಿಗೆ ಲಭಿಸಿತು.

ಪೂರ್ಣಚಂದ್ರ ತೇಜಸ್ವಿ

ಜನನ : 8.9.1938 ನಿಧನ : **5.4.2007**



ಶ್ರೀ ಕೆ.ಪಿ. ಪೂರ್ಣಚಂದ್ರ ತೇಜಸ್ವಿ – ಪೂಚಂತೆಯವರು ಸೂಕ್ಷ್ಮ ಸಂವೇದನೆಯ ಸೃಜನಶೀಲ ಲೇಖಕ. ಕಾಲೇಜು ವಿದ್ಯಾಭ್ಯಾಸವನ್ನು ಶಿವಮೊಗ್ಗದಲ್ಲಿ ಪ್ರಾರಂಭಿಸಿದ ತೇಜಸ್ವಿ ಕನ್ನಡ ಬಿ.ಎ ಆನರ್ಸ್ ಹಾಗೂ ಕನ್ನಡ ಎಂ.ಎ. ಪದವಿಗಳನ್ನು ಮೈಸೂರಿನ ಮಹಾರಾಜ ಕಾಲೇಜು ಹಾಗೂ ಮೈಸೂರು ವಿಶ್ವವಿದ್ಯಾಲಯದಿಂದ ಪಡೆದಿದ್ದಾರೆ. ಕಾಲೇಜಿನಲ್ಲಿಯೋ ಅಥವಾ ವಿಶ್ವವಿದ್ಯಾಲಯದಲ್ಲಿಯೋ ಉಪನ್ಯಾಸಕರಾಗಬಹುದಿದ್ದರೂ, ಸರ್ಕಾರಿ ನೌಕರಿಗೆ ಒಲವು ತೋರಿಸದೆ ಕೃಷಿ ಜೀವನವನ್ನು ತಮ್ಮದಾಗಿಸಿಕೊಂಡರು.

'ಲಿಂಗಬಂದ' ಎಂಬ ಕಥೆಯನ್ನು ಬರೆಯುವುದರ ಮೂಲಕ ಕನ್ನಡ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದ ತೇಜಸ್ವಿ, ಕಥೆ, ಕಾದಂಬರಿ, ಕಾವ್ಯ, ವೈಚಾರಿಕ ಬರಹ, ವೈಜ್ಞಾನಿಕ ಬರಹ, ಅನುವಾದಿತ ಕೃತಿಗಳ ಮೂಲಕ ಕನ್ನಡ ಸಾಹಿತ್ಯ ಓದುಗರ ಮನಸ್ಸನ್ನು ಆಕರ್ಷಿಸಿದ್ದಾರೆ.

ಪ್ರಕೃತಿ ಸೌಂದರ್ಯ, ಪರಿಸರ ವಿನಾಶ, ಜಗತ್ತಿನ ನಿಗೂಢತೆ, ಮನುಷ್ಯನ ವೈಫಲ್ಯ ಮುಂತಾದುವುಗಳನ್ನು ತಮ್ಮ ಬರಹಗಳಲ್ಲಿ ಅಳವಡಿಸಿಗೊಂಡಿದ್ದಾರೆ. ಕನ್ನಡ ಸಾಹಿತ್ಯದ ವಿಭಿನ್ನ ಕಾಲಘಟ್ಟಗಳಲ್ಲಿ ಬರೆದಿರುವ ಅವರು ಅನನ್ಯ ಸ್ಥಾನವನ್ನು ಗಳಿಸಿದ್ದಾರೆ.

ಅವರು ರಚಿಸಿರುವ ಪ್ರಮುಖ ಕೃತಿಗಳನ್ನು ಹೆಸರಿಸಬಹುದಾದರೆ ಯಮಳ ಪ್ರಶ್ನೆ (ನಾಟಕ) ಹುಲಿಯೂರಿನ ಸರಹದ್ದು, ಅಬಚೂರಿನ ಪೋಸ್ಟಾಫೀಸು, ಕರಗೂರಿನ ಗಯ್ಯಾಳಿಗಳು (ಕಥಾ ಸಂಕಲನ) ಸ್ವರೂಪ, ನಿಗೂಢ ಮನುಷ್ಯರು, ಕರ್ವಾಲೋ, ಚಿದಂಬರ ರಹಸ್ಯ, ಜುಗಾರಿ ಕ್ರಾಸ್ (ಕಾದಂಬರಿಗಳು) ಅಲೆಮಾರಿಯ ಅಂಡಮಾನ್ ಮತ್ತು ನೈಲ್ ನದಿ (ಪ್ರವಾಸ ಕಥನ) ಮುಂತಾದುವು.

ಕಾಡಿನ ಕಥೆಗಳು, ರುದ್ರ ಪ್ರಯಾಗದ ಭಯಾನಕ ನರಭಕ್ಷಕ ಮತ್ತು ಲೋಹಿಯಾ ಇವರ ಅನುವಾದಿತ ಕೃತಿಗಳು.

1987ರಲ್ಲಿ ಇವರ 'ಚಿದಂಬರ ರಹಸ್ಯ' ಕೃತಿಗಾಗಿ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ದೊರೆಯಿತು. ಪ್ರಶಸ್ತಿಯ ಇತಿಹಾಸದಲ್ಲಿ ತಂದೆ ಮಕ್ಕಳಿಬ್ಬರು ಪ್ರಶಸ್ತಿಯನ್ನು ಪಡೆದ ಎರಡನೆಯ ಹೆಗ್ಗಳಿಕೆ ಇವರದಾಯಿತು. ಅಲ್ಲದೆ ಇದೇ ಕೃತಿಗಾಗಿ ರಾಜ್ಯಸಾಹಿತ್ಯ ಅಕಾಡಮಿ ಪ್ರಶಸ್ತಿ (1981), ರಾಜ್ಯ ಸಾಹಿತ್ಯ ಅಕಾಡಮಿ ವಿಶೇಷ ಪ್ರಶಸ್ತಿ (1985), ಭಾರತೀಯ ಭಾಷಾಪರಿಷತ್ ಪ್ರಶಸ್ತಿ (1989) ಲಭಿಸಿದೆ.

ಕರ್ನಾಟಕ ಸರ್ಕಾರದ ಪಂಪ ಪ್ರಶಸ್ತಿಯೂ 2001ರಲ್ಲಿ ಇವರಿಗೆ ಲಭಿಸಿದೆ.

'ಅಬಚೂರಿನ ಪೋಸ್ಟಾಫೀಸ್', 'ತಬರನ ಕಥೆ' ಹಾಗೂ 'ಕರಗೂರಿನ ಗಯ್ಯಾಳಿಗಳು' ಚಲನ ಚಿತ್ರಗಳಾಗಿ ಜನ ಮೆಚ್ಚುಗೆಯನ್ನು ಪಡೆದಿವೆ. ಕಂದನ ಕಥೆಗೆ ಸ್ವರ್ಣಕಮಲ ಪ್ರಶಸ್ತಿ ದೊರೆತಿದೆ. ಇವರ ಹಲವಾರು ಕೃತಿಗಳು ಹಿಂದಿ, ಮರಾಠಿ, ಮಲೆಯಾಳಂ, ಇಂಗ್ಲೀಷ್ ಮತ್ತು ಜಪಾನ್ ಭಾಷೆಗಳಿಗೆ ಅನುವಾದಗೊಂಡಿವೆ.

ಈವರೆಗಿನ ಪ್ರಕಟಣೆಗಳು

- ಅಭಿನವ ರವಿವರ್ಮ ಬಿ.ಕೆ.ಎಸ್. ವರ್ಮ ವ್ಯಕ್ತಿ-ಚಿತ್ರ/ಸುರೇಶ್‌ಮೂನ ರೂ. 275/-
- ಮಂಡೆಯಂ ನಾಡಶಿಲ್ಪಿಗಳು/ಸುರೇಶ್‌ಮೂನ ರೂ. 150/-
- ದ್ರವ ಬಂಗಾರ ಪೆಟ್ರೋಲ್/ಟಿ.ಆರ್.ಅನಂತರಾಮು ರೂ. 90/-
- ಭಗತಸಿಂಗ್ ಒಂದು ಸತ್ಯ/ರಾಮಾನಾರಾಯಣ ರೂ. 70/-
- ಆತ್ಮಾಹುತಿ/ಶಿವರಾಮು ರೂ. 300/-
- ಶಿಕ್ಷಕ ವೃತ್ತಿಯ ಸಾರ್ಥಕ ಬದುಕು/ಬಿ.ವಿಶ್ವೇಶ್ವರಯ್ಯ ರೂ. 150/-
- ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪ/ಗೌರಿಸುಂದರ್ ರೂ. 120/-
- ವಿಮರ್ಶೆಯ ಉಡುಗೊರೆ/ಡಾ॥ ಲಕ್ಷ್ಮೀನಾರಾಯಣ ಭಟ್ ರೂ. 220/-
- ಮನಸ್ಸಿದ್ದವರು/ಬಿ.ಆರ್.ಪ್ರಸಾದ್ ರೂ. 175/-
- ಸಂಗ್ರಹಕೃತಿಮಾಲಾ/ವಿ.ಎಸ್.ಶಂಕರ್ ರೂ. 150/-
- ಬೆಂಗಳೂರು ನಗರ ನಿರ್ಮಾಪಕರು ಭಾಗ-1/ಸುರೇಶ್‌ಮೂನ ರೂ. 250/-
- ಬೆಂಗಳೂರು ನಗರ ನಿರ್ಮಾಪಕರು ಭಾಗ-2/ಸುರೇಶ್‌ಮೂನ ರೂ. 250/-
- ಬೆಂಗಳೂರು ನಗರ ನಿರ್ಮಾಪಕರು ಭಾಗ-3/ಸುರೇಶ್‌ಮೂನ ರೂ. 250/-
- ರಸಾನುಭವ/ದತ್ತಗುರು ಹೆಗಡೆ ರೂ. 50/-
- ಧ್ವನಿಗೊಂದುಭಾವ/ದತ್ತಗುರು ಹೆಗಡೆ ರೂ. 25/-
- ಬದುಮೀರಿದ ಬದುಕು/ಸುಷ್ಮಾಭರತ್ ರೂ. 150/-
- ವಿಜ್ಞಾನ ಯಾನ/ಟಿ.ಆರ್.ಅನಂತರಾಮು ರೂ. 120/-
- ಕರ್ನಾಟಕದಲ್ಲಿ ಸ್ವಾಮಿ ವಿವೇಕಾನಂದರು/ಸುರೇಶ್‌ಮೂನ ರೂ. 130/-
- ಗಮಕ ಸಾಧಕಿಯರು/ಸುನಾಂದ ಗುರುರಾಜ್ ರೂ. 175/-
- ವರ್ಣಮಾಲೆಯಲ್ಲಿ ವೀರಚರಿತೆ/ರಾಮನಾರಾಯಣ ರೂ. 110/-
- ಒಂದು ಖೈದಿಯ ಮನೋವೇದನೆ/ಬಿ.ಆರ್.ಪ್ರಸಾದ್ ರೂ. 70/-
- ಜನಮೇಜಯನ ನಾಗಯಜ್ಞ/ವಿಜಯ ಸುಬ್ಬರಾಜ್ ರೂ. 80/-
- ಹೃದಯ ಸ್ಪಂದನ/ಜಿ.ಆರ್.ಪರಿಮಳಾರಾವ್ ರೂ. 175/-
- ಗಾಂಧಿ ಕರಾಫ ನೆಹರು ಟೋಪಿ/ಸೋಮಪ್ಪ ರೂ. 60/-
- ಅದ್ವಿತೀಯಾ/ಸುರೇಶ್‌ಮೂನ ರೂ. 120/-
- ನಮ್ಮ ಪರಮವೀರ ಚಕ್ರ ಪುರಸ್ಕೃತರು/ಮಲ್ಲಿಕಾರ್ಜುನ ಜವಳಗಿ ರೂ. 80/-
- **Narendra modi/Anwar Manipaddy** **Rs. 200/-**
- ನರೇಂದ್ರ ಮೋದಿ/ಮಂಜುನಾಥ್ ಭಟ್ ರೂ. 150/-
- ನೇರನೋಟ-2/ದು.ಗು.ಲಕ್ಷ್ಮಣ ರೂ. 150/-
- ಹಿಂದು ಸಂಸ್ಕಾರಗಳು/ಎಂ.ಎ. ಹೆಗಡೆ ರೂ. 180/-

- ಅಮೂಲ್ಯ/ಡಾ|| ಲಕ್ಷ್ಮೀನಾರಾಯಣ ಭಟ್ಟ — ರೂ. 350/-
- ಪ್ರವಾಸೀ ಪದ್ಯಗಳು/ಡಾ|| ದೊಡ್ಡರಂಗೇಗೌಡ — ರೂ. 80/-
- ಅನನ್ಯ/ಡಾ|| ಲಕ್ಷ್ಮೀನಾರಾಯಣ ಭಟ — ರೂ. 350/-
- ಭಿನ್ನ/ದತ್ತಗುರು ಹೆಗಡೆ — ರೂ. 80/-
- ಸೂಜಿ ಮೆಣಸಿನಕಾಯಿ/ದತ್ತಗುರು ಹೆಗಡೆ — ರೂ. 75/-
- ಭಾವಗೀತ ಗಾಯನ/ಪದ್ಮನಾಭ ಉಡುಪ — ರೂ. 160/-
- ಜೀವನ ವೇದ/ಹರಿಹರಪುರ ಶ್ರೀಧರ್ — ರೂ. 160/-
- ನಾರಿ ಅಂಕಣ/ಸತ್ಯವತಿ ರಾಮನಾಥ್ — ರೂ. 90/-
- ವೈವಿಧ್ಯ ಮನಸ್ಸುಗಳು/ಬಿ.ಆರ್. ಪ್ರಸಾದ್ — ರೂ. 130/-
- ಯಾರು ಈ ಧ್ಯಾನ್‌ಚಂದ್/ಎಸ್.ಎಸ್.ನರೇಂದ್ರಕುಮಾರ್ — ರೂ. 75/-
- ಬೆಂಗಳೂರು ಸ್ಮಾರಕಗಳು/ಸುರೇಶ್‌ಮೂನ — ರೂ. 100/-
- ಕಲಾಂ ಸ್ಫೂರ್ತಿ ನುಡಿಗಳು/ಎಂ. ನರಸಿಂಹಮೂರ್ತಿ — ರೂ. 40/-
- ಕ್ರಾಂತಿ ಪರ್ವ/ಬಾಬು ಕೃಷ್ಣಮೂರ್ತಿ — ರೂ. 300/-
- ಅಬ್ಬಿನೀರು/ದತ್ತಗುರು ಹೆಗಡೆ — ರೂ. 30/-
- ಗರ್ಭಗುಡಿ/ಅನುಪಮಾ ಸತೀಶ್ — ರೂ. 100/-
- ಸಪ್ನ ಸಾಗರ/ನಾಗರತ್ನ — ರೂ. 70/-
- ರಾಮಾಯ್ಣ/ರಾಮಾನಾರಾಯಣ — ರೂ. 60/-
- ಆಧ್ಯಾತ್ಮಿಕ ಕಥೆಗಳು/ಹಾರಗದ್ದೆ ಸತ್ಯನಾರಾಯಣ — ರೂ. 170/-
- ಅಮೃತ ನುಡಿಗಳ ಗೊಂಚಲು/ಹಾರಗದ್ದೆ ಸತ್ಯನಾರಾಯಣ — ರೂ. 70/-
- ಅಸಾಮಾನ್ಯ/ಸುರೇಶ್‌ಮೂನ — ರೂ. 170/-
- ಅಧ್ಯಾತ್ಮಿಕ ನುಡಿಮುತ್ತುಗಳು/ಹಾರಗದ್ದೆ ಸತ್ಯನಾರಾಯಣ — ರೂ. 120/-
- ಜಲಪಾತ/ಜಿ.ಆರ್.ಪರಿಮಳಾರಾವ್ — ರೂ. 80/-
- ಧ್ವಜವೆಂದರೆ ಬಟ್ಟೆಯಲ್ಲ/ಜಿ.ಆರ್. ಸಂತೋಷ್ — ರೂ. 300/-
- ನಿತ್ಯಯೋಗ/ವಿರೂಪಾಕ್ಷ ಬೆಳವಾಡಿ — ರೂ. 220/-
- ಪವಿತ್ರ ಗಿಡಮರಗಳು/ಎಸ್. ಸುಂದರರಾಜನ್ — ರೂ. 75/-
- ಶಿಕ್ಷಕರ ಡೈರಿಯಿಂದ/ಬಿ. ಆರ್. ಪ್ರಸಾದ್ — ರೂ. 210/-
- ಹಣಕ್ಲಾಸು/ರಂಗಸ್ವಾಮಿ ಮೂಕನಹಳ್ಳಿ — ರೂ. 120/-
- ನಿದ್ದೆಗೊಂದು ಕಥೆ/ಪ್ರಕಾಶ್ ಕೆ. ನಾಡಿಗ್ — ರೂ. 60/-
- ಬೇರು/ಶಾರದಾ ವಿ. ಮೂರ್ತಿ — ರೂ. 120/-
- ಬಾಲ ಕಥಾ ಪಕ್ಷಿ ಪ್ರಪಂಚ/ಜಿ. ಆರ್. ಪರಿಮಳ ರಾವ್ — ರೂ. 80/-
- ಕನ್ನಡ ಸಾಹಿತ್ಯ ದಿಗ್ಗಜರು/ನರಸಿಂಹಮೂರ್ತಿ ಆನಂದ ರಾಮರಾವ್ — ರೂ. 120/-
- ಹಿಂದುತ್ವ/ಕನ್ನಡಕ್ಕೆ ಜಿ. ಬಿ. ಹರೀಶ — ರೂ. 110/-
- ಸಂಘಂ ಶರಣಂ ಗಚ್ಛಾಮಿ/ ಡಾ. ವಿಶ್ವಾಸ — ರೂ. 130/-
- ನಾನೇನು? / ದತ್ತಗುರು ಹೆಗಡೆ — ರೂ. 60/-



ಎನ್. ಆನಂದರಾಮರಾವ್

ಬೆಂಗಳೂರಿನ ಭಾರತ್ ಎಲೆಕ್ಟ್ರಾನಿಕ್ಸ್ ಸಂಸ್ಥೆಯಲ್ಲಿ ಲೆಕ್ಕಾಧಿಕಾರಿಗಳಾಗಿ ನಿವೃತ್ತರಾಗಿರುವ ಶ್ರೀ ಎನ್. ಆನಂದರಾಮರಾವ್ ರವರು ಉತ್ತಮ ಲೇಖಕರು. ಅವರು ಬರೆದಿರುವ, ವಿಶೇಷವಾಗಿ ಹಣಕಾಸಿಗೆ ಸಂಬಂಧಪಟ್ಟಂತಹ, ಹಲವಾರು ಲೇಖನಗಳು ನಾಡಿನ ಪ್ರಸಿದ್ಧ ಪತ್ರಿಕೆಗಳಲ್ಲಿ ಪ್ರಕಟಾಗಿ, ಓದುಗರ ಮೆಚ್ಚುಗೆ ಗಳಿಸಿವೆ. ನಿವೃತ್ತರಾಗಲಿರುವ ಉದ್ಯೋಗಿಗಳಿಗೆ ಹಲವಾರು ಉದ್ಯಮಗಳಲ್ಲಿ ಇವರು ನೀಡುತ್ತಿರುವ ಉಪನ್ಯಾಸಗಳು, ಸಲಹೆಗಳು ಉತ್ತಮ ಮಾರ್ಗದರ್ಶಿಯಾಗಿದೆ. ಇವರು ಬರೆದ ಅಂಕಣಮಾಲೆ "ನಿವೃತ್ತಿ-ನೆಮ್ಮದಿ" ಉದಯವಾಣಿ ಪತ್ರಿಕೆಯಲ್ಲಿ 52 ವಾರಗಳು ಪ್ರಕಟವಾಗಿರುವುದೇ ಅಲ್ಲದೆ ಪುಸ್ತಕವಾಗಿಯೂ ಪ್ರಕಟವಾಗಿ ಮೂರು ಮುದ್ರಣಗಳನ್ನು ಕಂಡಿವೆ.

"ಇಟ್ಟ ಹೆಜ್ಜೆ ಪಟ್ಟ ಶ್ರಮ", "ಕನ್ನಡ ಚಿತ್ರರಂಗ ಚಳುವಳಿ", "ನಿವೃತ್ತಿಯ ಚಿಂತೆ ಏಕೆ?" "ನಟರತ್ನ ಕೆ.ಎಸ್. ಅಶ್ವತ್ಥ್" "ನಿವೃತ್ತಿ ನೆಮ್ಮದಿ" ಧೀಮಂತ ಕನ್ನಡಿಗರು". "ಕನ್ನಡ ವೀರ ಸೇನಾನಿ ಮ ರಾಮಮೂರ್ತಿ" ಮುಂತಾದುವು ಇವರು ಬರೆದಿರುವ ಕೆಲವು ಪುಸ್ತಕಗಳು.



ಎಂ.ನರಸಿಂಹಮೂರ್ತಿ

ಪರಿಸರ ಪ್ರೇಮಿ, ಚಿತ್ರಕಾರರು, ಒಳ್ಳೆಯ ಗದ್ಯ ಬರಹಗಾರರು, ಕರ್ನಾಟಕದ ಕುಸ್ತಿ ಪಟುಗಳನ್ನೆಲ್ಲಾ ಸಂದರ್ಶಿಸಿ ವಿಪುಲ್ಲ ಮಾಹಿತಿ ಕಲೆಹಾಕಿ, ಪ್ರಾಚೀನ ಕಲೆಯಾದ ಕುಸ್ತಿಯನ್ನು ಕುರಿತು ಬರೆದಿರುವ ಕೃತಿ "ಮಲ್ಲ ಪ್ರಪಂಚ". ಬಹು ಜನಪ್ರಿಯವಾಗಿದ್ದು, ಇನ್ನೂ ಅನೇಕ ಕೃತಿಗಳು ರಚಿಸಿದ್ದಾರೆ. ಅನೇಕ ಸಾಕ್ಷ್ಯಚಿತ್ರಗಳ ನಿರ್ಮಾಣ ಮಾಡಿದ್ದಾರೆ ನರಸಿಂಹಮೂರ್ತಿರವರು.

ಸಮೃದ್ಧ ಸಾಹಿತ್ಯ
ನಂ.121, ಮೊದಲನೇ ಮಹಡಿ, 2ನೇ ಮುಖ್ಯರಸ್ತೆ,
11ನೇ ಬಿ ಅಡ್ಡರಸ್ತೆ, ವಿಠಲನಗರ,
ಬೆಂಗಳೂರು - 560 026
ಮೊ: 9880773027
samrudhasahitya@gmail.com
www.samrudhasahitya.com

120/-